ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಮುಖ್ಯಮಂತ್ರಿಗಳವರಿಗೆ ಬೇಕಾದಷ್ಟು ಕೆಲಸವಿರುತ್ತದೆ. ನಾವುಗಳು ಅದನ್ನು ಅರ್ಥಮಾಡಿಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳೆ, ತಾವು ಬರುವುದಕ್ಕಿಂತ ಮುಂಚೆ ನಾವುಗಳು ಒತ್ತಾಯ ಮಾಡಿದ್ದಕ್ಕೆ ಮಾನ್ಯ ಹಿಂಡಸಗೇರಿಯವರು ಮುಂದಿನ ಸಾಲಿನಲ್ಲಿ ಕುಳಿತಿದ್ದರು. ನಾವು ಹೇಳಿದ ಮೇಲೆ ಅವರು ಹೋದರು. ಕೊನೆಯಪಕ್ಷ ಮುಂದಿನ ಸಾಲಿನ ಇತರೆ ಮಂತ್ರಿಗಳು ಇಲ್ಲಿ ಬಂದು ಕುಳಿತು ಕೊಳ್ಳುವುದಕ್ಕೆ ಏನು ತೊಂದರೆ? ವಿಧಾನಪರಿಷತ್ತಿನಲ್ಲಿದ್ದಾರೋ ಅಥವಾ ಬೇರೆ ಕಡೆ ಎಲ್ಲಾದರೂ ಹೋಗುತ್ತರೋ?

ಅಧ್ಯಕ್ಷರು : ಮಾನ್ಯ ಹಿಂಡಸಗೇರಿಯವರು ಮುಂದಿನ ಸಾಲಿನಲ್ಲಿ ಬಂದು ಕುಳಿತು ಕೊಳ್ಳಬಹುದು. ಆದರೆ ಮಾತನಾಡಬೇಕಾದಂತಹ ಸಂದರ್ಭದಲ್ಲಿ ಅವರು ತಮ್ಮ ಸ್ವಸ್ಥಾನಕ್ಕೆ ಹೋಗಬೇಕಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ : ಮುಂದಿನ ಸಾಲಿನಲ್ಲಿ ಇರಬೇಕಾದಂತಹ ಮಂತ್ರಿಗಳು ಇಲ್ಲ, ಇದರ ಜೊತೆಗೆ ಮುಂದಿನ ಸಾಲಿನಲ್ಲಿ ಇರಬೇಕಾದಂತಹ ಅಧಿಕಾರಿಗಳು ಯಾರು ಬಂದಿಲ್ಲ. ಹೀಗಾದರೆ ಹೇಗೆ?

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರುಗಳು ಮಾತನಾಡತಕ್ಕಂತಹ ಸಂದರ್ಭದಲ್ಲಿ ಅಧಿಕಾರಿಗಳು ಇಲ್ಲಿ ಇರಬೇಕಾಗುತ್ತದೆ. ಏಕೆಂದರೆ, ಮಾನ್ಯ ಸದಸ್ಯರುಗಳು ಏನು ಮಾತನಾಡುತ್ತಾರೆ ಎಂಬುದನ್ನು ಅವರು ಗುರುತು ಹಾಕಿಕೊಳ್ಳಬೇಕು. ಜೊತೆಗೆ ಮಾನ್ಯ ಸದಸ್ಯರುಗಳು ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಮಾತನಾಡುವುದರಿಂದ ಎಲ್ಲಾ ಅಧಿಕಾರಿಗಳು ಇಲ್ಲಿ ಇದ್ದು ಸದಸ್ಯರುಗಳು ಏನು ಮಾತನಾಡುತ್ತಾರೆ, ಅದನ್ನು ಅವರು ಗುರುತುಹಾಕಿಕೊಳ್ಳಬೇಕಾಗುತ್ತದೆ.

ಆದಕಾರಣ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್(ಐ) ಶಾಸಕಾಂಗ ಪಕ್ಷವು ಮೇಲ್ಕಾಣಿಸಿದ ವಿಧಾನಸಭಾ ಸದಸ್ಯರನ್ನು ತಮ್ಮ ಶಾಸಕಾಂಗ ಪಕ್ಷದ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಪರಿಗಣಿಸಬೇಕೆಂದು ಕೋರಿರುತ್ತಾರೆ.

ಅದರಂತೆ ಮೇಲ್ಕಾಣಿಸಿದ ಸದಸ್ಯರನ್ನು ದಿನಾಂಕ : 28-03-2000ದಿಂದ ಜಾರಿಗೆ ಬರುವಂತೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್(ಐ) ಶಾಸಕಾಂಗ ಪಕ್ಷದ ಸದಸ್ಯರೆಂದು ಪರಿಗಣಿಸಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು

2000-2001 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

+ ಶ್ರೀ ಜಗದೀಶ್ ಶೆಟ್ಟರ್ : (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ತಮ್ಮ ಚೊಚ್ಚಲ ಬಜೆಟನ್ನು ಅದು ಹೊಸ ಸಹಸ್ರಮಾನದ ಈವೊಂದು ಸಂದರ್ಭದಲ್ಲಿ ಮಂಡನೆ ಮಾಡಿದ್ದಾರೆ. ಈವೊಂದು ಬಜೆಟ್‌ನ ವಿವರಗಳಿಗೆ ಹೋಗುವುದಕ್ಕೆ ಮುಂಚೆ ಕೆಲವೊಂದು ವಿಷಯ ಪ್ರಸ್ತಾಪ ಮಾಡತಕ್ಕದ್ದು ಇದೆ. ನಾಳೆ ರಾಜ್ಯಸಭೆಯ ನಾಲ್ಕು

ಸ್ಥಾನಗಳಿಗೆ ವಿಧಾನಸಭೆಯಿಂದ ಆಯ್ಕೆಯಾಗಲು ಚುನಾವಣೆ ನಡೆಯುತ್ತಿದೆ. ನಿನ್ನೆ ಬಜೆಟ್ ಮಂಡನೆ ಮಾಡಿದ್ದಾರೆ. ಅಂದರೆ ಎಲೆಕ್ಷನ್ ನಡೆಯುವಂತಹ ಸಂದರ್ಭದಲ್ಲಿ ಈವೊಂದು ಬಜೆಟ್ ಮಂಡನೆ ಹಾಗೂ ಕೆಲವೊಂದು ವಿಷಯಗಳ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ತಾಂತ್ರಿಕವಾಗಿ ನಾವು ನೋಡಿದರೆ ಬಹುಶ: ಚುನಾವಣೆ ನಡೆಯುವಂತಹ ಸಂದರ್ಭದಲ್ಲಿ ಎಲೆಕ್ಷನ್ ಕೋಡ್ ಆಫ್ ಕಂಡೆಕ್ಟ್ ಇರುವಂತಹ ಸಂದರ್ಭದಲ್ಲಿ ಈ ಬಜೆಟ್ ಮುಖಾಂತರ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುವುದು ಎಲೆಕ್ಷನ್ ಕೋಡ್ ಆಫ್ ಕಂಡೆಕ್ಟ್ ಪ್ರಕಾರ ಇದರಲ್ಲಿ ಕೆಲವು ತಾಂತ್ರಿಕ ತೊಂದರೆಗಳು ಇದೆ. ಅದರ ವಿವರಕ್ಕೆ ನಾನು ಹೋಗುವುದಿಲ್ಲ. ಅದು ಎಷ್ಟೊಂದು ಪ್ರಸ್ತುತ ಎನ್ನುವುದನ್ನು ತಮ್ಮ ಗಮನಕ್ಕೆ ಮಾತ್ರ ತರುತ್ತಿದ್ದೇನೆ, ಅದು ಎಲೆಕ್ಷನ್ ಕಮೀಷನ್‌ಗೆ ಬಿಟ್ಟಂತಹ ವಿಷಯ. ಬಹಳ ದೀರ್ಘವಾಗಿ ಚರ್ಚೆ ಮಾಡಿದರೆ, ಬಹುಶ: ಅದು ನಿಜವಾಗಿ ಎಲೆಕ್ಷನ್ ಕೋಡ್ ಆಫ್ ಕಂಡಕ್ಟ್‌ಗೆ ವಯಲೇಷನ್ ಆಗುತ್ತದೆ. ಅದರ ಡೀಟೈಲ್ಸ್ ನನ್ನ ಕಡೆಗೆ ಇದೆ. ಪಬ್ಲಿಕ್ ರೆಪ್ರಸೆಂಟೇಟೀವ್ ಆ್ಯಕ್ಟ್ ಇರಬಹುದು, ಸಂವಿಧಾನದ ಪ್ರಾವಿಜನ್ ಅದನ್ನೆಲ್ಲ ನಾನು ನೋಡಿದ್ದೇನೆ. ಅವುಗಳನ್ನು ನೋಡಿದರೆ ಬಹಳ ದೀರ್ಘವಾಗಿ ಚರ್ಚೆ ಮಾಡಿದರೆ ಬಹುಶ: ಅದು ಆವೊಂದು ಹಂತಕ್ಕೆ ಹೋಗುತ್ತದೆ. ಆದರೆ ಅದನ್ನು ಎಲೆಕ್ಷನ್ ಕಮೀಷನ್‌ದವರು ಗಮನಿಸಲಿ, ಅದರ ಬಗ್ಗೆ ನಾನು ಹೆಚ್ಚಿನ ಚರ್ಚೆಗೆ ಹೋಗುವುದಿಲ್ಲ. ಇವತ್ತು ಬಜೆಟ್ ಮಂಡನೆಯಾಗಿದೆ, ಅದರ ಬಗ್ಗೆ ನಾವು ಹೆಚ್ಚಿನ ಚರ್ಚೆ ಮಾಡುವಂತಹದ್ದು ಇದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರಥಮ ಬಜೆಟನ್ನು ಮಂಡನೆ ಮಾಡಿರತಕ್ಕ ಸಂದರ್ಭದಲ್ಲಿ ಇದನ್ನು ಗ್ಲಾನ್ಸ್ ಮಾಡಿ ನೋಡಿದಾಗ ಶುರುವಿನಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನೋಡಿದ ತಕ್ಷಣ ಏನೋ ಕೆಲವೊಂದು ಹೊಸ ವಿಷಯಗಳನ್ನು ಇವರು ಕೊಡುತ್ತಿದ್ದಾರೆ ಕರ್ನಾಟಕದ ಜನತೆಗೆ ಅದರಲ್ಲೂ ಸಾಮಾನ್ಯ ವರ್ಗದ ಜನ ಮಧ್ಯಮವರ್ಗದ ಜನ ಬಡವರು ರೈತರು ಇವರ ಪರವಾಗಿ ಒಂದಿಷ್ಟು ವಿಷಯಗಳು ಇರುತ್ತವೆ, ಏನೋ ಒಂದಿಷ್ಟು ಅದರಲ್ಲಿ ಪ್ರಾವಿಜನ್ ಮಾಡಿದ್ದಾರೆನ್ನುವಂತಹದ್ದು ನಮ್ಮ ಕಲ್ಪನೆಯಾಗಿತ್ತು. ನಾವು ಮುಂದೆ ಓದಿಕೊಂಡು ಹೋದಹಾಗೆ ಬಹುಶ: ಮತ್ತೆ ಯಾಂತ್ರಿಕವಾಗಿ ಪ್ರತಿ ವರ್ಷ ಸರ್ಕಾರಗಳು ಏನೊಂದು ಬಜೆಟನ್ನು ಮಂಡನೆ ಮಾಡಬೇಕು, ಕಮರ್ಷಿಯಲ್ ಟ್ಯಾಕ್ಸ್ ಇರಬಹುದು ಸೇಲ್ಸ್‌ಟ್ಯಾಕ್ಸ್ ಇರಬುಹುದು ಅದರಲ್ಲಿ ಕೆಲವು ಮಟ್ಟಿಗೆ ಪರಿಷ್ಕರಣೆ ಮಾಡುವಂತಹದ್ದು ಇವುಗಳನ್ನು ಬಿಟ್ಟು ಹೊಸದಾಗಿ ಏನಾದರೂ ಘೋಷಣೆಗಳನ್ನು ಅಥವಾ ಹೊಸ ಯೋಜನೆಗಳನ್ನು ಅನುಷ್ಠಾನ ಮಾಡುವ ರೀತಿಯಲ್ಲಿ ಕೆಲವು ವಿಷಯ ಪ್ರಸ್ತಾಪ ಮಾಡುತ್ತಾರೆ ಎನ್ನುವಂತಹದ್ದು ಇತ್ತು. ಅದು ಏಕೋ ಆಗಲಿಲ್ಲ. ನಾವು ಬಹಳಷ್ಟು ನಿರೀಕ್ಷೆಯನ್ನು ಮಾಡಿದ್ದೆವು. ಏಕೆಂದರೆ ಮೊನ್ನೆ ಈ ಅಧಿವೇಶನದ ಪ್ರಾರಂಭದ ಹಂತದಲ್ಲಿ ಮಾನ್ಯ ರಾಜ್ಯಪಾಲರು ಭಾಷಣವನ್ನು ಮಾಡಿದರು. ಅವರ ಭಾಷಣದಲ್ಲಿ ಸರ್ಕಾರದ ನೀತಿ ಅವರ ಒಂದು ದೂರದೃಷ್ಟಿತ್ವ ಮುಂದೆ ಕೈಗೊಳ್ಳುವ ಕಾರ್ಯಕ್ರಮದ ಪಾಲಿಸಿ ಇದರ ಬಗ್ಗೆ ಏನೋ ಒಂದಿಷ್ಟು ರಾಜ್ಯಪಾಲರ ಭಾಷಣದಲ್ಲಿ ಬರಬಹುದೆಂದು ನಾವು ತಿಳಿದು ಕೊಂಡಿದ್ದೆವು. ಅದು ಬರಲಿಲ್ಲ, ಅದರ ಬಗ್ಗೆ ಹೆಚ್ಚಿನ ಚರ್ಚೆನೂ ಆಗಲಿಲ್ಲ. ವಿರೋಧ ಪಕ್ಷದ ವತಿಯಿಂದ ನಾವು ಒಬ್ಬರೂ ಭಾಷಣವನ್ನು ಇನ್ನು ಪ್ರಾರಂಭ

ಮಾಡಿಲ್ಲ. ರಾಜ್ಯಪಾಲರ ಭಾಷಣದ ಬಗ್ಗೆ ನಾವು ಇನ್ನು ಚರ್ಚೆ ಮಾಡಿಲ್ಲ. ಈ ಹಂತದಲ್ಲಿ ಮೊನ್ನೆ 27ನೇ ತಾರೀಖು ಬಜೆಟ್ ಮಂಡನೆಯಾಯಿತು. ಅದರ ಬಗ್ಗೆ ಇವತ್ತು ನಾಳೆ ಚರ್ಚೆ ಮಾಡೋಣವೆಂದು ಒಂದು ಹಂತಕ್ಕೆ ಬಂದಿದ್ದೇವೆ. ಆದರೆ ನಾವು ಹೇಳುವುದೇನೆಂದರೆ, ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ, ಕಳೆದ ಹಿಂದಿನ ಎಲ್ಲ ವರ್ಷಗಳಲ್ಲಿ ಸಭೆ ನಡೆದದ್ದನ್ನು ಕೂಲಂಕಷವಾಗಿ ಸ್ಟಡಿ ಮಾಡಿ ನೋಡಿದರೆ, ಸ್ವಲ್ಪಮಟ್ಟಿಗೆ ಚರ್ಚೆಗೆ ಹೆಚ್ಚು ಅವಕಾಶ ಬೇಕಾಗುತ್ತದೆ. ಅದು ಎಲ್ಲಾ ಸದಸ್ಯರಿಗೂ ಬೇಕಾಗುತ್ತದೆ. ಮಾನ್ಯ ಕಾನೂನು ಸಚಿವರು ಮೊದಲನೆಯ ಅಧಿವೇಶನದಲ್ಲಿ ಹೇಳಿದರು. ನಾವು ಈ ಸಲ ನೂರು ದಿವಸಗಳ ಅಧಿವೇಶನ ನಡೆಸುತ್ತೇವೆಂದು. ಆದರೆ ಈಗಿರುವಂತಹ ವಾತಾವರಣ ಈಗಿನ ಬಿಸಿನೆಸ್ ನೋಡಿದರೆ ಬಹುಶ: ವರ್ಷದಲ್ಲಿ ನೂರು ದಿವಸಗಳ ಅಧಿವೇಶನ ಮಾಡುತ್ತೇವೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ. ಜನವರಿ, ಫೆಬ್ರವರಿ, ಮಾರ್ಚಿ ಮೂರು ತಿಂಗಳಾಯಿತು. ಜನವರಿಯಲ್ಲಿ ಅಧಿವೇಶನ ಕರೆಯಬಹುದಾಗಿತ್ತು ಕರೆಯಲಿಲ್ಲ. ಇದೇ ತಿಂಗಳು ಮಾರ್ಚಿ 3ನೇ ತಾರೀಖು ಕರೆಯುತ್ತೇವೆಂದರು 6ನೇ ತಾರೀಖು ಅಂದರು ಹೀಗೆ ಅದನ್ನು ಮುಂದೆ ಹಾಕಿಕೊಳ್ಳುತ್ತಾ ಹೋಗಿ 15ನೇ ತಾರೀಖಿಗೆ ಅಧಿವೇಶನ ಪ್ರಾರಂಭವಾಯಿತು. ಅಂದರೆ 15 ದಿವಸಗಳ ಹಿಂದೆ ಅಥವ ಒಂದು ವಾರದ ಮುಂಚೆ ಅಧಿವೇಶನ ಕರೆಯಬಹುದಾಗಿತ್ತು. ಅದು ಆಗಲಿಲ್ಲ. ಏಕೆ ಸಮಯಾವಕಾಶ ಕೊಡುತ್ತಿಲ್ಲ? ಇನ್ನೊಂದು ಬಹು ಮುಖ್ಯವಾಗಿ ಹೇಳುವಂತಹದ್ದು ಪ್ರತಿಯೊಂದು ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಒಬ್ಬ ಸದಸ್ಯರು ಪ್ರಶ್ನೆ ಕೇಳಲಿಕ್ಕೆ 15 ನಿಮಿಷ ಅವಕಾಶ ಕೊಡಬೇಕಾಗುತ್ತದೆ. ಅದು ಆಗುತ್ತಿಲ್ಲ. ಪಾಯಿಂಟ್ ಆಫ್ ಸ್ಟಾರ್ಟಿಂಗ್ ಡೇಸ್ ನಮಗೆ ಇವತ್ತು ಅವಕಾಶ ಸಿಗುತ್ತಿಲ್ಲ. ಈ ರೀತಿಯ ಒಂದು ಗೊಂದಲಮಯ ಪರಿಸ್ಥಿತಿ ಏಕೆ ಉಂಟಾಯಿತು? ಇದರ ಬಗ್ಗೆ ಮಾನ್ಯ ಅಧ್ಯಕ್ಷರು ಮಾನ್ಯ ಸಭಾನಾಯಕರು ಇದರ ಬಗ್ಗೆ ಅಲ್ಲದೆ ಮಾನ್ಯ ಕಾನೂನು ಸಚಿವರು ಇದರ ಬಗ್ಗೆ ಬಹಳ ಗಂಭೀರವಾಗಿ ಪರಿಗಣಿಸಬೇಕು. ಇದರ ಬಗ್ಗೆ ಹೆಚ್ಚಿನ ಚಿಂತನೆ ಮಾಡಬೇಕಾಗಿದೆ. ಏಕೆಂದರೆ ನಾನು ಮೊದಲ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಸರ್ಕಾರ ಕೈಗೊಳ್ಳುವಂತಹ ರಚನಾತ್ಮಕ ಕೆಲಸಗಳಿಗೆ ನಮ್ಮ ಸಹಕಾರ ಇದೆ. ಅಧಿವೇಶನದ ಸಂದರ್ಭದಲ್ಲಿ ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈವೊಂದು ಸದನಕ್ಕೆ ಬಹಳಷ್ಟು ಗೌರವವಿದೆ. ಈ ಸದನದಲ್ಲಿ ನಾವು ಮಾತನಾಡುವಂತಹದ್ದು ಮತ್ತು ಚಿಂತನೆ ಮಾಡುವಂತಹದ್ದು ಅದು ನೇರವಾಗಿ ಸಾಮಾನ್ಯ ಮನುಷ್ಯನಿಗೆ ಹೋಗಿ ಮುಟ್ಟುತ್ತದೆ. ಇಡೀ ಸಮಾಜ ನಮ್ಮನ್ನು ನೋಡುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ಇಲ್ಲಿ ರಚನಾತ್ಮಕ ಚಟುವಟಿಕೆಗಳು ಮತ್ತು ರಚನಾತ್ಮಕ ಚರ್ಚೆ ವೈಚಾರಿಕ ಚರ್ಚೆಗಳು ನಡೆಯಬೇಕೆನ್ನುವಂತಹದ್ದು ನಮ್ಮ ಉದ್ದೇಶವಿದೆ. ಆದರೆ ಈಗಿನ ಒಂದು ಟೆಂಡೆನ್ಸಿ ನೋಡಿದರೆ ಬಹುಶ: ಆ ಹಂತಕ್ಕೆ ನಾವು ಹೋಗುತ್ತಿಲ್ಲವೆನ್ನುವಂತಹದ್ದು ಒಂದು ವೇದನೆ ನನಗೆ ಆಗುತ್ತಿದೆ. ಇದರ ಬಗ್ಗೆ ತಾವು ಪರಿಗಣಿಸಬೇಕೆಂದು ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ನಮ್ಮ ಸರ್ಕಾರ ಬಂದು ನಾಲ್ಕೈದು ತಿಂಗಳಾಯಿತು ಇನ್ನು ಭರವಸೆ ಆಶ್ವಾಸನೆಗಳನ್ನು ನೀಡುವ ಕಾಲ ಮುಗಿಯಿತು. ಅನುಷ್ಠಾನ ಮಾಡುವಂತಹ ಕಾಲ ಪ್ರಾರಂಭಮಾಡಿದ್ದೇವೆಂದು. ಬಹುಶ: ಈ ಮಾತನ್ನು ಏಕೆ ಹೇಳಿದರು ಎನ್ನುವ ಬಗ್ಗೆ ಕಳೆದ ನಾಲ್ಕೈದು ತಿಂಗಳಿಂದ ನಾವು ನೋಡುತ್ತಿದ್ದೇವೆ, ಯಾವುದೇ

ಒಂದು ಸಮಸ್ಯೆ ಬಂದಾಗ ಒಂದು ಆಯೋಗವನ್ನು ಮಾಡುವಂತಹದ್ದು ಟಾಸ್ಕ್‌ಫೋರ್ಸ್ ಕಮಿಟಿ ಮಾಡುವುದು. ಇದನ್ನೆಲ್ಲ ನೋಡುತ್ತಿದ್ದೇವೆ. ಆಶ್ವಾಸನೆಗಳ ಮೇಲೆ ಆಶ್ವಾಸನೆಗಳು ಘೋಷಣೆಗಳ ಮೇಲೆ ಘೋಷಣೆಗಳನ್ನು ನಾವು ನೋಡುತ್ತಿದ್ದೇವೆ. ಅದನ್ನು ನೋಡಿಕೊಂಡು ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿರಬಹುದೆಂದು ನನಗನ್ನಿಸಿತ್ತದೆ. ನಮ್ಮ ಬಜೆಟ್ ಯಾವರೀತಿ ಇರಬೇಕೆನ್ನುವ ಬಗ್ಗೆ ಅವರು ಮಾತುಗಳನ್ನು ಹೇಳಿದ್ದಾರೆ. ಮುಂಗಡಪತ್ರವೆಂದರೆ ಅಧಿಕಾರದಲ್ಲಿರುವ ಸರ್ಕಾರಕ್ಕೆ ತನ್ನ ಆರ್ಥಿಕಸೂಚಿ ಸಾಮಾಜಿಕ ಆದ್ಯತೆ ಮತ್ತು ಒಳನೋಟಗಳನ್ನು ನಿಚ್ಚಳಗೊಳಿಸಲು ಸಿಕ್ಕಿರುವ ಅಪೂರ್ವ ಅವಕಾಶ ಅದನ್ನೆ ನಾನು ಇಲ್ಲಿ ಸಂಕ್ಷಿಪ್ತವಾಗಿ ಹೇಳಲು ಉದ್ದೇಶಿಸಿದ್ದೇನೆ. ಈ ಮಾತುಗಳನ್ನು ಅವರು ಹೇಳಿದ್ದಾರೆ. ಅದರ ಜೊತೆಗೆ ಹಿಂದೆ ಈ ರಾಜ್ಯದ ಮುಖ್ಯಮಂತ್ರಿಗಳಾದವರು ಸಾಮಾಜಿಕ ಪರಿವರ್ತನೆ ಮತ್ತು ಸಾಮಾಜಿಕ ಬದಲಾವಣೆಗಳನ್ನು ಸುಧಾರಣೆಗಳನ್ನು ತಂದಂತಹ ಸಮಾಜದ ಬಗ್ಗೆ ಹೆಚ್ಚು ಕಳಕಳಿ ದಲಿತರ ಬಗ್ಗೆ ಹಿಂದುಳಿದ ವರ್ಗದ ಬಗ್ಗೆ ಹೆಚ್ಚು ಕಳಕಳಿ ಇದ್ದಂತಹ ಮಾನ್ಯ ದೇವರಾಜ ಅರಸ್‌ರವರ ಮಾತುಗಳು ನನಗೆ ನೆನಪು ಬರುತ್ತದೆ. ಅವರು ಮುಂಗಡ ಪತ್ರದ ಬಗ್ಗೆ ಒಂದು ಮಾತನ್ನು ಹೇಳಿದರು. ಮುಂಗಡಪತ್ರ ಬಡವರ ದೀನದಲಿತರ ಧ್ವನಿಯನ್ನು ಪ್ರತಿಧ್ವನಿಸಬೇಕು ಇದು ಸಾಮಾಜಿಕ ಪರಿವರ್ತನೆಯ ಹರಿಕಾರನ ಒಂದು ಆಸೆಯಾಗಿರಬೇಕು. ಈ ಮಾತನ್ನು ಹೇಳಿದ್ದಾರೆ. ಅಂದರೆ ಬಜೆಟ್ ಸರ್ಕಾರದ ವ್ಯವಹಾರದ ಎಷ್ಟು ಬಂತು ಎಷ್ಟು ಹೋಯಿತು. ಎಷ್ಟಕ್ಕೆ ನಾವು ನಿಗದಿ ಮಾಡಬೇಕು ಎನ್ನುವುದಕ್ಕಿಂತ ಈ ಬಜೆಟ್ ಮುಖಾಂತರ ನಾವು ಸಾಮಾಜದಲ್ಲಿರುವಂತಹ ದುರ್ಬಲವರ್ಗ ದಲಿತವರ್ಗ ಮತ್ತು ತಿಳಿತಕ್ಕೆ ಶೋಷಣೆಗೆ ಒಳಗಾದಂತಹ ವರ್ಗದ ಜನತೆಗೆ ಒಂದು ಆಶಾಕಿರಣವಾಗುವಂತಹ ರೀತಿಯಲ್ಲಿ ಬಜೆಟನ್ನು ನಿರ್ಮಾಣ ಮಾಡಬೇಕೆನ್ನುವ ಕಳಕಳಿ ಮಾನ್ಯ ದೇವರಾಜ ಅರಸರಿಗೆ ಇತ್ತು. ಆವೊಂದು ವಾಕ್ಯಗಳನ್ನು ನೋಡಿದರೆ ಇವತ್ತಿನ ಬಜೆಟನ್ನು ನೋಡಿದರೆ ಬಹುಶ: ಆವೊಂದು ಕಳಕಳಿ ಮಧ್ಯಮವರ್ಗದವರಿಗೆ ಕೆಳಮಟ್ಟದ ವರ್ಗದವರಿಗೆ ಹೋಗುವಂತಹದ್ದು ಇದರ ಪ್ರತಿಫಲ ಮುಟ್ಟುವಂತಹದ್ದು ಇದರಲ್ಲಿ ನನಗೆ ಏನೂ ಕಾಣುತ್ತಿಲ್ಲ ಎನ್ನವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇಲ್ಲಿರುವ ಕೆಲವು ಘೋಷಣೆಗಳನ್ನು ನೋಡಿದರೆ, ಬಹುಶ: ಮಾನ್ಯ ಮುಖ್ಯಮಂತ್ರಿಗಳು ಏನು ಐದು ತಿಂಗಳಿನಿಂದ ಕೆಲವೊಂದು ಘೋಷಣೆಗಳನ್ನು ಹೇಳಿಕೆಗಳನ್ನು ಮಾಡಿಕೊಂಡು ಬಂದಿದ್ದಾರೆ ಅದನ್ನೇ ಮತ್ತೊಂದು ಪುಸ್ತಕದ ರೂಪದಲ್ಲಿ ಈ ಬಜೆಟನ್ನು ಮಂಡನೆ ಮಾಡಿದ್ದಾರೆ ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತಿದ್ದೇನೆ. ನಮ್ಮ ಕಡೆಗೆ ಮೂರು ನಾಮ ಹಾಕಿದರು ಎಂದು ಹೇಳುತ್ತೇನೆ. ತಿರುಪತಿಗೆ ಹೋಗಿ ಬಂದವರು ಮೂರು ನಾಮ ಹಾಕಿಸಿಕೊಳ್ಳುತ್ತಾರೆ. ಬಜೆಟ್ ಪುಸ್ತಕದ ಪುಟಗಳನ್ನು ನಾವು ಎಣಿಸಿದರೆ 111 ಇದೆ. ಅಂದರೆ ಅದರ ಅರ್ಥ ಮೂರುನಾಮ. ಇದರ ಮುಖಾಂತರ ಕರ್ನಾಟಕ ರಾಜ್ಯದ ಜನತೆಗೆ ಮಾನ್ಯ ಮುಖ್ಯಮಂತ್ರಿಗಳು ಮೋಡಿ ಮಾಡಿ ಮೂರುನಾಮಗಳನ್ನು ಹಾಕಲಿಕ್ಕೆ ಹೊರಟಿದ್ದಾರೆಂದು ನನಗನ್ನಿಸುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್. : (ಸಹಕಾರ ಸಚಿವರು) ನಂಬರ್ ಮೂರು ಬಹಳ ಲಕ್ಕಿ ಅದು ಎಲ್ಲಿಗೆ ಬೇಕಾದರೂ ಸೇರುತ್ತದೆ. ಮೂರು, ಆರು, ಒಂಭತ್ತು, ಹನ್ನೆರಡು ಹೀಗೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾಗಿ ಪ್ರಸ್ತಾಪ ಮಾಡುವುದು 2000-2001 ನೇ ಸಾಲಿನ ಬಜೆಟ್‌ನಲ್ಲಿ ರೆವಿನ್ಯೂ ಡೆಫಿಸಿಟ್ 1942.29 ಕೋಟಿ ರೂಪಾಯಿಗಳು. ಇಷ್ಟು ನಿರೀಕ್ಷೆಯಿದೆ. ಅಂದರೆ ಟೋಟಲ್ ಡೆಫಿಸಿಟ್ 290.70 ಕೋಟಿ ರೂಪಾಯಿಗಳಾಗುತ್ತದೆ. ಎನ್ನುವುದು ಇದೆ. ಆಮೇಲೆ ಕ್ಯಾಪಿಟಲ್ ರಿಸಿಟ್ಸ್ ಮತ್ತು ಅಭಿವೃದ್ಧಿಯೇತರ ವೆಚ್ಚ ಇದರ ಮುಖಾಂತರ ನಾವು ತುಂಬಬೇಕಾಗುತ್ತದೆ. ಆದರೆ ಕ್ಯಾಪಿಟಲ್ ರಿಸಿಟ್ಸ್ 1,540 ಕೋಟಿ ರೂಪಾಯಿಗಳು. ಹೀಗಾಗಿ ಇವತ್ತು ಈ ಒಂದು ರಾಜಸ್ವ ಕೊರತೆಯನ್ನು ತುಂಬುವುದಕ್ಕೆ ಬಳಸಬೇಕಾದ ಅಭಿವೃದ್ಧಿಗಾಗಿ ಹಣ ಲಭ್ಯವಾಗುವುದೇ ಇಲ್ಲ. ಈ ಕೊರತೆಯನ್ನು ತುಂಬಬೇಕಾಗುತ್ತದೆ. ಕ್ಯಾಪಿಟಲ್ ರಿಸಿಟ್ಸ್‌ನಿಂದ ಇದು ಸಾಧ್ಯವಾಗುವುದಿಲ್ಲ. ಹೀಗಾಗಿ ಇದೊಂದು ಕೊರತೆ ಎನ್ನುವಂಥಾದ್ದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ವಿಚಾರ ಎಂದರೆ ಹಿಂದೆ 1999-2000ನೇ ಸಾಲಿನ ಬಜೆಟ್‌ನ್ನು ಮಂಡನೆ ಮಾಡಿದಂಥ ಹಿಂದಿನ ಅರ್ಥಸಚಿವರು 1400 ಕೋಟಿ ರೂಪಾಯಿಗಳ ಕೊರತೆಯಾಗಬಹುದು ಎಂದು ಹೇಳಿದ್ದರು. ಆಮೇಲೆ ಪರಿಷ್ಕೃತ ಅಂದಾಜಿನಂತೆ ಹೋದಸಲ 1570 ಕೋಟಿ ರೂಪಾಯಿಗಳ ಕೊರತೆಯಾಯಿತು. ಹೀಗಾಗಿ ನಾವೇನು ನಿರೀಕ್ಷೆ ಮಾಡಿದ್ದೆವು ಅದಕ್ಕಿಂತ ಹೆಚ್ಚಿನ ಕೊರತೆಯನ್ನು ಇವತ್ತು ನಾವು ಕಾಣುತ್ತಿದ್ದೇವೆ. ಅದನ್ನು ತುಂಬಿಕೊಳ್ಳುವುದಕ್ಕೆ ಇವತ್ತು ಆಗುತ್ತಿಲ್ಲ. ಕೆಲವೊಂದು ಬೇರೆಬೇರೆ ರಾಜ್ಯಗಳಲ್ಲೂ ಕೂಡ ಪರಿಸ್ಥಿತಿ ಹೀಗೆಯೇ ಇದೆ. ಆಮೇಲೆ ಪ್ಯಾರಾ 6ರಲ್ಲಿ ಇಲ್ಲಿ ಹೇಳುವಂಥಾದ್ದು-

'1990ರ ದಶಕದಲ್ಲಿ ಕರ್ನಾಟಕದ ಆರ್ಥಿಕ ಬೆಳವಣಿಗೆಯ ಸರಾಸರಿ ವಾರ್ಷಿಕ ಪ್ರಮಾಣ ಶೇಕಡ 5.8ರಷ್ಟಿತ್ತು. 1980ರ ದಶಕದಲ್ಲಿದ್ದ ಶೇಕಡಾ 5ರ ವಾರ್ಷಿಕ ಪ್ರಮಾಣಕ್ಕೆ ಹೋಲಿಸಿದರೆ ಇದು ಸುಧಾರಣೆಯೇ ಸರಿ. ಆದರೆ ವಾಸ್ತವವಾಗಿ ಶೇಕಡಾ 5.8 ಒಳ್ಳೆಯ ಬೆಳವಣಿಗೆಯೇನಲ್ಲ. ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಮುಂದಿನ ಹತ್ತು ವರ್ಷಗಳಲ್ಲಿ ಶೇಕಡಾ 7ರಿಂದ 8ರಷ್ಟು ವಾರ್ಷಿಕ ಬೆಳವಣಿಗೆ ಸಾಧಿಸಲು ನಾವು ನಮ್ಮ ನೀತಿ ಮತ್ತು ಕಾರ್ಯಕ್ರಮಗಳನ್ನು ಚುರುಕುಗೊಳಿಸಬೇಕು...

ಎಂದು ಇದೆ. ಅಂದರೆ 90ರ ದಶಕದಲ್ಲಿ ನಮ್ಮ ಆರ್ಥಿಕ ಬೆಳವಣಿಗೆ 5.8 ಇತ್ತು. 80ರ ದಶಕದಲ್ಲಿ ಇದ್ದದ್ದು ಶೇಕಡಾ 5. ಅಂದರೆ ಜಾಸ್ತಿಯಾಗಿರುವುದು 8ರಷ್ಟು ಮಾತ್ರ. ಆದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು 7ರಿಂದ 8ವರೆಗೆ ಈ ಬೆಳವಣಿಗೆ ಹೋಗುವುದು ಎಂದು ಹೇಳಿರುವ ಮಾತು ವಾಸ್ತವಿಕ ಅಲ್ಲವೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಏಕೆಂದರೆ ಹಿಂದಿನ 80ರ ದಶಕ ಮತ್ತು 90ರ ದಶಕವನ್ನು ನೋಡಿದರೆ ಇದು 7 ಮತ್ತು 8ರ ಬೆಳವಣಿಗೆ ಎನ್ನುತ್ತಾರಲ್ಲ, ಇದು ವಾಸ್ತವಿಕ ನೆಲಗಟ್ಟಿನ ಮೇಲೆ ಇಲ್ಲ ಎನ್ನುವಂಥಾದ್ದು ಗೊತ್ತಾಗುತ್ತದೆ. ಇದನ್ನು ಯಾವ ಆಧಾರದ ಮೇಲೆ ಅವರು ಮಾಡಿದ್ದಾರೆ ಎನ್ನುವುದು ನನಗೆ ತಿಳಿಯುತ್ತಿಲ್ಲ. ಇದರ ಬಗ್ಗೆ ಚಿಂತನೆ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(ಈ ಹಂತದಲ್ಲಿ ಸದಸ್ಯರೊಬ್ಬರ ಬಳಿಯಿಂದ ಮೊಬೈಲ್ ಫೋನ್ ಶಬ್ದಮಾಡಿದ್ದು ಸದನಕ್ಕೆ ಕೇಳಿಸಿತು)

ಅಧ್ಯಕ್ಷರು : ಯಾರಪ್ಪ ಅದು? ಇನ್ನು ಮುಂದೆ ಈ ರೀತಿ ಮಾಡಿದರೆ ಇನ್‌ಸ್ಟ್ರುಮೆಂಟ್‌ನ್ನು ಸೀಜ್ ಮಾಡಬೇಕಾಗಿ ಬರುತ್ತದೆ, ಅಷ್ಟೆ. ಒಂದು ಸಲ ಹೇಳಿದರೆ ಅರ್ಥವಾಗುವುದಿಲ್ವೆ?

ಶ್ರೀ ಡಿ.ಕೆ. ಶಿವಕುಮಾರ್ : ಒಬ್ಬಿಬ್ಬರಿಗೆ ಹಾಗೆ ಮಾಡಿಬಿಡಿ, ಸರಿಹೋಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸೀಜ್ ಮಾಡಿ ಆಕ್ಷನ್ ಮಾಡಿಬಿಡಿ.

ಅಧ್ಯಕ್ಷರು : ಹಾಗೆ ಮಾಡಿ ಅದನ್ನು ಲೆಜಿಸ್ಲೇಟರ್ ಬೆನಿವೊಲೆಂಟ್ ಫಂಡ್‌ಗೆ ಹಾಕಿಬಿಡುವುದು ಅಷ್ಟೆ.

ಶ್ರೀ ಜಗದೀಶ ಶೆಟ್ಟರ್ : ಬಜೆಟ್ ಭಾಷಣದ ಒಂದು ಪ್ಯಾರಾದಲ್ಲಿ 2004ನೇ ಇಸವಿಯೊಳಗೆ ಆಯವ್ಯಯದ ಕೊರತೆಯನ್ನು ಸಂಪೂರ್ಣವಾಗಿ ನಿವಾರಿಸಿ ರಾಜ್ಯದ ಆರ್ಥಿಕ ಕೊರತೆಯನ್ನು ಜಿ.ಎಸ್.ಡಿ.ಪಿ.ಎ ಶೇಕಡಾ 3ರಷ್ಟಕ್ಕೆ ಇಳಿಸುವುದಾಗಿ ಘೋಷಣೆ ಮಾಡಿದೆ. ಆದರೆ ಇವತ್ತು ಈ ಆಯವ್ಯಯದ ಕೊರತೆ ಎರಡು ಸಾವಿರ ಕೋಟಿಗಿಂತ ಹೆಚ್ಚು ಇದ್ದು, ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ, ರಾಜಸ್ವ ವೆಚ್ಚವನ್ನು ಕುಗ್ಗಿಸುವ ಯಾವುದೇ ಪ್ರಸ್ತಾವನೆ ಇವತ್ತು ಬಜೆಟ್‌ನಲ್ಲಿ ಇಲ್ಲ. ಹೀಗಾಗಿ ಇವತ್ತು 2004ನೇ ಇಸವಿಯೊಳಗೆ ನಾವು ಕೊರತೆ ರಹಿತವಾದಂಥ ಒಂದು ವಾತಾವರಣವನ್ನು ನಿರ್ಮಿಸುತ್ತೇವೆ ಎನ್ನುವಂಥಾದ್ದು ಇದು ವಾಸ್ತವಿಕ ಸಂಗತಿಗೆ ದೂರವಾದುದು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಯೂ ಕ್ಲಾರಿಫೈ ಮಾಡಿಲ್ಲ. 2004ನೇ ಇಸವಿಯೊಳಗೆ ಕೊರತೆಯನ್ನು ನಾವು ನೀಗಿಸುತ್ತೇವೆ ಅಥವಾ ಕೊರತೆ ರಹಿತವಾದಂಥ ಒಂದು ಆರ್ಥಿಕ ಸುಧಾರಣೆಯನ್ನು ತೆಗೆದುಕೊಂಡುಬರುತ್ತೇವೆ ಎನ್ನುವಂಥಾದ್ದು ಇದರಲ್ಲಿ ಏನು ಹೇಳಿದ್ದಾರೆ ಅದು ವಾಸ್ತವಿಕತೆಗೆ ದೂರವಾದ ಮಾತು ಎನ್ನುವಂಥಾದ್ದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಮತ್ತು ಈ ಒಂದು ಸಂದರ್ಭದಲ್ಲಿ ಇವತ್ತು ನಮ್ಮ ರಾಜ್ಯ ಯಾವ್ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಸಾಲವನ್ನು ತೆಗೆದುಕೊಂಡುಬಂದಿದೆ ಎನ್ನುವಂಥಾದ್ದು. ಅದು ಕೇಂದ್ರದಿಂದ ಬಂದಂಥ ಮುಂಗಡ ಇರಬಹುದು, ಇವುಗಳ ಬಗ್ಗೆಯೂ ನಾವು ಚಿಂತನೆ ಮಾಡಬೇಕಾಗಿದೆ. 1997-98ಕ್ಕೆ ರಾಜ್ಯದ ಸಾಲದ ಹೊರೆ, ರಾಜ್ಯದ ಆಂತರಿಕ ಉತ್ಪಾದನೆ ಶೇಕಡಾ 27ರಷ್ಟು ಇದೆ. ಕೇಂದ್ರದಿಂದ ಪಡೆದಿರುವ ಮುಂಗಡವೇ ಹೆಚ್ಚು ಇದೆ. ಕೇಂದ್ರ ಸರ್ಕಾರದಿಂದ ಪಡೆದಿರುವ ಸಾಲ 1998-99ನೇ ಸಾಲಿನಲ್ಲಿ 1662 ಕೋಟಿ ಇದ್ದು, ಈ ಸಾಲಿನಲ್ಲಿ ರಾಜ್ಯಕ್ಕೆ ಕೇಂದ್ರದ ಸಾಲ ಬಂದಿರುವುದು 380 ಕೋಟಿ ರೂಪಾಯಿಗಳು ಇದೆ. ಅಂದರೆ ಉಳಿದಿದ್ದು 1,282 ಕೋಟಿ ರೂಪಾಯಿ ಹಣವನ್ನು ಕೇಂದ್ರ ಸರ್ಕಾರ ತನ್ನ ಸಾಲದ ಅಸಲಿನ ಕಂತು ಹಾಗೂ ಇದರ ಮೇಲಿನ ಬಡ್ಡಿ, ಇದಕ್ಕಾಗಿ ಮುರಿದು ಕೊಂಡಿರತಕ್ಕಂಥಾದ್ದು ಮತ್ತು ಸಾಲದ ಸೇವೆ ಮೊತ್ತ-ಡೆಟ್ ಸರ್ವೀಸ್ ಚಾರ್ಜಸ್ ಏನಿದೆ ಅದು ಒಂದು ರೂಪಾಯಿಗೆ 14 ಪೈಸೆ ಇದೆ. ಅಂದರೆ ಶೇಕಡಾ 14ರಷ್ಟು ರೆವಿನ್ಯೂ ವೆಚ್ಚ ಸಾಲದ ಮೇಲಿನ ಬಡ್ಡಿ ಪಾವತಿಗೆ ಹೋಗುತ್ತದೆ. ಇಂತಹ ಒಂದು ಪರಿಸ್ಥಿತಿ ಇದೆ. ಹೀಗೆ ಬಂಡವಾಳ ಜಮೆ. ರಾಜ್ಯಸ್ವ ಕೊರತೆ ಇದರಿಂದ ತುಂಬಿಕೊಳ್ಳಲು ಉಪಯೋಗಿಸುತ್ತಿರುವುದರಿಂದ ಇವತ್ತು ಸಾಲ ಮತ್ತು ಬಡ್ಡಿ ಹೊರೆ

ಹೆಚ್ಚಿಗೆ ಬಂದಾಗ ಆರ್ಥಿಕ ಸ್ಥಿತಿಯ ಮೇಲೆ ಹೆಚ್ಚಿನ ಭಾರ ಬರುತ್ತದೆ ಮತ್ತು ಇದು ದುಷ್ಪರಿಣಾಮ ಬೀರುತ್ತದೆ. ಹಾಗಾಗಿ ನಾವು ಏನು ಸಾಧಿಸಬೇಕು, ಒಂದು ಆರ್ಥಿಕವಾದ ಸುಧಾರಣೆ ಮಾಡಬೇಕೆನ್ನುವಂಥ ಉದ್ದೇಶವೇ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಒಂದು ದೂರದೃಷ್ಟಿತ್ವದ ಒಂದು ಕೊರತೆಯನ್ನು ಇದರಲ್ಲಿ ನಾವು ಕಾಣಬಹುದು ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯಮಂತ್ರಿಗಳು ಇವತ್ತು ಕೆಲವೊಂದು ಭವಿಷ್ಯದ ಸವಾಲುಗಳ ಬಗ್ಗೆ ಹೇಳಿದ್ದಾರೆ. ಇವತ್ತು ಬಡತನ ನಿರ್ಮೂಲನ ಇರಬಹುದು, ಆರ್ಥಿಕ ಅಭಿವೃದ್ಧಿ ಇರಬಹುದು, ಕೈಗಾರಿಕಾಭಿವೃದ್ಧಿ ಇರಬಹುದು, ಗ್ರಾಮೀಣ ಅಭಿವೃದ್ಧಿ ಇರಬಹುದು, ನೀರಾವರಿ, ವಿದ್ಯುತ್ ಈ ಎಲ್ಲ ಕ್ಷೇತ್ರಗಳ ಬಗ್ಗೆ ನಮಗೆ ಭವಿಷ್ಯದ ಸವಾಲುಗಳು ಎಂದು ಅವರು ಹೇಳಿದ್ದಾರೆ. ಇದು ಒಪ್ಪಿಕೊಳ್ಳಬೇಕಾದ ಮಾತು. ಬಹುಶ: ಯಾವುದೇ ಸರ್ಕಾರ ಬರಲಿ, ಪ್ರತಿಯೊಂದು ಸರ್ಕಾರ ಮೂಲಭೂತವಾಗಿ ಚಾಲೆಂಜ್ ತೆಗೆದುಕೊಳ್ಳುವಂಥಾದ್ದು ಈ ಒಂದು ರಂಗದ ಬಗ್ಗೆ. ಈ ರಂಗಗಳನ್ನು ಸದೃಢಮಾಡುವಂಥಾದ್ದು, ಆರ್ಥಿಕವಾಗಿ ಪೋಷಣೆ ಮಾಡುವಂಥಾದ್ದು ಮತ್ತು ಅದರ ಮುಖಾಂತರ ಜನಸಾಮಾನ್ಯರಿಗೆ ನಾವು ಸಹಾಯ ಮಾಡುವಂಥಾದ್ದು ಇದರಿಂದ ಸಾಧ್ಯವಿದೆ. ಆದರೆ ಇವತ್ತು ಇವುಗಳ ಬಗ್ಗೆ ಚಾಲೆಂಜ್ ಎಂದು ಹೇಳಿ ಅವನ್ನು ಯಾವರೀತಿ ನಾವು ನಿವಾರಣೆ ಮಾಡುತ್ತೇವೆ ಎನ್ನುವ ಸ್ಪಷ್ಟೀಕರಣ ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಮೂಲಭೂತವಾಗಿ ಇವತ್ತು ಈ ಒಂದು ಕ್ಷೇತ್ರಗಳ ಬಗ್ಗೆ ಸರ್ಕಾರ ನೀಡಿದಂಥ ಅಲೋಕೇಶನ್ ಆಫ್ ಫಂಡ್ಸ್‌ನ್ನು ನಾವು ನೋಡಿದರೆ ಬಹುಶ: ಸರ್ಕಾರದ ಉದ್ದೇಶ ಸದುದ್ದೇಶದಿಂದ ಕೂಡಿಲ್ಲವೆನ್ನುವ ಮಾತನ್ನು ಹೇಳಬಹುದು. ಇವತ್ತು ಗ್ರಾಮೀಣಾಭಿವೃದ್ಧಿ, ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಆಸ್ತಿಗಳಿಗೆ ಕಳೆದಬಾರಿ ಇಟ್ಟಿದ್ದನ್ನು ನೋಡುವುದಾದರೆ 5.23 ಅಲೋಕೇಶನ್ ಆಫ್ ಫಂಡ್ಸ್ ಇತ್ತು. ಆದರೆ ಈ ಸಲ ಅಲೋಕೇಶನ್ ಆಫ್ ಫಂಡ್ಸ್ 4.31 ಇದೆ. ಗ್ರಾಮೀಣಾಭಿವೃದ್ದಿಗೆ ಹಿಂದಿನ ಬಜೆಟ್‌ನಲ್ಲಿ 4.25 ಇತ್ತು. ಆದರೆ ಈ ಸಲ 3.94 ಅಲೋಕೇಶನ್ ಆಫ್ ಫಂಡ್ಸ್ ಮಾಡಿದೆ. ವಿಶೇಷ ಪ್ರದೇಶಾಭಿವೃದ್ಧಿ ಯೋಜನೆ ಅದರಲ್ಲಿ ಬಯಲುಸೀಮೆ ಇರಬಹುದು, ಕಾಡಾ ಇರಬಹುದು, ಮಲೆನಾಡು ಅಭಿವೃದ್ಧಿ ಇರಬಹುದು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಇರಬಹುದು- ಕಳೆದಸಾರಿ ಎರಡರಷ್ಟು ಇಟ್ಟಿದ್ದರೆ ಈ ಸಲ ಅದು 1.77 ಇದೆ. ಅಂದರೆ ಫಂಡ್ಸ್ ಕಡಿಮೆ ಕೊಟ್ಟಿದ್ದಾರೆ. ಇನ್ನೊಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕಳೆದ ಸಲ ಕೊಟ್ಟಿದ್ದು 3.93ರಷ್ಟು. ಆದರೆ ಈ ಸಲ ಕೊಟ್ಟಿರುವುದು 3.10. ಇದರಲ್ಲಿ ಕೂಡ ಕಡಿಮೆ ಇದೆ. ಆಮೇಲೆ ನೀರು ಸರಬರಾಜಿಗೆ ಹಿಂದಿನ ಸಲ ಇಟ್ಟಿದ್ದು 8.13 ರಷ್ಟು ಇದ್ದರೆ ಈ ಸಲ ಅದು 7.82 ಇದೆ. ಇದೇ ರೀತಿ ಎಸ್‌ಸಿ/ಎಸ್‌ಟಿ ಅಭಿವೃದ್ಧಿ ಇರಬಹುದು, ಈ ವಿಭಾಗಕ್ಕೆ ಕಳೆದ ಸಲ 3.20 ಇತ್ತು. ಈ ಸಲ 2.52 ಇದೆ. ಇನ್ನೊಂದು ಬಹಳ ಮುಖ್ಯವಾದದ್ದು ಇಂಧನ ವಲಯ. ಈ ಒಂದು ವಲಯಕ್ಕೆ ಹೋದಸಲ 1999-2000ರಲ್ಲಿ ಶೇಕಡಾ 17.11 ಇತ್ತು. ಈ ಸಲ ಅದು 10.43 ಇದೆ. ಅಂದರೆ ಹೋದಸಲಕ್ಕೂ, ಇವತ್ತಿನದಕ್ಕೂ ಹೋಲಿಕೆ ಮಾಡಿದರೆ ಇವು ಆದ್ಯತಾ ಇಲಾಖೆಗಳು, ಬಹಳ ಪ್ರಾಮುಖ್ಯವಾದ ಇಲಾಖೆಗಳು. ಇದರ ಮುಖಾಂತರ ಜನಸಾಮಾನ್ಯರಿಗೆ, ರೈತರಿಗೆ, ಗ್ರಾಮೀಣ ಮಟ್ಟದ ಜನರಿಗೆ ಅನುಕೂಲವಾಗು -ವಂಥಾದ್ದು. ಆದರೆ ಇವತ್ತು ಈ ಕ್ಷೇತ್ರಗಳಿಗೆ ಕೊಟ್ಟಂಥ ಅಲೋಕೇಶನ್ ಆಫ್ ಫಂಡ್ಸ್ ನೋಡಿದರೆ

ಬಹಳಷ್ಟು ಕಡಿಮೆಯಾಗಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದಕ್ಕಾಗಿ ಇವತ್ತು ಈ ರೀತಿಯಾದ ಕೊರತೆ ಏಕೆ ಮಾಡಿದರು ಎನ್ನುವಂಥ ಪ್ರಶ್ನೆ ಬರುತ್ತದೆ. ಇನ್ನೊಂದು ಬಹಳ ಮುಖ್ಯವಾದದ್ದು ನಿರುದ್ಯೋಗ ಸಮಸ್ಯೆ ಬಗ್ಗೆ. ಇಂದು ರಾಜ್ಯದಲ್ಲಿ ಬಹಳ ಮುಖ್ಯವಾಗಿ ನಾವು ನೋಡುವಂಥಾದ್ದು ಈ ನಿರುದ್ಯೋಗ ಸಮಸ್ಯೆ. ಇದರ ಬಗ್ಗೆ ನಿರ್ದಿಷ್ಟವಾಗಿ ಯಾವುದೇ ಯೋಜನೆಗಳು ಇಲ್ಲ. ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟ್ರೇಶನ್ ಮಾಡಿಕೊಂಡಿರತಕ್ಕಂಥ ನಿರುದ್ಯೋಗಿ ಯುವಕ-ಯುವತಿಯರು ಇರಬಹುದು, ಹರಿಜನ - ಗಿರಿಜನರು ಇರಬಹುದು ನವೆಂಬರ್ 1999ರ ಅಂತ್ಯಕ್ಕೆ ರಿಜಿಸ್ಟ್ರೇಶನ್ ಮಾಡಿಕೊಂಡಿರುವಂಥವರ ಸಂಖ್ಯೆ 18 ಲಕ್ಷ ಇದೆ. ಇಷ್ಟೊಂದು ಸಂಖ್ಯೆಯ ಯುವಕರು ಇಂದು ನೌಕರಿ ಸಲುವಾಗಿ ತಮ್ಮ ಹೆಸರುಗಳನ್ನು ರಿಜಿಸ್ಟ್ರೇಶನ್ ಮಾಡಿದ್ದಾರೆ.

4.00 ಪಿ.ಎಂ.

ಇವತ್ತು 18 ಲಕ್ಷ ಜನರಿಗೆ ನೌಕರಿ ಕೊಡಬೇಕಾಗಿದೆ. ಆದರೆ, ಇವರಿಗೆ ಯಾವರೀತಿ ಉದ್ಯೋಗಾವಕಾಶ ಕೊಡಬಹುದೆಂಬುದಕ್ಕೆ ಬಜೆಟ್‌ನಲ್ಲಿ ಸ್ಪಷ್ಟವಾಗಿ ವಿಚಾರ ಪ್ರಸ್ತಾಪವಾಗಿಲ್ಲ. ಮತ್ತೊಂದು ವಿಷಯವೆಂದರೆ, ಇವತ್ತು ವಾಸ್ತವಿಕವಾಗಿ ವಿಚಾರ ಮಾಡುವಂಥಾದ್ದು, ವಾಸ್ತವಿಕವಾಗಿ ದೂರವಾದಂಥ ವಿಷಯ ಯಾವರೀತಿ ಇರುತ್ತದೆ ಎನ್ನುವಂಥಾದ್ದು ನೋಡಬೇಕು. ಏಕೆಂದರೆ ನಾವು ಕೆಲವೊಮ್ಮೆ ಜನಪ್ರಿಯವಾಗುವಂಥಾದ್ದು, ಜನರಿಗೆ ಖುಷಿ ಮಾಡಲಿಕ್ಕೆ ಘೋಷಣೆಗಳನ್ನು ಮಾಡುತ್ತೇವೆ. ಆದರೆ, ನಿಜವಾಗಿಯೂ ಅವುಗಳನ್ನು ಅನುಷ್ಠಾನ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಆ ದಿಸೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಮತ್ತು ತಮ್ಮ ಮುಂದೆ ವಿನಂತಿ ಮಾಡುತ್ತಿದ್ದೇನೆ. ಈ ವಸತಿ ವಲಯದಲ್ಲಿ ಕಳೆದ 10 ವರ್ಷಗಳಲ್ಲಿ ನಮ್ಮ ಸಾಧನೆಯನ್ನು ನೋಡಬೇಕಾಗುತ್ತದೆ. ಅದು ಆಶ್ರಯ ಇರಬಹುದು ಅಥವಾ ಹೌಸ್ ಕನ್‌ಸ್ಟ್ರಕ್ಷನ್ ಇರಬಹುದು. ನಮ್ಮ ಗುರಿ ಎಷ್ಟಿತ್ತು, ಎಷ್ಟು ಸಾಧನೆ ಮಾಡಿದ್ದೇವೆ ಎಂಬುದನ್ನು ನೋಡಬೇಕು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಘೋಷಣೆ ಮಾಡಿರುವುದು ನೋಡಿದರೆ ಇದು ವಾಸ್ತವಿಕ ನೆಲಗಟ್ಟಿನ ಮೇಲೆ ಇದೆಯೇ ಎಂಬುದನ್ನು ನಾವು ತಿಳಿದುಕೊಳ್ಳಬಹುದು. ಕಳೆದ 10 ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ನಾವು ಕಟ್ಟಿಸಿರುವ ಮನೆಗಳು 4.5 ಲಕ್ಷ. ಅಂದರೆ ಪ್ರತಿ ವರ್ಷ 45 ಸಾವಿರ ಮನೆಗಳನ್ನು ನಾವು ಕಟ್ಟಿಸಿದ್ದೇವೆ. ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಘೋಷಣೆ ಮಾಡಿ 2 ಲಕ್ಷ ಮನೆಗಳನ್ನು ನಾವು ಕಟ್ಟಿಸುತ್ತೇವೆಂದು ಹೇಳಿದ್ದಾರೆ. ಆದರೆ, ಇದೊಂದು ವಾಸ್ತವಿಕ ನೆಲಗಟ್ಟಿನ ಮೇಲೆ ಆಗುವಂಥಾದ್ದು. ಅವರ ಸಿಬ್ಬಂದಿ ವರ್ಗ ವೇಗವಾಗಿ ಕೆಲಸ ಮಾಡಿದರೆ ಅಥವಾ ಇಡೀ ರಾಜ್ಯದಲ್ಲಿರತಕ್ಕ ಇಂಜಿನಿಯರುಗಳು ಅಷ್ಟುಬೇಗ ಕೆಲಸ ಮಾಡಿದರೆ ಒಳ್ಳೆಯದು. ಆದರೆ ಇವತ್ತು ವಾಸ್ತವಿಕ ನೆಲಗಟ್ಟನ್ನು ನಾವು ನೋಡಬೇಕಾಗುತ್ತದೆ ಕೇವಲ ನಾವು ಜನರಿಗೆ ಘೋಷಣೆ ಕೂಗಿ ಜನಪ್ರಿಯ ಆಗಬೇಕೆಂಬ ದೃಷ್ಟಿ ಇಟ್ಟುಕೊಂಡು ಮಾಡಿದರೆ ನಾಳೆ ಜನರಿಗೆ ನಿರಾಸೆಯಾಗುತ್ತದೆ. ಅದಕ್ಕೆ ಬಜೆಟ್ ಅಲೋಕೇಷನ್ ಇರಬಹುದು, ಮತ್ತು ಅದರ ಬಗ್ಗೆ ಟ್ಯಾರಿಫ್ ಇರಬಹುದು. ಇಲ್ಲಿ ಯಾವುದೂ ಅದರ ಬಗ್ಗೆ ಪ್ರಸ್ತಾಪ ಇಲ್ಲ. ಇದು ಕೇವಲ ಒಂದು ಘೋಷಣೆಯಾಗಿ ಉಳಿಯಬಾರದು ಎಂಬುದೇ ನಮ್ಮ ಕಾಳಜಿ. ಇನ್ನು ಮೂಲಭೂತ

ಸೌಲಭ್ಯಗಳ ಅಭಿವೃದ್ಧಿ ಬಗ್ಗೆ ಹೇಳುವಂತಾದ್ದು, ಇದರಲ್ಲಿ ಬೇರೆ ಬೇರೆ ಭಾಗದಿಂದ ಇವತ್ತು ಮೂಲಭೂತ ಸೌಕರ್ಯ ಅಭಿವೃದ್ದಿ ಸಲುವಾಗಿ ವಿಷಯಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ದೇವನಹಳ್ಳಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣ ಇರಬಹುದು. ಬೆಂಗಳೂರಿಗೆ ಹಗುರ ರೈಲು ಇರಬಹುದು, ಫ್ಲೈ ಓವರ್ ಇರಬಹುದು, ರಿಂಗ್ ರಸ್ತೆಗಳು ಇರಬಹುದು. ಇವೆಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡುವ ಸಲುವಾಗಿ ಇರುವಂಥಾದ್ದು ಆದರೆ, ಒದಗಿಸಿದ ಹಣ ಎರಡು ನೂರು ಕೋಟಿ ರೂಪಾಯಿಗಳು. ಇಷ್ಟು ಬಂಡವಾಳ ಸಂಗ್ರಹಣೆ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಇದು ಯಾವುದರ ಮುಖಾಂತರ ಬರುತ್ತದೆ? ಯಾವರೀತಿ ಇದನ್ನು ಸಂಗ್ರಹಣೆ ಮಾಡುತ್ತಾರೆ? ಇಷ್ಟು ಹಣ ಸಾಕಾಗುತ್ತದೆಯೇ ಹೇಗೆ? ಇದರ ಬಗ್ಗೆ ಬಜೆಟ್‌ನಲ್ಲಿ ಸ್ಪಷ್ಟೀಕರಣ ಇಲ್ಲ. ಹೀಗಾಗಿ ಕೆಲವೊಂದು ವಿಚಾರ ಮಾಡಿದಾಗ, ಬಜೆಟ್ ಭಾಷಣದಲ್ಲಿ ಮೂಲಭೂತ ಸೌಲಭ್ಯ ಅಭಿವೃದ್ಧಿಗಾಗಿ 744 ಕೋಟಿ ರೂಪಾಯಿಗಳನ್ನು ನಬಾರ್ಡ್‌ನಿಂದ ಪಡೆಯುವುದಾಗಿ ತಿಳಿಸಲಾಗಿದೆ. ಅಂದರೆ, ಅಲ್ಲಿ ನಬಾರ್ಡ್‌ನಿಂದ ಏನು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅದನ್ನು ನಾವು ಲೆಕ್ಕಾಚಾರ ಮಾಡಿದರೆ ಇವತ್ತು ಅವರು 744 ಕೋಟಿ ರೂಪಾಯಿಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಇವತ್ತು ಅವರು ಏನು ವಿಚಾರ ಮಾಡಿದ್ದಾರೆ, ಯೋಜನೆ ಮಾಡಿದ್ದಾರೆ, ಅದು ಶೇಕಡ 48 ಮಾತ್ರ. ಈ ಹಣ ಸಾಕಾಗುತ್ತದೆ. ಆದರೆ, ಇನ್ನೂ 52 ಪರ್ಸೆಂಟ್ ಹಣ ಅವರಿಗೆ ಎಲ್ಲಿಂದ ಬರುತ್ತದೆ? ಯಾವ ರೀತಿ ಮೊಬಿಲೈಸ್ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಇದು ಕೇವಲ ವೇಗ್ ಆಗಿ, ಈ ಯೋಜನೆ ಅನುಷ್ಠಾನ ಆಗುತ್ತದೋ ಇಲ್ಲವೋ ನಬಾರ್ಡ್‌ನಿಂದ ಏನು ಅಭಿವೃದ್ಧಿ ಮಾಡಬೇಕೆಂದು ಹೇಳುತ್ತಾರೆ, ಅದು ಆಗುತ್ತದೆಯೋ ಇಲ್ಲವೋ ಎಂಬ ಸಂಶಯವೂ ನನಗೆ ಬರುತ್ತದೆ. ಅದಕ್ಕಾಗಿ ಈ ಒಂದು ಸಂದರ್ಭದಲ್ಲಿ ಇದರ ಬಗ್ಗೆ ಚಿಂತನೆ ಮಾಡಬೇಕೆಂಬ ಮಾತನ್ನು ಈ ಸದನದಲ್ಲಿ ನಾನು ಹೇಳಬಯಸುತ್ತೇನೆ. ಈ ಒಂದು ಸಂದರ್ಭದಲ್ಲಿ ನಮ್ಮ ಮಾನ್ಯಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ಬಗ್ಗೆ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಏಕೆಂದರೆ, ಉತ್ತರ ಕರ್ನಾಟಕದ ಬಗ್ಗೆ ಹೋರಾಟ ನಡೆಯುವಂಥಾದ್ದು ಮತ್ತು ಅದು ನೆಗ್ಲೆಕ್ಟೆಡ್ ಏರಿಯಾ. ಅದಕ್ಕಾಗಿ ಆ ಭಾಗ ಹೆಚ್ಚು ಅಭಿವೃದ್ಧಿಯಾಗಬೇಕೆಂಬ ಮಾತುಗಳನ್ನು ಕೇಳುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದ ಬಗ್ಗೆಯೂ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕಳಕಳಿ ಇದೆ, ಅದಕ್ಕಾಗಿ ಕೆಲವೊಂದು ಘೋಷಣೆಗಳನ್ನು, ಕೆಲವೊಂದು ಕೊಡುಗೆಗಳನ್ನು ಕೊಡುತ್ತೇವೆಂದು ಹೇಳಿದರು. ಅಷ್ಟೇ ಅಲ್ಲ, ಕೆಲವೊಂದು ಮುಖ್ಯ ಕಚೇರಿಗಳನ್ನು ಹುಬ್ಬಳ್ಳಿ, ಬೆಳಗಾಂ, ಅಥವಾ ಬಾಗಲಕೋಟೆಗೆ ಮತ್ತು ಬೇರೆ ಬೇರೆ ಪ್ರದೇಶಕ್ಕೆ ಸ್ಥಳಾಂತರ ಮಾಡುತ್ತೇವೆಂಬ ಮಾತನ್ನೂ ಹೇಳಿದರು. ಅದರಲ್ಲಿ ಮುಖ್ಯವಾಗಿ ಈಗಾಗಲೇ ಜವಳಿ ಹುಬ್ಬಳ್ಳಿಗೆ ವರ್ಗಾಯಿಸಿದ್ದಾರೆ. ಅದು ಯಾವುದೆಂದರೆ ಕರ್ನಾಟಕ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೋರೇಷನ್. ಜನತಾ ದಳದ ಸರ್ಕಾರ ಇದ್ದಾಗ ಮಾಡಿದ್ದನ್ನೂ ನಾನು ಹೇಳುತ್ತೇನೆ. ಅಲ್ಲಿಯ ಹಣೆಬರಹ ಏನಾಗಿದೆ ಎಂಬುದನ್ನು ಹೇಳುತ್ತಿದ್ದೇನೆ. ಅವರೂ ಕೂಡ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ, ಪರಿಸ್ಥಿತಿ

ಏನಾಗಿದೆ ಎಂದರೆ, ಅದರ ಎಂ.ಡಿ. ಏನಿದ್ದಾರೆ, ಅವರು ಬೆಂಗಳೂರಿನಲ್ಲಿಯೇ ಕೂತಿದ್ದಾರೆ. ಅವರಿಗೆ, ಅಲ್ಲಿ ಹೋಗುವುದಕ್ಕೆ ಮನಸ್ಸು ಇಲ್ಲ. ನೀವೇನೋ ಸದುದ್ದೇಶ ಇಟ್ಟುಕೊಂಡು ಹುಬ್ಬಳ್ಳಿ ಅಥವಾ ಉತ್ತರ ಕರ್ನಾಟಕ ಅಭಿವೃದ್ಧಿಯಾಗಬೇಕೆಂದು ಹೇಳಿ ಕರ್ನಾಟಕ ಹ್ಯಾಂಡ್ ಲೂಮ್ ಕಾರ್ಪೊರೇಷನ್‌ನ್ನು ಅಲ್ಲಿಗೆ ಸ್ಥಳಾಂತರ ಮಾಡಿದಿರಿ. ಆದರೆ, ಇವತ್ತು ಅದರ ಸಿಬ್ಬಂದಿ ಇಲ್ಲಿಯೇ ಇದೆ. ಅಲ್ಲೊಂದು ಆಫೀಸು ಮಾಡಿದರು, ಕೆಲವೊಂದು ಸಿಬ್ಬಂದಿ ಉಳಿದರು. ಆದರೆ, ಎಲ್ಲಿಯವರೆಗೆ ಆ ಸಂಸ್ಥೆಯ ಮುಖ್ಯಾಧಿಕಾರಿ, ಮ್ಯಾನೇಜಿಂಗ್ ಡೈರಕ್ಟರ್ ಅಲ್ಲಿಗೆ ಹೋಗುವುದಿಲ್ಲವೋ ಅಲ್ಲಿಯವರೆಗೆ ಅದು ಸ್ಥಾಳಂತರ ಎಂದು ಅನಿಸುವುದಿಲ್ಲ. ಅವರು ಅಲ್ಲಿಗೆ ಹೋಗುವುದಕ್ಕೆ ಮನಸ್ಸಿಲ್ಲ.

ಶ್ರೀ ಎಂ. ಮಹದೇವ್ : ಅದಕ್ಕೆ ಸಂಬಂಧಿಸಿದ ಎಲ್ಲಾ ಸಿಬ್ಬಂದಿ ಮತ್ತು ಮುಖ್ಯ ಆಯುಕ್ತರಿಂದ ಹಿಡಿದು ಎಲ್ಲರೂ ಅಲ್ಲಿಯೇ ಇದ್ದಾರೆ. ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರು ಈಗ ಬೆಂಗಳೂರಿಗೆ ಬರತಕ್ಕ ಅವಶ್ಯಕತೆ ಇದೆ. ಏಕೆಂದರೆ, ಈಗ ಅಸೆಂಬ್ಲಿ ನಡೆಯುತ್ತಿರುವುದರಿಂದ, ಮಾಹಿತಿಗಳು ಬೇಕಾಗುತ್ತದೆ. ಆದ್ದರಿಂದ, ಕೆಲವು ಡೈರಕ್ಟರು ಮತ್ತು ಕೆಲವು ಸಿಬ್ಬಂದಿ ಇಲ್ಲಿಗೆ ಬಂದಿದ್ದಾರೆಯೇ ಹೊರತು, ಮಿಕ್ಕ ದಿವಸಗಳಲ್ಲಿ ಹುಬ್ಬಳ್ಳಿಯಲ್ಲಿ, ಹೆಡ್‌ಕ್ವಾರ್ಟರ್ಸ್‌ನಲ್ಲಿಯೇ ಇರುತ್ತಾರೆ. ನಾನು ಎರಡು ಮೂರು ಸಾರಿ ತನಿಖೆಗೆ ಹೋದಾಗ, ಅಲ್ಲಿ ಸರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಎಂ.ಡಿ.ಯವರು ಅಲ್ಲಿ ಹೋಗಿ ಒಂದೆರಡು ದಿವಸ ಕುಳಿತರೆ ಆಗುವುದಿಲ್ಲ. ಇವತ್ತು ಒಂದು ಹೆಡ್ ಆಫೀಸ್ ಹುಬ್ಬಳ್ಳಿಗೆ ಹೋಗಿದೆ ಎಂದರೆ ಅವರು ಅಲ್ಲಿಯೇ ಇರಬೇಕು. ಅವರು ಅಲ್ಲಿಯೇ ಮನೆ ಮಾಡಲಿ. ಇದುವರೆಗೆ ಅವರು ಮನೆ ಬದಲಾವಣೆ ಮಾಡಿದ್ದಾರೆಯೇ ಎಂಬುದನ್ನು ಹೇಳಲಿ. ಅವರ ಮನೆ ಈಗಲೂ ಬೆಂಗಳೂರಿನಲ್ಲಿಯೇ ಇದೆ. ಅವರು ವಾಸ ಮಾಡುವುದು ಇಲ್ಲಿಯೇ, ಆಫೀಸಿಗೆ ಅಟೆಂಡ್ ಆಗುವುದು ಇಲ್ಲಿಯೇ. ಯಾವಾಗಲೋ ಒಮ್ಮೆ ಹುಬ್ಬಳ್ಳಿಯಲ್ಲಿ ಆಫೀಸ್ ಇದೆಯೆಂದು ವಿಸಿಟ್ ಮಾಡುತ್ತಾರೆ ಅಷ್ಟೆ, ಮಾನ್ಯ ಮುಖ್ಯಮಂತ್ರಿಗಳು ಹೋಗುತ್ತಾರೆಂದರೆ ಅವರ ಹಿಂದೆ ಹೋಗಿ ಬಿಡುತ್ತಾರೆ. ಆದರೆ, ನಿಜವಾಗಿ ಇಂಪ್ಲಿಮೆಂಟ್ ಆಗಬೇಕಾಗಿರುತ್ತದೆ. ಮಾನ್ಯಮುಖ್ಯಮಂತ್ರಿಗಳು ಇವತ್ತು ಇನ್ನು 2-3 ಆಫೀಸುಗಳನ್ನು ಬೇರೆ ಬೇರೆ ಕಡೆ ಕಳುಹಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಮಹದೇವ್‌ರವರು ಆ ವ್ಯವಸ್ಥಾಪಕ ನಿರ್ದೇಶಕರು ಹುಬ್ಬಳ್ಳಿಯಲ್ಲಿ ಇರುತ್ತಾರೆ ಎಂಬ ಮಾತನ್ನು ಹೇಳಿದರು. ನಿಜ, ಕಾಗದದ ಮೇಲೆ ಅದೆಲ್ಲಾ ಕೂಡ ನಡೆಯುತ್ತದೆ. ಈ ಪರಿಸ್ಥಿತಿ ಈ ಇಲಾಖೆಗೆ ಮಾತ್ರ ಸೀಮಿತವಾಗಿಲ್ಲ. ಬೆಂಗಳೂರು ಮತ್ತು ಸುತ್ತಮುತ್ತ ಇರತಕ್ಕಂಥ ಜಿಲ್ಲೆಯ ಅಧಿಕಾರಿಗಳು.....

ಶ್ರೀ ಕಾಗೋಡು ತಿಮ್ಮಪ್ಪ : ಈಗ್ಗೆ 6 ತಿಂಗಳ ಹಿಂದೆ ಹೇಗಿದ್ದರು......

ಶ್ರೀ ಸಿ. ಭೈರೇಗೌಡ : ನಾನು ಆರು ತಿಂಗಳು ಎಂದು ಹೇಳಲಿಲ್ಲ. ಅದನ್ನು ನೀವೇಕೆ ಸೇರಿಸುತ್ತೀರಿ. ನೋಡಿದರೆ ನಿಮಗೇನೋ ಖುಷಿ ಇದ್ದಹಾಗೆ ಇದೆ. ಅದು ಯಾವುದೇ ಕಾಲದಲ್ಲಿ ಇರಲಿ. ನನ್ನ ಅನುಭವದ ಪ್ರಕಾರ ಹೇಳುವುದಾದರೆ, 6 ತಿಂಗಳು ಅಲ್ಲ, 60 ತಿಂಗಳ ಮಾಹಿತಿಯನ್ನೇ

ತೆಗೆದುಕೊಳ್ಳಿ. ಅಥವಾ 600 ತಿಂಗಳಿಂದಲೇ ತೆಗೆದುಕೊಳ್ಳಿ. ಬಹಳ ಜನ ಅಧಿಕಾರಿಗಳು ಪಿಕ್‌ನಿಕ್ ಹೋಗಿಬಂದಹಾಗೆ ಕಚೇರಿಗೆ ಹೋಗಿ ಬರುತ್ತಾರೆ. ಬೆಂಗಳೂರಲ್ಲಿ ವಾಸ ಇರತಕ್ಕಂತಾದ್ದು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂತಾದ್ದು ನಿಜ. ಅವರ ವಾಸ, ಅವರ ಆಸ್ತಿ, ಇವತ್ತು ಒಂದು ಪ್ರಶ್ನೆ ಇದೆ. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಲೋಕಾಯುಕ್ತದವರು ರೈಡ್ ಮಾಡಿದಾಗ ಯಾವ ಯಾವ ಅಧಿಕಾರಿಗಳಿಂದ ಎಷ್ಟೆಷ್ಟು ಸಿಕ್ಕಿದೆ ಎಂದು ಉತ್ತರ ಸಿಕ್ಕಿದೆ. ಇದರ ಬಗ್ಗೆ ಮುಂದಿನ ವ್ಯವಸ್ಥೆ ಏನು ಮಾಡುತ್ತಾರೋ ಅದು ಸರ್ಕಾರಕ್ಕೆ ಬಿಟ್ಟಿರತಕ್ಕಂಥಾದ್ದು. ಬಹಳ ಅಧಿಕಾರಿಗಳು ಅದರಲ್ಲೂ ಹೆಚ್ಚಿಗೆ ಕೋಲಾರ, ತುಮಕೂರು, ಮಂಡ್ಯ, ಹಾಸನ ಈ ಜಿಲ್ಲೆಗಳಲ್ಲಿರತಕ್ಕ ಎಲ್ಲಾ ಇಲಾಖೆಗಳ ಮುಖ್ಯಾಧಿಕಾರಿಗಳು ಏನು ಮಾಡುತ್ತಾರೆ ವಾರದಲ್ಲಿ ಒಂದು ದಿವಸ ಅಥವಾ ಎರಡು ದಿವಸ ಹೋಗುತ್ತಾರೆ, ಬರುತ್ತಾರೆ. ಅಲ್ಲಿ ಮುಖ ತೋರಿಸುತ್ತಾರೆ, ಇಲ್ಲಿಗೆ ವಾಪಸ್ ಬರುತ್ತಾರೆ. ಇದು ಸರ್ವೇಸಾಮಾನ್ಯವಾಗಿದೆ. ಮಾನ್ಯ ತಿಮ್ಮಪ್ಪನವರು ಹೇಳಿದಹಾಗೆ 6 ತಿಂಗಳಿಂದ ಬಂದಿಲ್ಲ. ಹಿಂದಿನಿಂದ ಬಂದಿರತಕ್ಕಂಥ ಜಾಡ್ಯ ಇದು. ಈ ಜಾಡ್ಯವನ್ನು ನಿಮ್ಮ ಕಾಲದಲ್ಲಾದರೂ ದಯವಿಟ್ಟು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ನೀವೇನೋ ಸ್ಮಾರ್ಟ್ ಕಾರ್ಡ್ ಇಂಟ್ರಡ್ಯೂಸ್ ಮಾಡುತ್ತೇವೆಂದು ಹೇಳಿದ್ದೀರಿ. ಮೊದಲು ಬೆಂಗಳೂರು ಅದೂ ವಿಧಾನ ಸೌಧದಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ವಿಧಾನ ಸೌಧಕ್ಕಿಂತ ಮೊದಲು ಬೆಂಗಳೂರಿಗೆ ಸುಮಾರು 150 ಕಿಲೋಮೀಟರ್ ದೂರ ಇರತಕ್ಕ ಜಿಲ್ಲಾ ಕೇಂದ್ರಗಳಲ್ಲಿ ಮಾಡತಕ್ಕಂತಾದ್ದು ಬಹಳ ಅವಶ್ಯಕತೆ ಇದೆ.

ಇದನ್ನು ಒಂದು ಸಾರಿ ಅಲ್ಲ ಅನೇಕ ಸಾರಿ ಹೇಳಿದ್ದೇನೆ. ನಾನು ಮಂತಿಯಾಗಿದ್ದಾಗಲೂ ಸಹ ಇದೇ ಇತ್ತು. ನಾನು ಅಧಿಕಾರಿಗಳು ಎಲ್ಲಿ ಎಂದು ಕೇಳಿದರೆ ಇಲ್ಲಾ ಸಾರ್ ಅವರು ಗೌರಿಬಿದನೂರಿಗೆ ಹೋಗಿದ್ದಾರೆಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೇ ಅನೇಕ ಸಲ ಪೋಲಿಸಿನವರನ್ನು ಕಳುಹಿಸಿ ಅವರು ಎಲ್ಲಿದ್ದಾರೆಂದು ಹುಡುಕಿ ಎಂದು ಹೇಳಿ ಹುಡುಕಿಸಿದರೂ ಸಹ ಅನೇಕ ಅಧಿಕಾರಿಗಳು ಸಿಗುತ್ತಿರಲಿಲ್ಲ. ಅವರು ಎಲ್ಲರೂ ಬೆಂಗಳೂರಿನಲ್ಲಿ ಮನೆ ಮಾಡಿಕೊಂಡಿರುತ್ತಾರೆ. ಅವರಿಗೆ ಇದು ಗೊತ್ತಾದ ತಕ್ಷಣ ಏನು ಮಾಡುತ್ತಾರೆಂದರೆ ಒಂದು ಅರ್ಜಿ ಹಾಕಿ ಸಿ.ಎಲ್. ಎಂದು ಬರೆದುಬಿಡುತ್ತಾರೆ. ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಅಲ್ಲಿಗೆ ಮುಗಿದು ಹೋಯಿತು. ಈ ಜಾಡ್ಯ ಬಹಳ ವರ್ಷಗಳಿಂದ ಬಂದಿದೆ ಇದನ್ನು ಕೇವಲ ಒಂದು ನಿಗಮಕ್ಕೆ ಸೀಮಿತ ಮಾಡಿ ನಾನು ಹೇಳುತ್ತಿಲ್ಲ. ಇಡೀ ಆಡಳಿತ ವ್ಯವಸ್ಥೆಯೇ ಆ ರೀತಿ ಇದೆ ಇದನ್ನು ಸರಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಮುಖ್ಯ ಕಾರಣವೇನೆಂದರೆ, ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಕೆಲವೊಂದು ಕಛೇರಿಗಳ ಸ್ಥಳಾಂತರದ ಬಗ್ಗೆ ಹೇಳಿದರು. ಅದು ಒಳ್ಳೆಯ ಕೆಲಸ ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಅದು ನಿಜವಾಗಿಯೂ ಅನುಷ್ಠಾನವಾಗಬೇಕು ಎನ್ನತಕ್ಕಂಥಾದ್ದು. ಈ ರೀತಿ ಮುಖ್ಯ ಕಛೇರಿಗಳು ಬೆಂಗಳೂರು ನಗರದಿಂದ ಬೇರೆ ಬೇರೆ ಕಡೆಗಳಿಗೆ ಅಂದರೆ ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕದ ಭಾಗಕ್ಕೆ ಸ್ಥಳಾಂತರ ಮಾಡಿದರೆ ಬಹುಶ: ಹೆಚ್ಚಿನ ಒಂದು ಅನುಕೂಲವಾಗುತ್ತದೆ.

ಇವತ್ತು ನಮ್ಮ ಅಪೆಕ್ಸ್ ಕೋ-ಆಪರೇಟಿವ್ ಬ್ಯಾಂಕ್ ಇದೆ ಅದನ್ನು ಸಹ ನಾವು ಇವತ್ತು ಉತ್ತರ ಕರ್ನಾಟಕದ ಭಾಗಕ್ಕೆ ಕಳುಹಿಸಿದರೆ ಒಳ್ಳೆಯದು, ಕಾರಣ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕಿನ ಮೇಲೆ ಅಲ್ಲಿನ ಜನ ಹೆಚ್ಚು ಅವಲಂಬಿತರಾಗಿದ್ದಾರೆ. ಇಂತಹ ಕೆಲವೊಂದು ಕಛೇರಿಗಳನ್ನು ನಾವು ಇಲ್ಲಿಂದ ಸ್ಥಳಾಂತರ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಇವತ್ತು ನಾವು ಕೇವಲ ಸ್ಥಳಾಂತರ ಮಾಡಿದೆವು ಎಂದು ಹೇಳಿ ಸಮಾಧಾನ ಮಾಡಿಕೊಳ್ಳುವಂಥಾದ್ದು ಅಲ್ಲ, ನಿಜವಾಗಿಯೂ ಆ ಭಾಗದ ಜನಗಳಿಗೆ ಅನುಕೂಲವಾಗುವಂಥಾದ್ದು, ಮತ್ತು ಆ ಭಾಗದ ಅಭಿವೃದ್ಧಿಯಾದರೆ ಆಗ ತಾವು ಈ ಒಂದು ಘೋಷಣೆಯನ್ನು ಮಾಡಿದ್ದಕ್ಕೆ ಒಂದು ಅರ್ಥ ಬರುತ್ತದೆ. ಮತ್ತು ಹುಬ್ಬಳ್ಳಿಯಲ್ಲಿ ಇದೇ ಬರುವ 31ರ ಮಾರ್ಚಿಯಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಓಪನ್ ಮಾಡುತ್ತೇವೆಂದು ಹೇಳಿದರು. ಇದರ ಬಗ್ಗೆ ಕಳೆದ ಒಂದೆರಡು ವರ್ಷಗಳಿಂದ ಹೋರಾಟಗಳು, ಚರ್ಚೆಗಳು ಮಾಡಿಕೊಂಡು ಬಂದಿದ್ದೇವೆ. ಈ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಗಬೇಕಾದರೆ ಅದಕ್ಕೆ ಮೊದಲು ಅರ್ಥ್ ಸ್ಟೇಷನ್ ಆಗಬೇಕಾಗುತ್ತದೆ. ಅದಕ್ಕೆ ಬೇಕಾದ ಎಲ್ಲಾ ಪೂರ್ವ ಸಿದ್ಧತೆಗಳನ್ನು ಮಾಡಿದ್ದಾರೆಯೇ ಇಲ್ಲವೇ ಎನ್ನುವ ಮಾಹಿತಿಯನ್ನು ನಾನು ಕೇಳುತ್ತಿದ್ದೇನೆ. ಇದು ಆಗಬೇಕೆಂದು ಹೇಳಿ ವರ್ಷದಿಂದ ವರ್ಷಕ್ಕೆ ಚರ್ಚೆಯಾಗುತ್ತಲೇ ಬಂದಿದೆ. ಇವತ್ತು ಸರ್ಕಾರದವರು ಏನು ಘೋಷಣೆಯನ್ನು ಮಾಡಿದ್ದಾರೆ ಅದು ಒಳ್ಳೆಯದು, ಆದರೆ ತಾವು ಅದನ್ನು ಬರುವ 31ನೇ ತಾರೀಖು ಪ್ರಾರಂಭ ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಈಶಾನ್ಯ ರಸ್ತೆ ಸಾರಿಗೆ ನಿಗಮವನ್ನು ಗುಲ್ಬರ್ಗದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಹುಬ್ಬಳ್ಳಿ ವಿಮಾನ ನಿಲ್ದಾಣ ಮತ್ತು ಬೆಳಗಾಂ ವಿಮಾನ ನಿಲ್ದಾಣಗಳು ಎರಡೂ ಬಹಳಷ್ಟು ಅಭಿವೃದ್ಧಿಯಾಗಬೇಕಾಗಿದೆ. ಇದರಲ್ಲಿ ರಾಜ್ಯ ಸರ್ಕಾರ ಇನ್ನೂ ಹೆಚ್ಚು ಮುತುವರ್ಜಿಯನ್ನು ತೆಗೆದುಕೊಳ್ಳುವಂತಾದ್ದು ಆಗಬೇಕಾಗಿದೆ. ಇವತ್ತು ಬೆಳಗಾಂ ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣಗಳು ಕೇವಲ ವಸ್ತು ಪ್ರದರ್ಶನಕ್ಕೆ ಇಟ್ಟಂತಹ ವಿಮಾನ ನಿಲ್ದಾಣಗಳಾಗಿವೆ. ಈ ವಿಮಾನ ನಿಲ್ದಾಣಗಳಲ್ಲಿ ವಿಮಾನಗಳ ಹಾರಾಟ ಯಾವಾಗ ಚಾಲು ಆಗುತ್ತವೆಯೋ ಯಾವಾಗ ಬಂದ್ ಆಗುತ್ತವೆಯೋ ಗೊತ್ತಿಲ್ಲ. ಆದ್ದರಿಂದ ಅಲ್ಲಿಗೆ ರನ್‌ವೇ ಹೆಚ್ಚು ಕೊಡುವಂತಾದ್ದು, ಮತ್ತು ಅಲ್ಲಿಗೆ ಬೇಕಾದ ಸೌಲಭ್ಯಗಳನ್ನು ಕೊಡುವಂತಾದ್ದು ಆಗಬೇಕು.

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕನ್ನು ಹುಬ್ಬಳ್ಳಿಯಲ್ಲಿ ಒಂದು ರೀಜನಲ್ ಆಫೀಸನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರಕ್ಕೆ ಹೇಳುತ್ತಿದ್ದರು. ನಾನು ಕರ್ನಾಟಕ ರಾಜ್ಯ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷನಾಗಿ ಹೇಳುತ್ತಿದ್ದೇನೆ, ತಾವು ಕೊಟ್ಟ ಸಲಹೆಯನ್ನು ಪರಿಶೀಲನೆ ಮಾಡುತ್ತಿದ್ದೇನೆ. ಹೊಸದಾಗಿ ಪ್ರಾರಂಭವಾಗತಕ್ಕಂಥ 11 ಸಕ್ಕರೆ ಕಾರ್ಖಾನೆಗಳು ಆ ಭಾಗದಲ್ಲಿ ಬರುವುದರಿಂದ ಆ ಭಾಗದಿಂದ ವರದಿಯನ್ನು ತರಿಸಿ ನಮ್ಮ ಆಡಳಿತ ಮಂಡಲಿಯಲ್ಲಿ ಈ ಬಗ್ಗೆ ಪರಿಶೀಲನೆಯನ್ನು ಮಾಡುತ್ತಿದ್ದೇವೆ. ಆದ್ದರಿಂದ ಆದಷ್ಟು ಬೇಗ ತಮ್ಮ ವಿಚಾರವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇವತ್ತು ವಿಮಾನ ನಿಲ್ದಾಣಗಳ ಅಭಿವೃದ್ಧಿ ಕೇಂದ್ರ ಸರ್ಕಾರದ ವ್ಯಾಪ್ತಿ ಮತ್ತು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆಂದು ನಾನು

ಒಪ್ಪಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ಮೇಲೆ ಏನು ಒತ್ತಡ ತರಬೇಕೋ ಅದನ್ನು ನಾವು ಮಾಡುತ್ತೇವೆ. ರಾಜ್ಯ ಸರ್ಕಾರದಿಂದ ಏನು ಮಾಡಬೇಕೋ ಅದನ್ನು ತಾವು ಮಾಡಿಕೊಡಬೇಕಾಗುತ್ತದೆ. ಇದು ಈಗ ಕೇವಲ ವಸ್ತು ಪ್ರದರ್ಶನಕ್ಕೆ ಇಟ್ಟ ಒಂದು ವಸ್ತುವಾಗಿದೆಯೇ ಹೊರತು ಇದರಿಂದ ಜನರಿಗೆ ಏನೂ ಉಪಯೋಗವಾಗಿಲ್ಲ. ಇವತ್ತು ಸರ್ವಋತು ವಿಮಾನ ನಿಲ್ದಾಣ ಅಲ್ಲಿ ಇಲ್ಲದೇ ಇದ್ದುದರಿಂದ ಆ ಭಾಗದ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಅಲ್ಲಿ ಈ ಒಂದು ವಿಮಾನ ನಿಲ್ದಾಣದ ವ್ಯವಸ್ಥೆ ಇದ್ದರೆ ಆ ಭಾಗದಲ್ಲಿ ಇನ್ನೂ ಹೆಚ್ಚು ಹೆಚ್ಚು ಇಂಡಸ್ಟ್ರೀಗಳು ಬರುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ಮತ್ತು ಸಾರಿಗೆ ವ್ಯವಸ್ಥೆಯನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಹೆಚ್ಚು ಆಸಕ್ತಿಯನ್ನು ವಹಿಸಿದರೆ ಮಾತ್ರ ಆ ಭಾಗ ಹೆಚ್ಚು ಅಭಿವೃದ್ಧಿಯಾಗುವುದಕ್ಕೆ ಸಹಾಯವಾಗುತ್ತದೆ ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ವ್ಯಾಪಾರದ ಮುಖ್ಯವಾದ ಒಂದು ಕೇಂದ್ರ. ಅಲ್ಲಿಗೆ ವಿಮಾನ ನಿಲ್ದಾಣ ಆದರೆ ಅಲ್ಲಿಂದ ಬೆಂಗಳೂರಿಗೆ ಹೆಚ್ಚು ಜನ ಓಡಾಟ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಅದೇ ರೀತಿ ನಾನು ಒಂದೆರಡು ಸಲ ಪ್ರಯಾಣ ಮಾಡಿದೆ. ವಿಮಾನದಲ್ಲಿ 10 ಜನ ಪ್ರಯಾಣ ಮಾಡುವಷ್ಟು ಕೆಪ್ಯಾಸಿಟಿ ಇದ್ದರೆ ಅದರಲ್ಲಿ 5 ಜನ ಮಾತ್ರ ಇದ್ದರು. ಆಗ ನಾನು ಕೇಳಿದೆ ಸಾರ್ ಪ್ರಯಾಣಿಕರೇ ಬರುವುದಿಲ್ಲ. ಎಲ್ಲಾ ಜನ ಬುತ್ತಿ ರೊಟ್ಟಿ ಕಟ್ಟಿಕೊಂಡು ರೈಲು ಹತ್ತುತ್ತಾರೆಂದು ಹೇಳಿದರು.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಹೇಳಿದರು ಅದು ಮೊದಲು ಹಾಗೆಯೇ ಇತ್ತು. ಆದರೆ ಮೊನ್ನೆ ಗುಜರಾತ್ ಏರ್‌ವೇಸ್‌ನವರು 19 ಸೀಟರ್ಸ್ ಒಂದು ವಿಮಾನ ಶುರು ಮಾಡಿದರು. ಅದರಲ್ಲಿ 80 ಪರ್ಸೆಂಟ್ ಆಕ್ಯುಪೆನ್ಸಿ ಇತ್ತು. ಅದು ರೆಗ್ಯುಲರ್ ಆಗಿ ಶುರುವಾಗಿತ್ತು. ಆಮೇಲೆ ಅವರ ಪಾರ್ಟನರ್‌ಗಳಲ್ಲಿ ಏನೋ ಒಡಕು ಬಂದು ಬಂದ್ ಮಾಡಿದರು. ಈಗ ಅವರ ಕಂಪನಿಯನ್ನು ಮುಚ್ಚಿಕೊಂಡು ಹೋದರು. ಈಗ ಅಲ್ಲಿ 18 ಸೀಟರ್ಸ್ ಇಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಟ್ರಾಫಿಕ್ ಸರ್ವೆ ಮಾಡುತ್ತಾರೆ. ಮಾನ್ಯ ವಿರೋಧಪಕ್ಷದ ನಾಯಕರಿಗೆ ಗೊತ್ತು, ಒಂದು ಹೊಸ ಲೈನ್ ಹಾಕಬೇಕಾದರೆ ರೋಡ್ ಸರ್ವೆ ಮಾಡುತ್ತಾರೆ, ಟ್ರಾಫಿಕ್ ಸರ್ವೆ ಮಾಡುತ್ತಾರೆ. ಹಾಗೆಯೇ ಹುಬ್ಬಳ್ಳಿ ಬೆಂಗಳೂರು, ಬೆಂಗಳೂರು ಹುಬ್ಬಳ್ಳಿ ಟ್ರಾಫಿಕ್ ಸರ್ವೆ ಮಾಡಿ ಗುಜರಾತ್ ಏರ್‌ವೇಸ್‌ನವರು ಮೊದಲು ಶುರು ಮಾಡಿದರು ಆಮೇಲೆ ತಾವೇ ಹೇಳಿದ ಹಾಗೆ ಮುಚ್ಚಿಕೊಂಡು ಹೋದರು.

ಶ್ರೀ ಜಗದೀಶ್ ಶೆಟ್ಟರ್ : ಅವರು ಮುಚ್ಚಿಕೊಂಡು ಹೋಗಿದ್ದು ಏಕೆಂದರೆ ಅವರವರಲ್ಲಿ ಇಂಟರ್‌ನಲ್ ಡಿಸ್‌ಪ್ಯೂಟ್, ಪಾಟ್ನರ್‌ಗಳಲ್ಲಿ ಡಿಸ್‌ಪ್ಯೂಟ್. ಹೀಗಾಗಿ ಅವರು ಮುಚ್ಚಿಕೊಂಡು ಹೋದರು. ಅಲ್ಲಿ ರೆಗ್ಯುಲರ್ ಆಗಿ ಕೆಲಸ ಶುರುವಾದರೆ ಚೆನ್ನಾಗಿ ನಡೆಯುತ್ತದೆ. ಜನರಲ್ಲಿ ಆ ಒಂದು ಅಭ್ಯಾಸ ಬೆಳೆಯಬೇಕು. ರೆಗ್ಯುಲರ್ ಆಗಿ ಇದ್ದರೆ ಜನ ಆಡಿಕ್ಟ್ ಆಗುತ್ತಾರೆ ಇಲ್ಲದಿದ್ದರೆ ಸಾಧ್ಯವಿಲ್ಲ. ಅಲ್ಲಿ ವಿಮಾನ ಶುರು ಮಾಡುವುದು ನಂತರ ಬಂದ್ ಮಾಡುವುದೆಂದರೆ ಜನರಲ್ಲಿ

ನಂಬಿಕೆಯೇ ಹೊರಟು ಹೋಗಿದೆ. ಈ ದಿಸೆಯಲ್ಲಿ ಹುಬ್ಬಳ್ಳಿ, ಬೆಳಗಾಂ, ಗುಲ್ಬರ್ಗ, ಬಿಜಾಪುರ, ಬೀದರ್ ಮತ್ತು ಬಳ್ಳಾರಿ ಈ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ಸರ್ಕಾರ ಡೆವಲಪ್ ಮಾಡಿದರೆ ರಾಜ್ಯದ ಬೇರೆ ಬೇರೆ ಭಾಗಗಳು ಡೆವಲಪ್ ಆಗುವುದಕ್ಕೆ ಅನುಕೂಲವಾಗುತ್ತದೆ. ಆ ಒಂದು ಅಭಿವೃದ್ಧಿ ಕೆಲಸವನ್ನು ತಾವು ಮಾಡದಿದ್ದರೆ ದೊಡ್ಡ ದೊಡ್ಡ ಇಂಡಸ್ಟ್ರಿಯವರು ಎಲ್ಲಾ ಬೆಂಗಳೂರಿಗೆ ಬಂದು ನಾವು ಇಂಡಸ್ಟ್ರಿ ಮಾಡುತ್ತೇವೆಂದು ಹೇಳುತ್ತಾರೆ. ಬೇರೆ ಕಡೆ ಇಂಡಸ್ಟ್ರೀಗಳು ಬರುವುದಿಲ್ಲ. ಇವತ್ತು ಹುಬ್ಬಳ್ಳಿಯಲ್ಲಿ ಸಾಫ್ಟ್ ವೇರ್ ಟೆಕ್ನಾಲಜಿ ಪಾರ್ಕ್ ಆದರೆ ಅಲ್ಲಿ ಬಹಳ ಡೆವಲಪ್‌ಮೆಂಟ್ ಆಗುವಂತಹ ಚಾನ್ಸ್ ಇದೆ. ಆ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕು. ನಾನು ತಮಗೆ ಹೇಳುವುದೇನೆಂದರೆ ಕೇವಲ ಸರ್ಕಾರ ಒಂದೆರಡು ಕಛೇರಿಗಳನ್ನು ಮಾತ್ರ ಸ್ಥಳಾಂತರ ಮಾಡಿದರೆ ಆಗುವುದಿಲ್ಲ. ಮತ್ತು ಹುಬ್ಬಳ್ಳಿಯಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಕೊಟ್ಟಿದ್ದೇವೆಂದು ಹೇಳಿದರೆ ಇದು ಎಲ್ಲೋ ಒಂದು ಭಾಗಕ್ಕೆ ಕೊಟ್ಟಂಥಾದ್ದು. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಿಜವಾಗಿಯೂ ಆ ಭಾಗದಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಆಗಿದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕಾಗುತ್ತದೆ. ಮೊನ್ನೆ ಗೌರ್ನಮೆಂಟ್ ಏಜನ್ಸಿ ಒಂದು ಮಾಡಿದರು. ಇವತ್ತು ಯಾವುದೇ ಒಂದು ಭಾಗ ಸಂಪೂರ್ಣವಾಗಿ ಅಭಿವೃದ್ಧಿಯಾಗಿದೆ ಅಂದರೆ ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಆಗಿದೆಯೇ ಇಲ್ಲವೇ ಎನ್ನುವಂತಾದ್ದನ್ನು ನೋಡುವುದು ಅಲ್ಲಿ ಎಜುಕೇಶನ್ ಇರಬಹುದು, ಇಂಡಸ್ಟ್ರೀ ಇರಬಹುದು, ಇನ್ನಿತರೇ ಸೌಲಭ್ಯಗಳು ಇರಬಹುದು ಈ ಸೌಲಭ್ಯಗಳು ಎಲ್ಲಿ ಡೆವಲಪ್‌ಮೆಂಟ್ ಆಗಿದೆಯೋ ಅಲ್ಲಿ ಅಭಿವೃದ್ಧಿಯಾಗಿದೆ ಎಂದು ಹೇಳಬಹುದು. ಅಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಅಭಿವೃದ್ಧಿಯಾಗಿದೆ ಎಂದು ಹೇಳಬಹುದು. ಈ ಭಾಗದಲ್ಲಿ ಆಗಿರುವ ಇಂಡಸ್ಟ್ರೀಗಳನ್ನು ನಾವು ನೋಡಿದರೆ ಈ ಭಾಗ ಎಷ್ಟು ಹಿಂದುಳಿದಿದೆ ಎನ್ನುವುದು ನಮಗೆ ಕಂಡುಬರುತ್ತಿದೆ. ಈ ಬಗ್ಗೆ ಕರ್ನಾಟಕ ಸರ್ಕಾರದ ಒಂದು ಏಜನ್ಸಿ ಸರ್ವೆ ಮಾಡಿದರು. ಅವರು ಯಾರೆಂದರೆ ಟೆಕ್ನಿಕಲ್ ಕನ್‌ಸಲ್‌ಟೆನ್ಸಿ ಸರ್ವಿಸಸ್ ಆ ಆರ್ಗನೈಜೇಶನ್ ಆಫ್ ಕರ್ನಾಟಕ. ಇದು ಸರ್ಕಾರದ ಏಜೆನ್ಸಿ. ಅವರು ಸರ್ವೆ ಮಾಡಿದ ಪ್ರಕಾರ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಏನು ಇಂಡಸ್ಟ್ರೀಗಳು ಇವೆ ಮತ್ತು ದಕ್ಷಿಣ ಕರ್ನಾಟಕದಲ್ಲಿ ಏನು ಇಂಡಸ್ಟ್ರೀಗಳು ಇವೆ ಇವುಗಳನ್ನು ಅವರು ಕಂಪೇರ್ ಮಾಡಿದ್ದಾರೆ. ಅವರು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಅಂಕಿಅಂಶಗಳನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇನೆಂದರೆ,

"As far as the private and joint sector ventures are concerned, there has been an investment of Rs. 12,818.62 crores in 744 medium, and large scale industries in the southern region as against Rs. 2,228.26 crores in 234 Units in the north. Employment generated has been 4.45 lakhs in the southern region and 1.1 lakh in northern one.

In the State public sector undertakings, 17 units with an investment of Rs. 763.68 crores were located in the southern region and four units with Rs. 59.94 crores in the North, providing employment to 30,436 and 6,686

persond respectively. In the small scale industries sector, the imvestment in Southern Karnataka is of the order of 1,888.23 crores providing employment to 8.15 lakh people whereas the figures for northern Karnataka is 737.63 crores in 66,322 units providing employment to 12.15 lakh persons.

In the industrial Co-operatives sector also, Rs.2.15 crores invested by the Government, on 1,239 industrial co-operatives, a share of the north is Rs. 82 lakhs in 525 units. The north accounts for 24 of the 52 textile mills, while the amount invested is Rs. 421 crores through out the State, the north got Rs. 173 crores only.

Then, of the 31 textile mills with an investment of Rs. 137.50 crores employing 22,251, five are located in the northern region with an investment of Rs. 57.15 crores to employ 8,442 persons. Then,

As far as the assistance from the Karnataka State Financial Corporations are concerned, the share of the northern region had been 30,697 units out of 78,835 for the State and the assistance for the region stood at Rs. 593.98 crores out of 2,233.45 crores. Karnataka State Industrial Investment and Development Corporation has financed 1,754 units with 1,718.18 crores in the entire State. The northern region has 431 units with an investment of Rs. 54.39 crores.

From 1988-97, the Single Window Agency had cleared 1,059 projects with an investment of Rs. 8,024.60 crores, the share of the northern region in this is 200 only, of the investment of Rs. 1,702.89 crores and the employment potential is Rs. 34,130 as against 1.61 lakhs for the State.

The high level committee had cleared 96 projects upto 1997 with a proposed investment of Rs. 59,576 crores, the share of the northern Karnataka was 49, with an investment of Rs. 32,545 crores.

Regarding acquisition of lands. of the 66 industrial areas developed by the Karnataka Industrial Areas Development Board, to the extent of 2.1 lakh hectares, the share of the Northern Karnataka has been 27, covering an area of 6,818 hectares only. Even the Karnataka State Small Industries Development Corporation has constructed 5,497 sheds in the entire state

covering an area of 2,256 acres, in Northern Karnataka only 1,498 sheds have been constructed covering 972 acres. Ratio is 3.1 and 4.1.

As far as subsidies are concerned, from 1995 to 1997-98, the Department of Commerce and Industries, sanctioned 175.25 crores as investment subsidies to the industrial units and northern Karnataka accounted only for 39.68 crores.

175 ಕೋಟಿ ರೂಪಾಯಿಯೊಳಗೆ ನಮಗೆ ಸಿಕ್ಕಿರುವುದು 39.68 ಕೋಟಿಗಳು ಮಾತ್ರ. ಅಂದರೆ ಯಾವರೀತಿಯಲ್ಲಿ ನೆಗ್ಲಿಜೆನ್ಸ್ ಆಗಿದೆ ಎಂಬುದನ್ನು ನೋಡಬಹುದು. ಸರಕಾರಿ ಏಜೆನ್ಸಿ, ಸೂಕ್ತ ರೀತಿಯಲ್ಲಿ ಸರ್ವೇ ಮಾಡಿಕೊಟ್ಟಂಥ ರಿಪೋರ್ಟ್ ಇದಾಗಿದೆ. ಇವೊತ್ತು ಉತ್ತರ ಕರ್ನಾಟಕ ಭಾಗದ ಜನರು ಸರಕಾರದವರು ನಮ್ಮ ಭಾಗವನ್ನು ನಿರ್ಲಕ್ಷ ಮಾಡಿದ್ದಾರೆ ಎಂಬ ಭಾವನೆಯಿಂದ ಮಾತುಗಳನ್ನು ಈ ಕಾರಣಕ್ಕಾಗಿಯೇ ಹೇಳುತ್ತಾ ಇದ್ದಾರೆ. ಈ ಕಾರಣದಿಂದ ನಮ್ಮಲ್ಲಿ ಅಭಿವೃದ್ಧಿಯಾಗಿಲ್ಲ ಎಂಬ ದೃಷ್ಟಿಕೋನದಿಂದ ಈ ಮಾತುಗಳನ್ನು ಅವರು ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಕೆಲವೊಂದು ಘೋಷಣೆಗಳನ್ನು ಮಾಡಿದ್ದಾರೆ. ಉತ್ತರ ಕರ್ನಾಟಕ ಭಾಗಕ್ಕೆ ಕೆಲವೊಂದು ಹೆಡ್‌ಆಫೀಸ್‌ಗಳನ್ನು ಕಳುಹಿಸುತ್ತಾ ಇದ್ದೇವೆ. ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕನ್ನು ಅಲ್ಲಿ ಸ್ಥಾಪಿಸುತ್ತೇವೆ, ಎಂದು ಮುಂತಾಗಿ ಹೇಳಿದ್ದಾರೆ. ಹಾಗೆ ಅವರು ಕ್ರಮ ತೆಗೆದುಕೊಂಡಿದ್ದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದು, ಅಲ್ಲಿದ್ದಂಥ ನೆಗ್ಲಿಜೆನ್ಸಿ, ಅಲ್ಲಿರುವುಂಥ ಬ್ಯಾಕ್‌ವರ್ಡ್‌ನೆಸ್, ಮುಂತಾಗಿ ಇನ್ನಿತರ ವಿಚಾರಗಳನ್ನು ನೋಡಿದರೆ ಮುಖ್ಯಮಂತ್ರಿಯವರು ಕೊಡುವ ಘೋಷಣೆಗಳು ಬಹುಶ: ಒಂದು ಪರ್‌ಸೆಂಟ್‌ನಷ್ಟು ಕೂಡ ಆಗಲಾರದು ಎಂದು ಭಾವಿಸುತ್ತೇನೆ. ಆದ್ದರಿಂದ ಈ ಕುರಿತು ತಾವುಗಳು ಹೆಚ್ಚಿನ ಕಾಳಜಿಯನ್ನು ಮಾಡಬೇಕಾಗುತ್ತದೆ. ರೀಜನಲ್ ಇಂಬ್ಯಾಲೆನ್ಸ್ ಕುರಿತು ಮಾನ್ಯ ಮುಖ್ಯಮಂತ್ರಿಯವರು ಒಂದು ಸಮಿತಿಯನ್ನು ರಚನೆ ಮಾಡಿದ್ದರು. ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚಿಸಿದ್ದರು. ಮಾನ್ಯ ಜಯರಾಂ ರಮೇಶ್‌ರವರು ಈ ಕುರಿತು ಹುಬ್ಬಳ್ಳಿಗೆ ಸಂದರ್ಶನ ನೀಡಿದ್ದರು. ಇದರ ಬಗ್ಗೆ ಅವರು ಸೂಕ್ತ ರೀತಿಯಲ್ಲಿ ಡಿಸ್‌ಕಶನ್ ಮಾಡಿದ್ದರು. ಇವೊತ್ತು ಸರಕಾರದ ಏಜೆನ್ಸಿಯವರೇ ಮಾಡಿದ ರಿಪೋರ್ಟ್‌ನಲ್ಲಿ ಕೂಡ ನೆಗ್ಲಿಜೆನ್ಸಿ ಯಾವರೀತಿಯಲ್ಲಿ ಆಗಿದೆ ಎಂದು ಹೇಳಿದ್ದಾರೆ. ಅವರು ಕೂಡ ಇದೇ ಮಾಹಿತಿಗಳನ್ನು ನೋಡಿಕೊಂಡು ಬಂದಿದ್ದಾರೆ. ಇವೊತ್ತು ಅಲ್ಲಿ ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಎನ್ನುವಂತಾದ್ದು, ಅಲ್ಲಿಯ ಜನರಿಗೆ ಅನ್ಯಾಯವಾಗಿದೆ ಎನ್ನುವಂಥಾದ್ದು, ಆ ಕುರಿತು ಅಂಕಿಸಂಖ್ಯೆಗಳು ಇರುವಂಥಾದ್ದು, ಮುಂತಾಗಿ ಪ್ರೈಮಾಫೇಸಿ ಕೇಸ್ ಇವೊತ್ತು ಸರಕಾರದ ಮುಂದಿದೆ. ಇಂಥ ಸಂದರ್ಭದಲ್ಲಿ ನಾವು ಹಲವಾರು ಯೋಜನೆಗಳ ಮುಖಾಂತರ ಆ ಒಂದು ಇಂಬ್ಯಾಲೆನ್ಸನ್ನು ತಡೆಗಟ್ಟಲು ಪ್ರಯತ್ನ ಮಾಡಬೇಕೇ ಹೊರತು, ಕೇವಲ ಆಯೋಗಗಳನ್ನು, ಕಮೀಶನ್‌ಗಳನ್ನು, ಟಾಸ್ಕ್‌ಫೋರ್ಸ್‌ಗಳನ್ನು ಮಾಡಿಕೊಳ್ಳುತ್ತಾ ಹೋಗುವುದರಿಂದ ಯಾವ ರಿಸಲ್ಟ್ ಕೂಡ ಅದರಿಂದ ಬರುವುದಿಲ್ಲ ಮುಂದೆಯೂ ಕೂಡ ನಾವು ಹಾಗೆಯೇ ಉಳಿದುಕೊಳ್ಳುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಈ ಕುರಿತು ಒಂದು ಸಣ್ಣ ಉದಾಹರಣೆಯನ್ನು ಕೊಡಬಯಸುತ್ತೇನೆ. ನಮ್ಮ ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆ ಇದೆ. ಅಲ್ಲಿ 35 ಕೋಟಿ ರೂಪಾಯಿಗಳ ಒಂದು ವಾಟರ್‌ಪ್ರಾಜೆಕ್ಟ್ ಇದೆ. ಅದನ್ನು ದಯಮಾಡಿ ಬಿಡುಗಡೆ ಮಾಡಿ ಎಂದು ನಾವು ಕೇಳುತ್ತಾ ಇದ್ದೇವೆ. ಆದರೆ ಅದನ್ನು ಇದು ತನಕವೂ ಬಿಡುಗಡೆ ಮಾಡುತ್ತಾ ಇಲ್ಲ. ಆ ಬಗ್ಗೆ ಕ್ಯಾಬಿನೆಟ್ ಡಿಸಿಶನ್ ತೆಗೆದುಕೊಳ್ಳುತ್ತಾ ಇಲ್ಲ. ಇದೇ ತರಹದಲ್ಲಿ ಹುಬ್ಬಳ್ಳಿ-ಧಾರವಾಡ, ಬೆಳಗಾಂ, ಬಿಜಾಪುರ, ಗುಲ್ಬರ್ಗ, ಬಳ್ಳಾರಿ ಮುಂತಾದ ಕಡೆಗಳಲ್ಲಿ ಇಂಥ ಸಣ್ಣ ಸಣ್ಣ ವಿಚಾರಗಳು ಇರಬಹುದು, ಅವುಗಳನ್ನು ನಿರ್ಲಕ್ಷ್ಯ ಮಾಡಬಾರದು. ಇವೊತ್ತು ನಾವು ಬೆಂಗಳೂರು ನಗರದಲ್ಲಿ ಹಲವಾರು ಪ್ರಾಜೆಕ್ಟ್‌ಗಳನ್ನು ಇಂಪ್ಲಿಮೆಂಟ್ ಮಾಡುತ್ತಾ ಇದ್ದೇವೆ. ಅದಕ್ಕೆ ಹಣವನ್ನು ಕೊಡುತ್ತಾ ಇದ್ದೇವೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯದ್ದು ಏಳುವರೆ ಕೋಟಿ ರೂಪಾಯಿಗಳ ಅಕ್ಟ್ರಾಯ್ ಬಾಕಿ ಇದೆ. ಅದನ್ನು ಇವೊತ್ತಿಗೂ ಕೊಟ್ಟಿಲ್ಲ, ಆ ಹಣವನ್ನು ಬಿಡುಗಡೆ ಮಾಡಿಲ್ಲ. ಐದಾರು ತಿಂಗಳುಗಳಿಂದ ಬಾಕಿ ಇರುವ ಈ ಹಣವನ್ನು ಏಕೆ ಕೊಟ್ಟಿಲ್ಲ? ಇಂಥ ಅನೇಕ ಸಣ್ಣಪುಟ್ಟ ವಿಷಯಗಳು ಇವೆ. ಇದರಿಂದಾಗಿ ಎಷ್ಟೋ ಡೆವಲಪ್‌ಮೆಂಟ್ ವರ್ಕ್ಸ್ ಹೆಲ್ಡ್‌ಅಪ್ ಆಗುತ್ತವೆ. ನಮ್ಮ ಉತ್ತರ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಇಂಥ ಸಮಸ್ಯೆಯಿದೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದ 13ನೇ ಪ್ಯಾರಾದಲ್ಲಿ ಹೇಳಿದ್ದಾರೆ, "ಕರ್ನಾಟಕ ಅಂದರೆ ಬೆಂಗಳೂರಲ್ಲ, ಕರ್ನಾಟಕ ಬೆಂಗಳೂರಿಗಿಂತ ವಿಶಾಲವಾದುದು. ಬೆಂಗಳೂರನ್ನು ಜಗತ್ತಿನ ಹತ್ತು ಅಗ್ರಗಣ್ಯ ನಗರಗಳಲ್ಲಿ ಒಂದು ಎಂದೇ ಗುರುತಿಸಲಾಗುತ್ತಿದೆ. ನಾವು ರಾಜ್ಯದ ಎಲ್ಲಾ ಪ್ರಾಂತ್ಯಗಳನ್ನು ಅಭಿವೃದ್ಧಿಗೊಳಿಸಬೇಕು. ಅದರಲ್ಲೂ ವಿಶೇಷವಾಗಿ ನಮ್ಮೆಲ್ಲ ಸಂಪನ್ಮೂಲ ಬಳಸಿ ಉತ್ತರ ಕರ್ನಾಟಕವನ್ನು ಸಮಗ್ರವಾಗಿ ಪೋಷಿಸಿ ಅಭಿವೃದ್ಧಿಯ ಮುಖ್ಯವಾಹಿನಿಗೆ ತರಬೇಕು"- ಎಂಬ ಒಳ್ಳೆಯ ಮಾತನ್ನು ಹೇಳಿದ್ದಾರೆ.

ಮಾನ್ಯ ಮುಖ್ಯಮಂತ್ರಿಯವರು ಅಧಿಕಾರವನ್ನು ವಹಿಸಿಕೊಂಡ ಮೇಲೆ, ಪ್ರಮಾಣವಚನ ಸ್ವೀಕರಿಸಿದ ಮೇಲೆ ಪ್ರಥಮ ರಾಜ್ಯಪಾಲರ ಭಾಷಣದ ಮೇಲಿನ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದರು. ಅದಕ್ಕೆ ನಾವು ಆಗ ಕ್ರಿಟಿಸೈಸ್ ಮಾಡಿದ್ದೆವು. ಬೆಂಗಳೂರಿನ ಅಭಿವೃದ್ಧಿಯಾದರೆ ಅದು ಕರ್ನಾಟಕದ ಅಭಿವೃದ್ಧಿಯ ದಿಕ್ಸೂಚಿ ಎಂಬ ರೀತಿಯಲ್ಲಿ ಬೆಂಗಳೂರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಆ ಮಾತುಗಳನ್ನು ಆಡಿದ್ದರು. ಆ ಮಾತುಗಳನ್ನು ನಾವುಗಳು ಟೀಕಿಸಿದ್ದೆವು. ಕೇವಲ ಬೆಂಗಳೂರನ್ನು ಮಾತ್ರ ಡೆವಲಪ್‌ಮೆಂಟ್ ಮಾಡಲು ಹೋಗಬೇಡಿ, ಪೂರ್ಣ ಕರ್ನಾಟಕ ರಾಜ್ಯವನ್ನು ಅಭಿವೃದ್ಧಿ ಮಾಡಬೇಕೆಂಬ ಮಾತನ್ನು ಆ ಸಂದರ್ಭದಲ್ಲಿ ಹೇಳಿದ್ದೆವು. ಇದನ್ನು ನಾವು ಹೇಳಿಕೊಳ್ಳುತ್ತಾ ಬಂದಿದ್ದೇವೆ. ಬೆಂಗಳೂರನ್ನು ಸಿಂಗಾಪುರವನ್ನಾಗಿ ಮಾಡಲು ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಅದೇ ರೀತಿಯಲ್ಲಿ 5-10 ಪರ್‌ಸೆಂಟ್‌ನಷ್ಟಾದರೂ ಬೇರೆ ಬೇರೆ ನಗರಗಳನ್ನು ಸಿಂಗಾಪುರವನ್ನಾಗಿ ಮಾಡಲು ಪ್ರಯತ್ನಿಸಬೇಕು. ಸಿಂಗಾಪುರದಷ್ಟು ಬೇಡ. ಮೂಲಭೂತವಾಗಿ ನಮಗೆ ಬೇಕಾಗುವ ಕುಡಿಯುವ ನೀರನ್ನು ಮತ್ತು ರಸ್ತೆಗಳನ್ನು ಮಾಡಿಕೊಡುವ ಅವಕಾಶವನ್ನು ಕಲ್ಪಿಸಿಕೊಡಲಿ. ಅಥವಾ ಇನ್‌ಫ್ರಾಸ್ಟ್ರಕ್ಚರನ್ನು ಡೆವಲಪ್ ಮಾಡಿಕೊಟ್ಟರೂ ಸಾಕು. ಈ ಚಿಂತನೆ ನಮ್ಮಲ್ಲಿ ನಡೆಯಲೇಬೇಕು. ಇಂಥ ಮಾತುಗಳು ಬಜೆಟ್‌ನಲ್ಲಿ ಬಂದಿವೆ. ಇದು ಒಳ್ಳೆಯ ಕ್ರಮ. ಈ ಮಾತಿನ ಪ್ರಕಾರ ಇದು ಅನುಷ್ಠಾನವಾಗಬೇಕಾಗಿದೆ.

ಇದು ಕೇವಲ ಮಾತುಗಳಾಗಿ ಉಳಿಯಬಾರದು. ಆಗ ಮಾತ್ರ ರಾಜ್ಯದ ಜನತೆಗೆ ಇಂಥ ಒಂದು ಸಂದೇಶವನ್ನು ನಾವು ಹೇಳುವುದಕ್ಕೆ ಸಾಧ್ಯವಾಗುತ್ತದೆ.

4.30 ಪಿ.ಎಂ.

ಮೊನ್ನೆ ತಾವು ಅವಕಾಶ ಕೊಟ್ಟ ಸಮಯದಲ್ಲಿ ಹೈಕೋರ್ಟ್ ಬೆಂಚ್ ಬಗ್ಗೆ ನಾನು ಪ್ರಸ್ತಾಪಮಾಡಿದ್ದೆ. ಅದಕ್ಕೆ ಹೆಚ್ಚಿಗೆ ನಾನು ಹೋಗುವುದಿಲ್ಲ 27ನೇ ತಾರೀಖು ಧಾರವಾಡದ ವಕೀಲರು ಅಧ್ಯಕ್ಷರು ಹೈಕೋರ್ಟ್ ಮುಂದೆ ಧರಣಿ ಸತ್ಯಾಗ್ರಹ ಮಾಡುವವರಿದ್ದಾರೆ ಎಂದು ಶೂನ್ಯ ವೇಳೆಯಲ್ಲಿ ಅದನ್ನು ಮೊನ್ನೆ ಪ್ರಸ್ತಾಪಿಸಿದ್ದೆ. ನಿನ್ನೆ ಅವರು ಬಂದರು. 300 ಜನ ವಕೀಲರನ್ನು ಅರೆಸ್ಟ್ ಮಾಡಿದರು. ಉತ್ತರ ಕರ್ನಾಟಕದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ: ಸಮಗ್ರವಾಗಿ ಉತ್ತರ ಕರ್ನಾಟಕವನ್ನು ನಾವು ಅಭಿವೃದ್ಧಿ ಮಾಡುತ್ತೇವೆ ಎಂದು ನಾನು ಒಂದೇ ಮಾತಿನಲ್ಲಿ ಹೇಳುವುದು: ಮುಖ್ಯಮಂತ್ರಿಗಳು ಇದರಲ್ಲಿ ಪರ್ಸನಲ್ ಇಂಟರೆಸ್ಟ್ ತೆಗೆದುಕೊಳ್ಳಲಿ. ಕಾನೂನು ಸಚಿವರೂ ಪರ್ಸನಲ್ ಇಂಟರೆಸ್ಟ್ ತೆಗೆದುಕೊಳ್ಳಲಿ. ಇದು ಅಸಾಧ್ಯವಾದ ಕೆಲಸವಲ್ಲ. ಇವರಿಬ್ಬರೂ ಮುಖ್ಯನ್ಯಾಯಾಧೀಶರನ್ನು ಭೇಟಿಯಾಗಿ ಸ್ವಲ್ಪ ಒತ್ತಡ ಕೊಟ್ಟರೆ ನಮ್ಮ ಹೈಕೋರ್ಟಿನಿಂದ ಒಪ್ಪಿಗೆ ಸಿಗಲಿಕ್ಕೆ ಎಳ್ಳಷ್ಟೂ ಮಾತಿಲ್ಲ.

ಶ್ರೀ ಎಂ.ಎಲ್. ಉಸ್ತಾದ್ : ಅಧ್ಯಕ್ಷರೇ, ಉತ್ತರ ಕರ್ನಾಟಕ ಅಂದರೆ ಹುಬ್ಬಳ್ಳಿ ಧಾರವಾಡವಲ್ಲ ಒಂದು ಜಸ್ಟೀಸ್ ಕಮೀಶನ್ನಿನ ಪ್ರಕಾರ ಹೈಕೋರ್ಟ್ ಪೀಠ ಬಿಜಾಪುರದಲ್ಲೇ ಆಗಬೇಕೂಂತ ಆಗಿದೆ. ಯಾವಾಗ ನೋಡಿದರೂ ಉತ್ತರ ಕರ್ನಾಟಕ ಅಂದರೆ ಹುಬ್ಬಳ್ಳಿ-ಧಾರವಾಡ ಅಂತಾರೆ.

ಶ್ರೀ ಜಗದೀಶ ಶೆಟ್ಟರ್ : ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆಗಬೇಕು ಎಂದು ನಾನು ಹೇಳಿದ್ದು. ಸರ್ಕಾರದವರೂ ಇದರ ಬಗ್ಗೆ ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಲಿ.

(ಒಬ್ಬ ಮಾನ್ಯ ಸದಸ್ಯರು ಅದು ಬೆಳಗಾಂನಲ್ಲಿ ಆಗಬೇಕು ಎಂದು ಕೂಗಿ ಹೇಳಿದರು)

ಶ್ರೀ ಎಂ.ಎಲ್. ಉಸ್ತಾದ್ : ಜಸ್ಟೀಸ್ ಕಮೀಶನ್ನಿನ ಪ್ರಕಾರ ಸ್ವಸ್ಥವಾದ ಜಾಗವೆಂದರೆ ಬಿಜಾಪುರ. ಹಾಗೆಂತ ವರದಿಯಿದೆ. ಯಾವಾಗ ನೋಡಿದರೂ ನಾರ್ತ್ ಕರ್ನಾಟಕ ಅಂದರೆ ಹುಬ್ಬಳ್ಳಿ-ಧಾರವಾಡವೇನು? ಉಳಿಕೆ ಜಿಲ್ಲಾದವರು ಯಾರೂ ಕಾಣುವುದಿಲ್ಲವೆ?

ಶ್ರೀ ಮಾಲಿಕಯ್ಯ ಗುತ್ತೇದಾರ್ : ಜಗದೀಶ್ ಶೆಟ್ಟರ್‌ರವರು ವಿರೋಧ ಪಕ್ಷದ ನಾಯಕರಾಗಿ ಬರೀ ಹುಬ್ಬಳ್ಳಿ ಬಗ್ಗೆ ಚಿಂತೆ ಮಾಡಬಾರದು. ಗುಲ್ಬರ್ಗ ಬಿಜಾಪುರದ ಬಗ್ಗೇನೂ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ತಮ್ಮ ಮೂಲಕ ಉತ್ತರ ಕರ್ನಾಟಕದ ಎಲ್ಲ ಸದಸ್ಯರಿಗೂ ಮನವಿ ಮಾಡಿಕೊಳ್ಳುತ್ತೇನೆ: ಹೈಕೋರ್ಟ್‌ನವರು ಎಲ್ಲಿಯಾದರೂ ಮಾಡಲಿ, ಒಟ್ಟಿನಲ್ಲಿ ಮಾಡಲಿ. ಗುದ್ದಾಡಿ ಕೊನೆಗೆ ಅದೂ ಆಗದಂತೆ ಮಾಡುತ್ತೇವೆ ನಾವು. ಹೈಕೋರ್ಟಿನವರು ಬಿಜಾಪುರಕ್ಕಾದರೂ ಹೇಳಲಿ, ಬೆಳಗಾವಿಗಾದರೂ ಹೇಳಲಿ, ನಾವು ಒಪ್ಪಿಕೊಳ್ಳೋಣ.

ಶ್ರೀ ಜಗದೀಶ ಶೆಟ್ಟರ್ : ಉತ್ತರ ಕರ್ನಾಟಕ ಭಾಗದಿಂದ ಬಂದ ಸದಸ್ಯರ ಭಾವನೆಗಳನ್ನು ನಾನೂ ಅರ್ಥಮಾಡಿಕೊಂಡಿದ್ದೇನೆ. ಹೈಕೋರ್ಟಿನವರು ತೀರ್ಮಾನ ತೆಗೆದುಕೊಂಡು ಎಲ್ಲಿ ಮಾಡುತ್ತೇವೆ ಎಂದು ಹೇಳಲಿ. ನಾನು ಹುಬ್ಬಳ್ಳಿ ಎಂದು ಹೇಳಿಲ್ಲ. ಹಿಂದೆ ಒಮ್ಮೆ ಚೀಫ್ ಜಸ್ಟೀಸರನ್ನು ಭೇಟಿ ಮಾಡಿದಾಗ ಅವರು ಅದೇಮಾತು ಹೇಳಿದರು. ಏನ್ರಪ್ಪ ಅಲ್ಲಿ ಗುಲ್ಬರ್ಗದಲ್ಲಿ ಚಳುವಳಿ ನಡೆದಿದೆ ಬಿಜಾಪುರದಲ್ಲೂ ಚಳುವಳಿ ನಡೆದಿದೆ, ಬೆಳಗಾವಿಯಲ್ಲೂ ಚಳುವಳಿ ಶುರುವಾಗಿದೆ. ಮತ್ತೆ ಎಲ್ಲಿ ಕೊಡಬೇಕು ಎಂದು ಆಗ ನಾವು ಹೇಳಿದೆವು ನೀವು ಎಲ್ಲೀಯಾದರೂ ಕೊಡಿರಿ, ನಿಜವಾಗೂ ಎಲ್ಲಿ ಜೆನ್ಯೈಸಿಟಿ ಇದೆ ಎಂದು ಡಿಸೈಡ್ ಮಾಡಿ ತೀರ್ಮಾನ ತೆಗೆದುಕೊಳ್ಳಿರಿ ಅಂತ. ಇವತ್ತಿಗಾದರೂ ಅದೇ ಮಾತನ್ನು ಹೇಳುತ್ತೇನೆ. ಎಲ್ಲಿಯಾದರೂ ಮಾಡಿರಿ, ಆದರೆ ನಾರ್ತ್ ಕರ್ನಾಟಕದಲ್ಲಿ ಒಂದು ಪ್ಲೇಸ್‌ನಲ್ಲಿ ಮಾಡಿರಿ. ಇದು ಕ್ಲೈಂಟ್ಸ್ ಅನುಕೂಲದ ಸಲುವಾಗಿ ಮಾಡುವಂಥಾದ್ದು. ಅದರ ಬಗ್ಗೆ ಮುಖ್ಯಮಂತ್ರಿಗಳು ಸ್ವಲ್ಪ ಪರ್ಸನಲ್ಲಾಗಿ ಇಂಟರೆಸ್ಟ್ ತೆಗೆದುಕೊಂಡು ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ : ಪರ್ಸನಲ್ ಇಂಟರೆಸ್ಟ್ ಅಂದರೆ ಏನು ಎಂದು ದಯವಿಟ್ಟು ವಿವರಣೆ ಕೊಟ್ಟರೆ ನನಗೆ ಮಾರ್ಗದರ್ಶನ ಮಾಡಿದಂತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಕೇಳಿದ್ದು ಸರಿಯಾಯಿತು, ಹಾಗೆಂದರೆ ಕಳೆದ ಅಧಿವೇಶನದ ಸಮಯದಲ್ಲಿ ಇದನ್ನು ನಾನು ಪ್ರಸ್ತಾಪ ಮಾಡಿದ್ದೆ. ಆಗ ನಾನು ಒಂದು ಮಾತು ಹೇಳಿದ್ದೆ: ಮುಖ್ಯಮಂತ್ರಿಗಳು ಮುಖ್ಯನ್ಯಾಯಾಧೀಶರನ್ನು ಹೈಕೋರ್ಟ್ ಪೀಠದ ಸಲುವಾಗಿ ಭೇಟಿಯಾಗಿ ಬನ್ನಿ, ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿರಿ ಎಂದು. ಆದರೆ ಕಳೆದ ಐದು ತಿಂಗಳ ಅವಧಿಯಲ್ಲಿ ನೀವು ಒಂದು ಸಲವೂ ಭೇಟಿಯಾಗಲಿಲ್ಲ. ಪರ್ಸನಲ್ ಅಂದರೆ ಇದರ ಬಗ್ಗೆ ಕಳಕಳಿ ವಹಿಸುವುದು, ಮುತುವರ್ಜಿ ವಹಿಸುವುದು ಎಂದು ಅರ್ಥ.

ಶ್ರೀ ಎಸ್.ಎಂ. ಕೃಷ್ಣ : ತಮಗೆ ಒಂದು ಕೌಂಟರ್ ಪ್ರಪೋಜಿಶನ್ ಕೊಡುತ್ತೇನೆ: ಕೇವಲ ಕಾನೂನು ಮಂತ್ರಿ ಮತ್ತು ಮುಖ್ಯಮಂತ್ರಿ ಚೀಫ್ ಜಸ್ಟೀಸರನ್ನು ನೋಡುವ ಬದಲು ಈ ಸದನದ ಎಲ್ಲ ಪಕ್ಷಗಳ ನಾಯಕರೂ ಕೂಡ ಹೋಗಿ ಅವರನ್ನು ನೋಡೋಣ. ನೋಡಿದರೆ, ಹೇಗೆ ಸ್ಪಂದಿಸುತ್ತೇವೆ ನಿಮ್ಮ ಸಲಹೆಗಳಿಗೆ ನಾವು.

ಶ್ರೀ ಜಗದೀಶ ಶೆಟ್ಟರ್ : ನಮ್ಮ ಸಲಹೆಗೆ ಮುಖ್ಯಮಂತ್ರಿಗಳು ಸ್ಪಂದಿಸಿದ್ದಾರೆ ಅದಕ್ಕೆ ಧನ್ಯವಾದಗಳು. ಎಲ್ಲರೂ ಕೂಡಿ ಹೋಗಿ ಚೀಫ್ ಜಸ್ಟೀಸರನ್ನು ಕನ್ವಿನ್ಸ್ ಮಾಡೋಣ. ಹಾಗೆ ಇದರಲ್ಲಿ ಬಹುಶ: ನಾವು ಸಕ್ಸೀಡ್ ಆಗುತ್ತೇವೇನೋ ಎಂಬ ನಂಬಿಕೆ ನನಗಿದೆ. ಅದಕ್ಕಾಗಿ ಆ ದಿಸೆಯಲ್ಲಿ ಪ್ರಯತ್ನಿಸೋಣ ಎಂಬ ಮಾತು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಇದರಲ್ಲಿ ಸರ್ಕಾರದ ತಪ್ಪಿಲ್ಲ ಯಾವ ಸರ್ಕಾರ ಆದರೂ ಇರಬಹುದು. ಖಂಡಿತವಾಗಿ ಸರ್ಕಾರವನ್ನು ಬೈಯ್ದುಕೊಂಡು ಹೋಗುವುದು ಸರಿಯಲ್ಲ ಎಂಬುದು ನನ್ನ ವಾದ. ಆದ್ದರಿಂದ ಮುಖ್ಯಮಂತ್ರಿಗಳು ಒಳ್ಳೆಯ ರೀತಿಯಲ್ಲಿ ಏನು ಸಲಹೆ ಮಾಡಿದರು ಆ ರೀತಿ ಮಾಡೋಣ.

ಶ್ರೀ ಎಂ.ಎಲ್. ಉಸ್ತಾದ್ : ಅದರಲ್ಲಿ ಎಲ್ಲ ಪಕ್ಷದವರನ್ನೂ ಕರೆದುಕೊಳ್ಳಿ. ನಾವೇನು ಬಿಜಾಪುರ ಬಾಗಲಕೋಟೆ ಗುಲ್ಬರ್ಗ ಭಾಗಗಳ ವಕೀಲರು ಇಲ್ಲಿದ್ದೇವೆ ನಮ್ಮನ್ನೂ ನಿಮ್ಮ ನಿಯೋಗದಲ್ಲಿ ತೆಗೆದುಕೊಳ್ಳಬೇಕೂಂತ ಮನವಿ ಇದೆ.

ಶ್ರೀ ಜಗದೀಶ ಶೆಟ್ಟರ್ : ಅಧ್ಯಕ್ಷರೇ, ಇನ್ನೊಂದು ಬಹು ಮುಖ್ಯವಾಗಿ ಹೇಳುವಂಥಾದ್ದು ನಮ್ಮಲ್ಲಿ ಜನರೇಟ್ ಆಗುವ ಪವರ್‌ನ 80 ಪರ್ಸೆಂಟ್ ನಾರ್ತ್ ಕರ್ನಾಟಕದಲ್ಲಿ ಆಗುತ್ತದೆ. ಆದರೆ ಅದು ಉಪಯೋಗವಾಗುವುದು ದಕ್ಷಿಣ ಕರ್ನಾಟಕಕ್ಕೆ. ಜೊತೆಗೆ ರಾಜ್ಯ ಹೆದ್ದಾರಿ ಇರಬಹುದು ಜಿಲ್ಲಾ ಮುಖ್ಯರಸ್ತೆ ಇರಬಹುದು- ಇವುಗಳ ಬಗ್ಗೇನೂ ಸರ್ಕಾರ ಹೆಚ್ಚಿನ ಕಾಳಜಿಯಿಂದ ಸರ್ಕಾರ ಕ್ರಮ ತೆಗೆದುಕೊಂಡಿರುವುದಕ್ಕೋಸ್ಕರ ಆ ನಾರ್ತ್ ಕರ್ನಾಟಕ ರೀಜನಲ್ ಇಂಬ್ಯಾಲೆನ್ಸ್ ಇದೆ ಆ ಕೋನದಿಂದ ಹೊರಬರುವುದಕ್ಕೆ ಸಾಧ್ಯವಿದೆ. ಕೆಲವೊಂದು ಇವೆ. ಕಾರವಾರ-ಗುಟ್ಟಿ ರಸ್ತೆ, ಚಿತ್ರದುರ್ಗ-ಬೆಳಗಾಂ, ಬಿಜಾಪುರ-ಹುಮ್ನಾಬಾದ್ ರಸ್ತೆ, ಮುಂಬೈ-ಹೈದರಾಬಾದ್ ರಸ್ತೆ ಈ ಕೆಲವು ಸ್ಟೇಟ್ ಹೈವೇಸನ್ನು ನಾವು ಡೆವಲಪ್ ಮಾಡಿದರೆ ನ್ಯಾಷನಲ್ ಹೈವೆಗಳಿಗೆ ಇವು ಜೋಡಣೆ ಆಗುತ್ತದೆ. ಮತ್ತು ಎಲ್ಲ ರೀಜನ್ನೂ ಒಂದು ಕಡೆ ಸೇರಲಿಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಸ್ಟೇಟ್ ಹೈವೇಗಳನ್ನು ಡಿಸ್ಟ್ರಿಕ್ಟ್‌ನ ಮುಖ್ಯರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಪ್ರಯತ್ನ ಮಾಡಿದರೆ ಆಗ ನಾವು ಹೆಚ್ಚಿನ ಸಾಧನೆ ಮಾಡಲಿಕ್ಕೆ ಸಾಧ್ಯವಿದೆ. ಅದೇ ರೀತಿ ಕಾರವಾರ ಬಂದರನ್ನು ಅಭಿವೃದ್ಧಿಪಡಿಸಿದರೆ ಸರ್ವಋತು ಬಂದರು ಮಾಡಿದರೆ ಬಹಳ ಸಾಧನೆ ಮಾಡಲು ಸಾಧ್ಯವಿದೆ. ಆ ದಿಸೆಯಲ್ಲಿ ಸರ್ಕಾರ ಚಿಂತನೆ ಮಾಡಲಿ ಮತ್ತು ಈಗಾಗಲೇ ಮಾನ್ಯ ಸಚಿವ ಧರ್ಮಸಿಂಗರು ಪ್ರಕಟಿಸಿದ್ದಾರೆ ಜೇವರ್ಗಿ-ಸಂಕೇಶ್ವರ ರಸ್ತೆ, ಬೀದರ್-ಶ್ರೀರಂಗಪಟ್ಟಣ ರಸ್ತೆ ಇವನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಅವರು ಡಿಸಿಶನ್ ತೆಗೆದುಕೊಂಡಿದ್ದಾರೆ. ಇದು ಬೇಗ ಆಗಬೇಕಾಗಿದೆ. ಇಂಟರ್ ಡಿಸ್ಟ್ರಿಕ್ಟ್ ಇರಬಹುದು ಅಥವಾ ಇಂಟರ್‌ಸ್ಟೇಟ್ ರಸ್ತೆಗಳಿರಬಹುದು ಇಂಥವನ್ನು ಅಭಿವೃದ್ಧಿಪಡಿಸಿದರೆ ಬಹಳ ಬದಲಾವಣೆ ಮತ್ತು ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ. ಆ ದಿಸೆಯಲ್ಲಿ ಪ್ರಯತ್ನ ಆಗಲಿ ಎಂದು ನಾನು ಹೇಳಬಯಸುತ್ತೇನೆ. ಮತ್ತು ಮುಂದಿನ ವಿಷಯದ ಬಗ್ಗೆ ಹೇಳುವುದೇನೆಂದರೆ ಪ್ರಮುಖವಾಗಿ ನಮ್ಮ ಸರ್ಕಾರಕ್ಕೆ ಆದಾಯ ಕೊಡುವಂಥದು ಅಂದರೆ ಅಬ್ಕಾರಿ ಇಲಾಖೆ. ಸರ್ಕಾರಕ್ಕೆ ಆದಾಯ ಬರುವುದು ಅಬ್ಕಾರಿ ಡ್ಯೂಟಿಯಿಂದ, ಸ್ಟಾಂಪ್ ಡ್ಯೂಟಿಯಿಂದ ಮತ್ತು ಸೇಲ್ ಹಾಗೂ ಕಮರ್ಶಿಯಲ್ ಟ್ಯಾಕ್ಸ್ ಸೋರ್ಸ್‌ಗಳಿಂದ ನಮ್ಮ ಸರ್ಕಾರ ನಡೆಯುತ್ತಿದೆ ಎಂದು ನಾನು ಹೇಳಬಯಸುತ್ತಿದ್ದೇನೆ. ಇವತ್ತು ಏನಾಗಿದೆ ಅಂದರೆ ನಿನ್ನೆಯ ಬಜೆಟ್‌ನಲ್ಲಿ ಎಕ್ಸೈಜ್ ಬಗ್ಗೆ ಹಲವಾರು ಪರಿಷ್ಕರಣೆಗಳನ್ನು ಮುಖ್ಯಮಂತ್ರಿಗಳು ಮಾಡಿದ್ದಾರೆ. ಅಂದರೆ ಇನ್‌ಕ್ರೀಸಸ್ ಎಕ್ಸೈಜ್ ಸಿಗರೇಟ್‌ಗಳ ಮೇಲೆ ಯಾವಾಗಲೂ ಇನ್‌ಕ್ರೀಸ್ ನ್ಯಾಚುರಲಿ. ಆದರೆ ಇದರ ಅಡ್ವರ್ಸ್ ಎಫೆಕ್ಟ್ ಏನಾಗುತ್ತದೆ ಅನ್ನುವ ಬಗ್ಗೆ ಮುಖ್ಯಮಂತ್ರಿಗಳು ವಿಚಾರ ಮಾಡಬೇಕು. ಜನರು ಎಕ್ಸೈಜ್‌ಗೆ ಹೆಚ್ಚು ಅಟ್ರಾಕ್ಟ್ ಆಗುತ್ತಾರೆ. ಅದರಿಂದ ನಮಗೆ ರೆವಿನ್ಯೂ ಜಾಸ್ತಿ ಇದೆ. ಆದ್ದರಿಂದ ಅಲ್ಲಿಂದ ರೆವಿನ್ಯೂ ಜಾಸ್ತಿ ತೆಗೆದುಕೊಳ್ಳೋಣ ಅನ್ನುವುದು. ಹಿಂದಕ್ಕೆ ನಮ್ಮ ಎಕ್ಸೈಜ್ ಕಮೀಶನರ್ ಒಂದು ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದರು:

ಎಕ್ಸೈಜ್‌ನ ಟಾರ್ಗೆಟನ್ನು 1500 ಕೋಟಿ ರೂಪಾಯಿಗಳಿಗೆ ಫಿಕ್ಸ್ ಮಾಡಿ ಒಂದು ಹೇಳಿದ್ದರು, ಹಿಂದಿನ ವರ್ಷ 1250 ಕೋಟಿ ರೂಪಾಯಿಗಳು ಇತ್ತು ಈ ಸಲ ಅದನ್ನು 1500 ಕೋಟಿ ರೂಪಾಯಿಗಳು ಮಾಡುತ್ತೇವೆ ಎಂದು. ಅಂದರೆ ಇನ್‌ಕ್ರೀಸ್ ಮಾಡಿಕೊಳ್ಳುತ್ತಾ ಹೋಗುವುದು. ನಮ್ಮ ಮೂಲ ಉದ್ದೇಶವಾದ ಸಮಾಜಿಕ ದೃಷ್ಟಿಕೋನ ಕಳಕಳಿಯಿಂದ ನೋಡಿದರೆ ಸಂಪೂರ್ಣ ಪಾನಪ್ರತಿಬಂಧ ಮಾಡಬೇಕೆಂದು ಒಂದು ಕಡೆ ಆದರೆ ಅದು ವಿಫಲವಾಗುತ್ತದೆ ಎಂಬ ಕಾರಣದಿಂದ ಅಥವಾ ನಮ್ಮ ಮುಖ್ಯ ಆದಾಯ ಎಕ್ಸೈಜ್‌ನಿಂದ ಎಂಬುದು, ಈ ಬಗ್ಗೆ ಆಂಧ್ರಪ್ರದೇಶದಲ್ಲಿ ಪ್ರಯೋಗ ಮಾಡಿದರು. ಅದರಿಂದೇನೂ ಪ್ರಯೋಜನವಾಗಲಿಲ್ಲ ಏಕೆಂದರೆ ಎಲ್ಲೀವರೆಗೆ ಜನರಲ್ಲಿ ಜಾಗೃತಿ ಬರುವುದಿಲ್ಲ ಅಲ್ಲೀವರೆಗೆ ಏನೂ ಪ್ರಯೋಜನವಾಗುವುದಿಲ್ಲ. ಪಾನ ಪ್ರತಿಬಂಧ ಮಾಡಿದರೆ ನಂಬರ್ ಟೂ ಇಲಿಸಿಟ್ ಚಾಲೂ ಆಗಿಬಿಡುತ್ತದೆ ಹೀಗಾಗಿ ಎಷ್ಟೋ ರಾಜ್ಯಗಳಲ್ಲಿ ಇದನ್ನು ಪ್ರಯೋಗ ಮಾಡಿದರೂ ಸಹಿತ ಯಶಸ್ವಿಯಾಗದೇ ಇದ್ದುದರಿಂದ ಇವತ್ತು ಎಕ್ಸೈಜ್‌ನಿಂದ ಹಣ ತೆಗೆದುಕೊಳ್ಳುತ್ತಿದ್ದೇವೆ. ಆದರೆ ನನಗನ್ನಿಸುತ್ತದೆ ಇದು ಪಾಪದ ಹಣ. ಏಕೆಂದರೆ ಈ ಪಾಪದ ಹಣದಿಂದ ಬಹುಶ: ರಾಜ್ಯವಾಗಲಿ, ಯಾರೇ ಆಗಲಿ ಉದ್ಧಾರವಾಗುವುದಿಲ್ಲ. ಅದು ಬಡವರ ಹಣ, ಇನ್ನಿತರರ ಹಣ, ಆ ಚಟಕ್ಕೆ ಅಂಟಿಕೊಂಡವರಿಂದ ಸರ್ಕಾರಕ್ಕೆ ಹಣ ಬರುತ್ತಿದೆ. ನಾವು ಪ್ರತಿ ವರ್ಷ ನೋಡಿದ ಹಾಗೆ ಎಕ್ಸೈಸ್ ಡ್ಯೂಟಿಯನ್ನು ಇನ್‌ಕ್ರೀಸ್ ಮಾಡುತ್ತಾ ಹೋಗುತ್ತಿದ್ದೇವೆ. ಈಗ ನಾನು ಎಕ್ಸೈಸ್ ಡ್ಯೂಟಿಯನ್ನು ಏಕೆ ಹೆಚ್ಚಿಗೆ ಮಾಡುತ್ತೀರಿ, ಏಕೆ ಕಡಿಮೆ ಮಾಡುವುದಿಲ್ಲ ಎಂದು ಕೇಳಿದರೆ ಎಕ್ಸೈಸ್ ಲಾಬಿ ಪರವಾಗಿದ್ದಾನೆ ಎನ್ನುವ ಒಂದು ಸಿಗ್ನಲ್ ಒಂದು ಕಡೆಯಿಂದ ಬರುತ್ತದೆ. ನನ್ನ ಕಳಕಳಿ ಇರುವುದು ಏನೆಂದರೆ ಇವತ್ತು ಎಕ್ಸೈಸ್‌ಗೆ ಏನು ಡ್ಯೂಟಿ ಜಾಸ್ತಿ ಮಾಡುತ್ತಾ ಹೋಗುತ್ತೀದ್ದೀರಿ, ಅದನ್ನು ಜಾಸ್ತಿ ಮಾಡಿದ ಹಾಗೆ ನೀವು ಇಲಿಸಿಟ್ ಆಕ್ಟಿವಿಟೀಸ್‌ಗೆ ಹೆಚ್ಚಿಗೆ ಸ್ಕೋಪ್ ಕೊಡುತ್ತೀರಿ. ಮತ್ತೆ ಸೆಕೆಂಡ್ಸ್‌ಗೆ ಹೆಚ್ಚಿನ ಸ್ಕೋಪನ್ನು ಕೊಡುತ್ತೀರಿ. ಸೆಕೆಂಡ್ಸ್ ಎನ್ನುವುದು ಅದು ತೆರಿಗೆಯನ್ನು ತಪ್ಪಿಸಿ ಮಾಡುವಂಥದ್ದು. ಥರ್ಡ್ಸ್ ಎಂದರೆ ಇಲಿಸಿಟ್. ಇದು ಇಲಿಸಿಟ್ ಡ್ರಿಂಕ್ಸ್ ಪ್ಲಸ್ ಅದಕ್ಕೆ ತೆರಿಗೆಯನ್ನು ತಪ್ಪಿಸುವಂಥದ್ದು. ನನಗನಿಸಿದ ಹಾಗೆ ನಮ್ಮ ಕರ್ನಾಟಕದಲ್ಲಿ ಮಾರಾಟವಾಗುವ ಈ ಒಂದು ಡ್ರಿಂಕ್ಸ್‌ನಲ್ಲಿ ಸೆಕೆಂಡ್ಸ್ ಅಂಡ್ ಥರ್ಡ್ಸ್‌ನಿಂದ ಆಗುವಂಥದ್ದು ಬಹುಶ: ಅದರ ಹತ್ತರಷ್ಟು ಇರಬಹುದು ಎಂದು ನನಗನಿಸುತ್ತದೆ. ಯಾವ ಒಂದು ಆಕ್ಟಿವಿಟೀಸ್ ಅಲ್ಲಿ ನಡೆದಿದೆ, ಇಲಿಸಿಟ್ ವ್ಯವಹಾರ, ಸೆಕೆಂಡ್ಸ್ ನಡೆದಿದೆ. ಆಮೇಲೆ ಎಕ್ಸೈಸ್ ಕಮೀಷನರ್‌ರವರು ಎಲ್ಲರಿಗೂ ಒಂದು ನೋಟಿಸನ್ನು ಕೊಡುತ್ತಾರೆ. ಆ ಲೈಸೆನ್ಸ್ ಇದ್ದವರಿಗೆ ಬಾರ್ ಅಂಡ್ ರೆಸ್ಟೋರೆಂಟ್‌ನವರಿಗೆ ನೋಟೀಸನ್ನು ಕೊಡುತ್ತಾರೆ. ಹೋದವರ್ಷ ಇಷ್ಟು ಕನ್‌ಸಮ್ಸನ್ ಇತ್ತು, ಈ ಸಲ ನೀವು 25 ಪರ್‌ಸೆಂಟ್ ಕನ್‌ಸಮ್ಸನನ್ನು ಜಾಸ್ತಿ ಮಾಡಿ ಎಂದು ಹೇಳುವುದು. ಅಂದರೆ ಜನರಿಗೆ ನಾವು ಕುಡಿಯುವುದನ್ನು ಹೆಚ್ಚಿಗೆ ಕಲಿಸಬೇಕಾಗುತ್ತದೆ. ಆ ಲೈಸೆನ್ಸ್ ಹೋಲ್ಡರ್ ಕನ್‌ಸಮ್ಸನನ್ನು ಜಾಸ್ತಿ ಮಾಡುವುದಕ್ಕೆ ಜನರನ್ನು ಹೆಚ್ಚಿಗೆ ಅಟ್ರಾಕ್ಟ್ ಮಾಡಬೇಕು. ಇದು ಒಂದು ಹಂತ. ಈ ರೀತಿ ಹೆಚ್ಚಿಗೆ ಮಾಡುವುದರಿಂದ ಪರಿಸ್ಥಿತಿ ಏನಾಗಿದೆ ಎಂದರೆ ಈ ಸೆಕೆಂಡ್ಸ್ ಎನ್ನುವುದು ಪರ್ಮನೆಂಟ್ ಆಗಿಬಿಟ್ಟಿದೆ. ಅದನ್ನು ತಡೆಯಲಿಕ್ಕೆ ಸರ್ಕಾರಕ್ಕೆ ಏಕೆ ಆಗಿಲ್ಲ? ಇವತ್ತು ಥರ್ಡ್ಸ್ ವ್ಯವಹಾರ ಕೂಡ

ನಡೆಯುತ್ತಿದೆ. ಇವತ್ತು ವಿಸ್ಕಿ ಇರಬಹುದು, ಬೀರ್ ಇರಬಹುದು ಮತ್ತೊಂದು ಇರಬಹುದು, ಅದೇ ಕಂಪನಿಯ ಹೆಸರಿನಲ್ಲಿ ತಯಾರು ಮಾಡುವಂಥದ್ದು ಎಷ್ಟೋ ಮನೆ ಮನೆಯಲ್ಲೂ ನಡೆಯುತ್ತಿದೆ. ಬೇರೆ ಬೇರೆ ಭಾಗಗಳಲ್ಲಿ ಕೂಡ ನಡೆಯುತ್ತಿದೆ. ಕೋಟಾ ಫ್ಯಾಕ್ಟರಿಗಳು ಕೂಡ ಇವೆ. ಅಲ್ಲಿ ಇವತ್ತು ಇಲ್ಲೀಗಲ್ ಆಕ್ಟಿವಿಟೀಸ್ ನಡೆಯುತ್ತಿವೆ. ಯಾವುದೋ ಚಲೊ ರೆಪ್ಯೂಟೆಡ್ ಕಂಪನಿಯ ಹೆಸರಿನಲ್ಲಿ ಇಲ್ಲೀಗಲ್ ಪ್ರೊಡಕ್ಷನನ್ನು ತಮ್ಮ ಫ್ಯಾಕ್ಟರಿಯಲ್ಲಿ ತಯಾರು ಮಾಡಿ ಅದಕ್ಕೆ ಲೇಬಲನ್ನು ಹಚ್ಚಿ ಇವತ್ತು ಮಾರಾಟ ಮಾಡುತ್ತಿದ್ದಾರೆ. ಇದು ಇವತ್ತು ಓಪನ್ ಆಗಿ ನಡೆಯುತ್ತಿದೆ. ಇದನ್ನು ತಡೆಯುವುದಕ್ಕೆ ಸರ್ಕಾರಕ್ಕೆ ಏಕೆ ಆಗುತ್ತಿಲ್ಲ. ನಾನು ಆಂಧ್ರಪ್ರದೇಶದ ಬಗ್ಗೆ ಸ್ಟಡಿ ಮಾಡಿದ್ದೇನೆ. ಆಂಧ್ರಪ್ರದೇಶದಲ್ಲಿ ಲೈಸೆನ್ಸ್ ಫೀ ಜಾಸ್ತಿ ಇದೆ. ನೀವೇನೂ ಲೈಸೆನ್ಸ್ ಫೀ ಮಾಡಿದ್ದೀರಲ್ಲ, ಇದಕ್ಕಿಂತಲೂ ಬಹುಶ: ಜಾಸ್ತಿ ಇದೆ. ನಾನು ರೇಟನ್ನು ನೋಡಿದ್ದೇನೆ. ಅವರು ಸೇಲ್ಸ್ ಟ್ಯಾಕ್ಸ್‌ನಿಂದ ಆ ಇಲಾಖೆಯನ್ನೇ ಸೆಪರೇಟ್ ಮಾಡಿದ್ದಾರೆ. ಅವರು ಲೈಸೆನ್ಸ್ ಫೀಯನ್ನೇ ಹೆವಿ ಮಾಡಿದ್ದಾರೆ. ಅಲ್ಲಿ ಇಲಿಸಿಟ್ ಆ್ಯಕ್ಟಿವಿಟೀಸ್ ಇದೆ. ಅಲ್ಲಿ ಯಾವುದೋ ನಾನ್ ವೆಜಿಟೇರಿಯನ್ ರೆಸ್ಟೋರೇಂಟ್‌ನಲ್ಲಿ ಹೋಗಿ ಡ್ರಿಂಕ್ಸ ಕೇಳಿದರೆ ಸಿಗುವುದಿಲ್ಲ. ಎಲ್ಲಿ ಲೈಸೆನ್ಸ್ ಬಾರ್‌ಗಳು ಇರುತ್ತವೆ, ಅಲ್ಲಿ ಮಾತ್ರ ಸಿಗುತ್ತದೆ. ಅಲ್ಲಿ ಇದು ಸಕ್ಸಸ್ ಆಗಿದೆ ಎಂದು ನಾನು ಕೇಳಿದ್ದೇನೆ. ಇದರ ಬಗ್ಗೆ ಸರ್ಕಾರ ತನ್ನ ಏಜೆನ್ಸಿ ಮುಖಾಂತರ ಚೆಕ್ ಮಾಡಲಿ. ಆಂಧ್ರದಲ್ಲಿ ಈ ಪ್ರಯೋಗ ಯಶಸ್ವಿಯಾಗಿದೆಯೋ ಇಲ್ಲವೋ ಎಂದು. ನನ್ನ ಕಳಕಳಿ ಏನಿದೆ ಎಂದರೆ ಇವತ್ತು ನೀವು ಲೈಸೆನ್ಸ್ ಫೀ ಜಾಸ್ತಿ ಮಾಡಿ, ಎಕ್ಸೈಸ್ ಡ್ಯೂಟಿ ಜಾಸ್ತಿ ಮಾಡಿ. ಆದರೆ ಅದಕ್ಕೆ ತಕ್ಕಂತೆ ಅದರ ಪ್ಯಾರಲಲ್ ಆಗಿ ಈ ಸೆಕೆಂಡ್ಸ್ ತಪ್ಪಿಸುವುದು, ಈ ಇಲಿಸಿಟ್ ವ್ಯವಹಾರವನ್ನು ತಪ್ಪಿಸುವುದು, ಇದನ್ನು ಮಾಡಿಸಿ. ಆ ರೀತಿಯಾದಾಗ ಮಾತ್ರ ಸರ್ಕಾರಕ್ಕೆ ರೆವಿನ್ಯೂ ಜಾಸ್ತಿಯಾಗುತ್ತದೆ. ಆಗ ನಿಮ್ಮ ಮೇಲಿನ ಕಮೀಷನರ್ 25 ಪರ್‌ಸೆಂಟ್ ಜಾಸ್ತಿ ಮಾಡಿ ಎಂದು ಹೇಳಿ ನೋಟೀಸ್ ಕೊಡುವುದು ತಪ್ಪುತ್ತದೆ. ಇದಕ್ಕಾಗಿ ನೀವು ಪ್ರತಿ ಸಲ ನೋಟೀಸ್ ಕೊಟ್ಟಾಗ ಅವರು ಕನ್‌ಸಮ್ಷನನ್ನು ಜಾಸ್ತಿ ಮಾಡಬೇಕಾಗುತ್ತದೆ. ಅದಕ್ಕೇ ಇನ್ನೂ ಜನರನ್ನು ಅಟ್ರಾಕ್ಟ್ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ಇವತ್ತು ನಮ್ಮ ಚಿಂತನೆ ನಡೆಯಬೇಕಾಗುತ್ತದೆ. ಬಹುಶ: ಇದರ ಬಗ್ಗೆ ಹೆಚ್ಚಿನ ಒಂದು ಚಿಂತನೆಯಾದರೆ ಒಳ್ಳೆಯದು. ಇಲ್ಲದಿದ್ದರೆ ನಾಳೆ ಏನಾಗುತ್ತದೆ ಎಂದರೆ ಲೈಸೆನ್ಸ್ ಇದ್ದವರೆಲ್ಲಾ ಅಂಗಡಿಯನ್ನು ಬಂದ್ ಮಾಡಿಕೊಂಡು ಹೋಗುತ್ತಾರೆ. ಅವರ ಹಣೆಬರಹ ಅಲ್ಲಿಗೆ ಬರುತ್ತದೆ. ಏಕೆಂದರೆ ಕಾನೂನು ಬದ್ಧವಾಗಿ ಹೋಗುವವರಿಗೆ ಯಾರಿಗೂ ಸ್ಕೋಪ್ ಇಲ್ಲ. ಒಂದು ಉದಾಹರಣೆಯನ್ನು ಹೇಳಬೇಕೆಂದರೆ ಒಂದು ಬಿಲ್ಡಿಂಗ್ ಪರ್ಮಿಷನ್‌ನ್ನು ತೆಗೆದುಕೊಂಡಿರುತ್ತೇವೆ. ಆ ಅಧಿಕಾರಿ ಏನು ಹೇಳುತ್ತಾನೆಂದರೆ ಏಕೆ ಬಿಲ್ಡಿಂಗ್ ಪರ್ಮಿಷನ್ ತಗೆದುಕೊಳ್ಳುತ್ತೀರಿ, ನೀವು ಮೊದಲು ಬಿಲ್ಡಿಂಗನ್ನು ಕಟ್ಟಿಸಿ. ಆಮೇಲೆ ಸ್ವಲ್ಪ ದಂಡವನ್ನು ಹಾಕಿ ಮುಚ್ಚಿಬಿಡೋಣ ಎಂದು ಹೇಳುತ್ತಾರೆ. ಹೀಗಾಗಿ ಲೈಸೆನ್ಸ್ ಇದ್ದು ಏನೂ ಮಾಡಿದರೆ ಅದಕ್ಕೆ ಸ್ಕೋಪ್ ಇಲ್ಲ. ಇಲಿಸಿಟ್ ಇದ್ದರೆ ಅಲ್ಲಿ ಪೋಲೀಸ್ ಆಫೀಸರ್, ಮತ್ತೆ ಇನ್ನಿತರ ಅಧಿಕಾರಿಗಳು, ಎಲ್ಲರೂ ಒಂದಾಗುತ್ತಾರೆ. ನಾವು ಅಷ್ಟು ಶೇರನ್ನು ತೆಗೆದುಕೊಳ್ಳುತ್ತೇವೆ, ನೀವಷ್ಟು ಶೇರು ತೆಗೆದುಕೊಂಡು ವ್ಯವಹಾರವನ್ನು ನಡೆಸಿಕೊಂಡು ಹೋಗಿ ಎನ್ನುತ್ತಾರೆ. ಇದು ಪ್ರತ್ಯಕ್ಷವಾಗಿ ನಡೆಯುವುದನ್ನು ನಾನು

ನೋಡಿದ್ದೇನೆ. ಇವತ್ತು ನಮ್ಮ ಕ್ಷೇತ್ರದಲ್ಲಿ ಇರಬಹುದು. ಬೇರೆ ಕಡೆಯೇ ಇರಲಿ. ಹುಬ್ಬಳ್ಳಿಯ ಬಗ್ಗೆ ಒಂದು ಉದಾಹರಣೆಯನ್ನು ಕೊಡಬೇಕಾದರೆ ನಮ್ಮಲ್ಲಿ 6 ರಿಂದ 8 ಲಕ್ಷ ಪಾಪ್ಯುಲೇಷನ್ ಇದೆ. ಅಲ್ಲಿ ಲೈಸೆನ್ಸ್ ಇರುವ ಅಂಗಡಿಗಳು ಕೇವಲ 90 ಮಾತ್ರ ಇರುವುದು. ಎಂಟು ಲಕ್ಷ ಪಾಪ್ಯುಲೇಷನ್‌ಗೆ ಕಂಪ್ಯಾರಿಸನ್ ಮಾಡಿ. ಇವತ್ತು ಬೆಂಗಳೂರಿನಲ್ಲಿ 50-60 ಲಕ್ಷ ಪಾಪ್ಯುಲೇಷನ್ ಇದೆ. ಇಲ್ಲಿ 2 ಸಾವಿರ ಲೈಸೆನ್ಸ್‌ಗಳು ಇವೆ. ನಮ್ಮ ಹುಬ್ಬಳ್ಳಿಯಲ್ಲಿ ಬರೀ 90 ಲೈಸೆನ್ಸ್ ಇರುವ ಅಂಗಡಿಗಳಿವೆ. ಇದರಿಂದಲೇ ಗೊತ್ತಾಗುತ್ತದೆ. ಇದು ಎಲ್ಲಿ ಹೋಗುತ್ತಿದೆ, ಎಂದು. ಹಾಗಾದರೆ ಜನರು ಕುಡಿಯುವುದನ್ನೇ ಬಿಟ್ಟಿದ್ದಾರೆಯೇ? ಜನರು ಕುಡಿಯುವುದು ನಡೆದೇ ಇದೆ. ಯಾವುದೂ ಕಡಿಮೆಯಾಗಿಲ್ಲ. ಕನ್‌ಸಮ್ಶನ್ ಕೂಡ ಕಡಿಮೆಯಾಗಿಲ್ಲ. ಆದರೆ ರೆವಿನ್ಯೂ ಮಾತ್ರ ಸರ್ಕಾರಕ್ಕೆ ಬರುತ್ತಿಲ್ಲ. ರೆವಿನ್ಯೂ ಮೂರನೇ ಮಂದಿಯ ಕೈಗೆ ಹೋಗುತ್ತದೆ. ಬಹುಶ: ಇದರ ಬಗ್ಗೆ ನಾವು ಚಿಂತನೆ ಮಾಡಿ ಕಟ್ಟುನಿಟ್ಟಿನ ಕ್ರಮ ಕೈಗೊಂಡರೆ ಸರ್ಕಾರಕ್ಕೆ ಇನ್ನಷ್ಟು ರೆವಿನ್ಯೂ ಬರಬಹುದು. ಇವತ್ತು 1500, 1700 ಗುರಿಯನ್ನು ಫಿಕ್ಸ್ ಮಾಡಿದ್ದೀರಿ. ಇದು 3000 ದವರೆಗೂ ಹೋಗುತ್ತದೆ. ಜನರು ಕುಡಿಯುವುದನ್ನು ನೋಡಿದರೆ ಅಲ್ಲಿ ಇದ್ದ ವ್ಯವಹಾರವನ್ನು ನೋಡಿದರೆ ಬಹುಶ: 3 ಸಾವಿರ, 4 ಸಾವಿರ ರೆವಿನ್ಯೂ ಇದರಿಂದಲೇ ಬರುತ್ತದೆ. ಅದು ಆಗಿಲ್ಲ. ಪ್ರತಿವರ್ಷ ನಾವು ಲೈಸೆನ್ಸ್ ಫೀ ಎಲ್ಲಾ ಇನ್‌ಕ್ರೀಸ್ ಮಾಡುತ್ತಾ ಹೋಗುತ್ತೇವೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದರ ಬಗ್ಗೆ ಸರ್ಕಾರ ತೀವ್ರವಾದ ಗಮನವನ್ನು ತೆಗೆದುಕೊಂಡರೆ ಈ ಒಂದು ಫೀಲ್ಡ್‌ನಲ್ಲಿ ಸ್ವಲ್ಪ ಸುಧಾರಣೆಯನ್ನು ಮಾಡಲಿಕ್ಕೆ ಸಾಧ್ಯವಿದೆ. ಮತ್ತು ಅದರ ಜೊತೆಗೆ ನಾವು ಜನರಿಗೆ ಕುಡಿಯುವುದಕ್ಕೆ ಎನ್‌ಕರೇಜ್ ಮಾಡುವುದು ಬೇಡ. ಕನ್‌ಸಮ್ಶನ್ ಜಾಸ್ತಿ ಮಾಡಿ ಜನರನ್ನು ಎನ್‌ಕರೇಜ್ ಮಾಡುವುದು ಬೇಡ. ಹೆಚ್ಚಿಗೆ ಕುಡಿಯಿರಿ ಎಂದು ಸ್ಕೋಪ್ ಕೊಟ್ಟಹಾಗೆ ಅದು ಸರ್ಕಾರದ ಕಡೆಯಿಂದ ಆಗಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಹಾಗೆಯೇ ಇನ್ನಿತರ ವಿಷಯವಾಗಿ ಹೇಳುವುದು ಎಂದರೆ ನಾವು ಬಜೆಟ್‌ನಲ್ಲಿ ಡೆಫಿಸಿಟನ್ನು ತೋರಿಸಿದ್ದೇವೆ. ಇದರ ಬಗ್ಗೆ ಕಡಿವಾಣ ಹಾಕುವುದಕ್ಕೆ ಇವತ್ತು ನಮ್ಮ ಖರ್ಚು, ಅದು ನಾನ್‌ಪ್ಲಾನಿಂಗ್ ಇರಬಹುದು, ಇದರಿಂದ ಎಷ್ಟು ಖರ್ಚಾಗುತ್ತಿದೆ, ಪ್ಲಾನಿಂಗಿನಿಂದ ಎಷ್ಟು ಖರ್ಚಾಗುತ್ತಿದೆ. ಮತ್ತು ನಮ್ಮ ಸರ್ಕಾರಿ ನೌಕರರಿಗೆ ಎಷ್ಟು ಖರ್ಚಾಗುತ್ತಿದೆ, ಎಸ್ಟಾಬ್ಲಿಷ್‌ಮೆಂಟ್ ಎಷ್ಟು ಖರ್ಚಾಗುತ್ತಿದೆ, ಇದರ ಬಗ್ಗೆ ನೋಡಿದರೆ ಬಹಳ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ನಮ್ಮ ಹಣಕಾಸು ಸಚಿವರು ಹಿಂದಿನ ಸರ್ಕಾರದಲ್ಲಿ ಮಾನ್ಯ ಸಿದ್ಧರಾಮಯ್ಯನವರು ಒಂದು ಕಮಿಟಿಯನ್ನು ಮಾಡಿದ್ದರು. ಈ ಸರ್ಕಾರಿ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ಮಾಡಿದ್ದರು ಮತ್ತು ಸಿಬ್ಬಂದಿಯನ್ನು ಕಡಿಮೆ ಮಾಡುವ ಸಲುವಾಗಿ ಮಾಡಿದ್ದರು. ಮಾನ್ಯ ಸಿದ್ಧರಾಮಯ್ಯನವರು ಒಂದು ವರದಿಯನ್ನು ಕೊಟ್ಟ ಹಾಗೆ ಬಹುಶ: ನನಗೆ ನೆನಪಿದೆ ಇಷ್ಟು ಸಾವಿರ ಸಿಬ್ಬಂದಿಯನ್ನು ಕಡಿಮೆ ಮಾಡಬೇಕೆಂದು. ಅದು ಏನಾಯಿತು ಎನ್ನುವ ಒಂದು ಪ್ರಶ್ನೆ ಬರುತ್ತದೆ. ಗುಜರಾತ್‌ನ ಒಂದು ಉದಾಹರಣೆಯನ್ನು ಕೊಡಬೇಕಾದರೆ ಕಳೆದ ಬಾರಿ ಅಲ್ಲಿ 17 ಸಾವಿರದಷ್ಟು ನೌಕರರನ್ನು ಕಡಿತ ಮಾಡಿದರು. ಅದರಿಂದ ಸರ್ಕಾರಕ್ಕೆ 170 ಕೋಟಿ ರೂಪಾಯಿಗಳು ಉಳಿತಾಯವಾಗಿದೆ. ಹೀಗಾಗಿ ಇವತ್ತು ಇದರ ಬಗ್ಗೆ ಕೂಡ ಚಿಂತನೆ ಮಾಡಬೇಕಾಗಿದೆ.

ಇವತ್ತು ಎಲ್ಲಿ ಬೇರೆ ಕಡೆ ವೇಕೆನ್ಸಿಗಳು ಇದ್ದಾವೆ, ಅವರನ್ನು ಸರ್ಕಾರ ವರ್ಗ ಮಾಡಲಿ ಕೆಲವು ಇಲಾಖೆಗಳಿಗೆ ವೇಕೆನ್ಸಿಗಳನ್ನು ತುಂಬಬೇಕಾಗಿದ್ದರೆ ಅಲ್ಲಿಗೆ ವರ್ಗ ಮಾಡಲಿ. ಎಲ್ಲಿ ಎಕ್ಸೆಸ್ ಇದ್ದಾವೆ, ಆ ರೀತಿ ಅಡ್ಜಸ್ಟ್ ಮಾಡಿದರೆ ಬಹುಶ: ಈ ರೀತಿ ಕೂಡ ಕಡಿತವನ್ನು ನಾವು ಮಾಡಲಿಕ್ಕೆ ಸಾಧ್ಯ ಇದೆ. ಅಲ್ಲೂ ಕೂಡ ನಾವು ನೂರಾರು ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಬಹುದು. ನಾವು ರಾಜ್ಯ ಸರ್ಕಾರಿ ನೌಕರರಿಗೆ ಎಷ್ಟು ಹಣವನ್ನು ಕೊಡುತ್ತಿದ್ದೇವೆ ಎಂದರೆ ನಮ್ಮ ಟೋಟಲ್ ಬಜೆಟ್ ಮತ್ತು ಸರ್ಕಾರಿ ನೌಕರರಿಗೆ ಕೊಡುತ್ತಿರುವ ಪಗಾರ ಎಲ್ಲಾ ನೋಡಿದರೆ ಒಂದು ವ್ಯತ್ಯಾಸ ಗೊತ್ತಾಗುತ್ತದೆ. 1995-96ರಲ್ಲಿ ನಮ್ಮ ಸರ್ಕಾರಿ ನೌಕರರಿಗೆ ಕೊಡುವ ಸಂಬಳ 2480.74 ಕೋಟಿ ರೂಪಾಯಿಗಳು 1996-97ರಲ್ಲಿ 3028.71 ಕೋಟಿ ರೂಪಾಯಿಗಳು 97-98ರಲ್ಲಿ 3390.57 ಕೋಟಿ ರೂಪಾಯಿಗಳು 99-2000ದಲ್ಲಿ 50.42.0 ಕೋಟಿ ರೂಪಾಯಿಗಳು ಈ ರೀತಿ ನಾವು ಪಗಾರವನ್ನು ಕೊಡುತ್ತಿದ್ದೇವೆ. ಮೊನ್ನೆ 'ಇಂಡಿಯಾ ಟುಡೆ'ಯಲ್ಲಿ ಇದರ ಬಗ್ಗೆ ಒಂದು ಆರ್ಟಿಕಲ್ ಬಂದಿತ್ತು. ಅದರಲ್ಲಿ ನಮ್ಮ ಸರ್ಕಾರದ ಖರ್ಚು ಎಸ್ಟಾಬ್ಲಿಷ್‌ಮೆಂಟ್ ಸಲುವಾಗಿ 63 ರಿಂದ 70 ಪರ್‌ಸೆಂಟ್‌ವರೆಗೆ ಖರ್ಚು ಮಾಡುವ ಬಗ್ಗೆ ಹೇಳಿ ಈ ರೀತಿ ಐದಾರು ರಾಜ್ಯಗಳ ಉದಾಹರಣೆಗಳನ್ನು ಕೊಟ್ಟಿದ್ದರು. ಅದರಲ್ಲಿ 63 ರಿಂದ 70 ಪರ್‌ಸೆಂಟ್‌ವರೆಗೆ ಇದರ ಸಲುವಾಗಿ ಖರ್ಚು ಮಾಡಿ ಇನ್ನು 30 ರಿಂದ 35 ಪರ್‌ಸೆಂಟ್ ಉಳಿದವುಗಳ ಕಡೆಗೆ ಖರ್ಚು ಮಾಡಬೇಕಾಗಿದೆ. ಇದನ್ನು ರಿಫಾರ್ಮ್ಸ್ ಮಾಡುವ ಸಲುವಾಗಿ, ಆಡಳಿತವನ್ನು ಸುಧಾರಣೆ ಮಾಡುವ ಸಲುವಾಗಿ, ಆಡಳಿತದ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ಇವತ್ತು ನಾವು ಇದರ ಕಡೆಗೆ ಚಿಂತನೆ ಮಾಡಬೇಕಾಗಿದೆ ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ನಾವು ಆಡಳಿತ ವೆಚ್ಚ ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಒಂದು ಕಡೆ ಹೇಳಿದ್ದಾರೆ. ಆದರೆ ಅದು ಯಾವ ದಿಕ್ಕಿನಲ್ಲಿ, ಅದು ಎಲ್ಲಿಂದ ಪ್ರಾರಂಭವಾಗುತ್ತದೆ ಎನ್ನುವ ವಿಶ್ಲೇಷಣೆ ಇಲ್ಲ. ಅದಕ್ಕಾಗಿ ಇದರ ಮೇಲೆ ಒಂದು ನಿಯಂತ್ರಣವಾದರ ಮಾತ್ರ ಏನಾದರೂ ಒಂದು ಹೆಚ್ಚಿನ ಸಾಧನೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇನ್ನಿತರ ವಿಷಯಗಳೆಂದರೆ ಕೆಲವೊಂದು ಈ ಶಿಕ್ಷಣ ಕ್ಷೇತ್ರಕ್ಕೆ ಹೈಯರ್ ಎಜುಕೇಷನ್ ಅದರ ಬಗ್ಗೆ ಶೇ.15 ರಷ್ಟು ಅನುದಾನವನ್ನು ಕಡಿಮೆ ಮಾಡಿದ್ದಾರೆ. ಅದರಿಂದ ಶಿಕ್ಷಣ ಸಂಸ್ಥೆಗಳಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಇದು ಕಡಿಮೆ ಮಾಡಬಾರದು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ಮತ್ತು ಜನಸಾಮಾನ್ಯರಿಗೆ ಅನುಕೂಲವಾಗುವಂಥದ್ದು ಸ್ವೀಟ್ಸ್, ಖಾರ ಇದರ ಬಗ್ಗೆ ತೆರಿಗೆಯನ್ನು ಹೆಚ್ಚಿಗೆ ಹಾಕಿರುವುದರಿಂದ ಇವತ್ತು ಸಿಹಿ ತಿಂಡಿಗಳ ಮೇಲೆ ಕಿಲೊ.ಗೆ 7 ರೂಪಾಯಿಗಳು ಜಾಸ್ತಿಯಾಗುತ್ತದೆ. ಆಮೇಲೆ ಖಾರ ಐಟಂಸ್‌ಗೆ ಒಂದು ಕಿಲೋಗೆ 13 ರೂಪಾಯಿಗಳು ಜಾಸ್ತಿಯಾಗುತ್ತದೆ. ಇದು ಬಡವರು, ಜನಸಾಮಾನ್ಯರು ಉಪಯೋಗ ಮಾಡುವ ಐಟಂಸ್ ಇಂಥವುಗಳಿಗೆ ತೆರಿಗೆ ಜಾಸ್ತಿ ಹಾಕಿದರೆ ಸರಿಯಲ್ಲವೆಂದು ಹೇಳುತ್ತೇನೆ. ಇನ್ನೊಂದು ಬಹು ಮುಖ್ಯವಾದುದು ಎಂದರೆ ನಮ್ಮಲ್ಲಿ ಅಸಂಘಟಿತ ಕಾರ್ಮಿಕರು ಇದ್ದಾರೆ. ಇವತ್ತು ಕೆಲವು ಆರ್ಗನೈಸ್ಡ್ ಯೂನಿಯನ್ಸ್ ಇದ್ದಾವೆ, ಆರ್ಗನೈಸ್ಡ್ ಸೆಕ್ಟರ್ ಇದ್ದಾವೆ. ಆದರೆ ಅನ್ ಆರ್ಗನೈಸ್ಡ್ ಸೆಕ್ಟರ್, ಅಲ್ಲಿರುವಂತಹ ಪಾಪ್ಯುಲೇಷನ್, ಅಲ್ಲಿರುವಂತಹ ವರ್ಕರ್ಸ್ ನಮ್ಮಲ್ಲಿ ಬಹಳಷ್ಟು ಇದ್ದಾರೆ. ನಮ್ಮ ಕರ್ನಾಟಕದಲ್ಲಿ ಬಹಳಷ್ಟು ಜನರು ಇದ್ದಾರೆ. ಒಟ್ಟು ನಮ್ಮಲ್ಲಿ ಸಂಘಟಿತ ಕಾರ್ಮಿಕರು 6,12,961

ಜನ ಇದ್ದಾರೆ. ಇವರು ಸಂಘಟಿತ ಕಾರ್ಮಿಕರು. 3 ಕೋಟಿ 90 ಲಕ್ಷ ಜನ ಅಸಂಘಟಿತ ಕಾರ್ಮಿಕರು ನಮ್ಮಲ್ಲಿದ್ದಾರೆ. ಅದರಲ್ಲಿ 2, ಲಕ್ಷ 43,129 ಬೀದಿ ಕಾರ್ಮಿಕರು, ಮತ್ತು 97,520 ಬಾಲ ಕಾರ್ಮಿಕರು ಇದ್ದಾರೆ. ಇವತ್ತು ಇದರ ಬಗ್ಗೆ ಒಂದು ಕಡೆ ಪ್ರಸ್ತಾಪ ಮಾಡಿದ್ದಾರೆ. ಅಸಂಘಟಿತ ಕಾರ್ಮಿಕರ ಬಗ್ಗೆ ನಾವೇನು ಮಾಡಬೇಕು ಎಂದು ಪ್ರಸ್ತಾಪ ಮಾಡಿದ್ದಾರೆ. ಇದು ಕೇವಲ ಪ್ರಸ್ತಾಪ ಆಗಿದೆ. ಆದರೆ ಅದಕ್ಕೆ ಏನು ಯೋಜನೆಗಳನ್ನು ನಾವು ಕೈಗೊಳ್ಳಬೇಕು ಎಂಬ ಬಗ್ಗೆ ಇವತ್ತು ಚಿಂತನೆ ಆಗಬೇಕಾಗಿದೆ. ಏಕೆಂದರೆ ಇವತ್ತು ಅವರು ಹೊರಗೆ ಉಳಿದು ಬಿಟ್ಟಿದ್ದಾರೆ. ಈ ಸಂಘಟಿತ ಕಾರ್ಮಿಕರು ಬಹುಶ: 3-4 ಪರ್ಸೆಂಟ್ ಆರ್ಗನೈಸ್ಡ್ ಇರಬಹುದು. ಅನ್ ಆರ್ಗನೈಸ್ಡ್ ವರ್ಕರ್ಸ್ ಬಹಳ ಜನ ಇದ್ದಾರೆ. ಅವರ ಬಗ್ಗೆ ನಾವು ಇವತ್ತು ಚಿಂತನೆ ಮಾಡಬೇಕಾಗಿದೆ. ಇಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ಇವತ್ತು ನಮ್ಮ ಟೈಲರ್ಸ್ ಇದ್ದಾರೆ. ಸಣ್ಣ ಗುಡಿ ಕೈಗಾರಿಕೆ ಮಾಡುವಂತಹವರು, ಬಹುಶ: ಲಕ್ಷಾಂತರ ಜನ ಟೈಲರ್ಸ್ ನಮ್ಮ ನಾಡಿನಲ್ಲಿದ್ದಾರೆ. ಅದು ಅನ್ ಆರ್ಗನೈಸ್ಡ್ ಸೆಕ್ಟಾರ್. ಆದರೆ ಅವರನ್ನೇ ಒಂದು ಯೋಜನೆಯ ಅಡಿಯಲ್ಲಿ ತೆಗೆದುಕೊಂಡು ಬಂದರೆ ಅನುಕೂಲ ಆಗಬಹುದು. ಬಹುಶ: ಕೇರಳದಲ್ಲಿ ಒಂದು ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ. ಕೇರಳದಲ್ಲಿ ಏನು ಮಾಡಿದ್ದಾರೆ ಎಂದರೆ 'ಕ್ಷೇಮ ನಿಧಿ' ಎಂದು ಒಂದು ಯೋಜನೆ ಮಾಡಿದ್ದಾರೆ. ಹಾಗೆ ಒಂದು ಸ್ಕೀಮ್ ಮಾಡಿ ಟೈಲರ್ಸ್ ಅಸೋಸಿಯೇಷನ್ ಮುಖಾಂತರ ಏನು ಆರ್ಗನೈಸ್ಡ್ ಸೆಕ್ಟಾರ್‌ನವರು ಬರುತ್ತಾರೆ, ಅವರನ್ನು ಮೆಂಬರ್ ಮಾಡಿಕೊಂಡು ಪ್ರತಿ ತಿಂಗಳು ಅವರಿಂದ ಚಂದಾ ಹಣವನ್ನು ತುಂಬಿಸಿಕೊಳ್ಳುತ್ತಾರೆ. ಆ ಹತ್ತು ರೂಪಾಯಿ ತಂಬಿದ್ದು ಆ ಕ್ಷೇಮ ನಿಧಿಯೊಳಗೆ ಜಮಾ ಆಗುತ್ತಾ ಹೋಗುತ್ತದೆ. ನಾಳೆ ಆ ಕಾರ್ಮಿಕರಿಗೆ ಯಾವುದೇ ರೀತಿಯ ತೊಂದರೆ ಆಗಲಿ ಅಥವಾ ಮನೆಯೊಳಗೆ ಏನಾದರೂ ವಿವಾಹ ಕಾರ್ಯಕ್ರಮ ಆಗಲಿ ಅಥವಾ ಯಾವುದೋ ಒಂದು ಅಡಚಣೆ ಬರಲಿ ಅಥವಾ ಅಪಘಾತ ಆಗಲಿ ಅಂತಹ ಸಂದರ್ಭದಲ್ಲಿ ಕ್ಷೇಮ ನಿಧಿಯಿಂದ ಹಣವನ್ನು ಬಿಡುಗಡೆ ಮಾಡುವಂತಹದು ಮಾಡಿದ್ದಾರೆ. ಇದೊಂದು ಉದಾಹರಣೆ ಹೇಳಿದೆ. ಇಂತಹ ಅನ್ ಆರ್ಗನೈಸ್ಡ್ ಸೆಕ್ಟಾರ್‌ನಲ್ಲಿರುವಂತಹ ಕಾರ್ಮಿಕರಿಗೆ ಅನುಕೂಲ ಮಾಡಿಕೊಡಲಿಕ್ಕೆ ಸಾಕಷ್ಟು ವಿಚಾರವನ್ನು ನಮ್ಮ ಸರ್ಕಾರ ಮಾಡಬೇಕಾಗಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಏಕೆಂದರೆ ನಾವು ಈ ಅನ್ ಆರ್ಗನೈಸ್ಡ್ ಸೆಕ್ಟಾರ್ ಅನ್ನು ನೆಗ್ಲೆಕ್ಟ್ ಮಾಡಿದರೆ ಅದು ಬಹಳ ಜನರಿಗೆ ಅಫೆಕ್ಟ್ ಆಗುತ್ತದೆ. ಮತ್ತು ಅದರ ಬಗ್ಗೆ ಏನಾದರೂ ಸುಧಾರಣಾ ಕ್ರಮವಾಗಿ ತೆಗೆದುಕೊಂಡರೆ ಅದರಿಂದ ಬಹಳಷ್ಟು ಜನರು ನಮ್ಮ ಸರ್ಕಾರದ ನೇರವಾದಂತಹ ಸ್ಪಂದನಕ್ಕೆ ಬರಲು ಅನುಕೂಲ ಆಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನೀರಾವರಿ ಬಗ್ಗೆ ಹೇಳಿದ್ದಾರೆ. ನೀರಿನ ದರವನ್ನು ಹೆಚ್ಚು ಮಾಡುವಂತಹ ವಿಚಾರ. 15 ವರ್ಷಗಳಿಂದ ನೀರಿನ ದರ ಏರಿಸಿರಲಿಲ್ಲ. ಈ ವರ್ಷ ನಾವು ನೀರಿನ ದರವನ್ನು ಏರಿಸುತ್ತೇವೆ ಎಂದು ಹೇಳುವಂತಹದು, ಆದರೆ ಪರಿಸ್ಥಿತಿ ಏನಾಗಿದೆ ಅಂದರೆ ಅದರ ಬಗ್ಗೆ ನಾವು ಪ್ರಸ್ತಾಪ ಮಾಡುವಂತಹದು, ಇವತ್ತು ನಮ್ಮ ಕರ್ನಾಟಕದಲ್ಲಿ ಕಳೆದ 4-5 ತಿಂಗಳುಗಳ ಹಿಂದೆ ಈರುಳ್ಳಿ ಬೆಲೆ ಬಿದ್ದು ಹೋಗಿ ಮತ್ತು ತೊಗರಿಬೇಳೆ ಬೆಲೆ ಬಿದ್ದು ಹೋಯಿತು. ಅಂತಹ

ಸಂದರ್ಭದಲ್ಲಿ ರೈತರು ಬಹಳ ನಷ್ಟ ಹೊಂದಿದರು. ಇವತ್ತು ನಮ್ಮ ನಾಡಿನ ಒಂದಲ್ಲಾ ಒಂದು ಕಡೆ ರೈತರಿಗೆ ತೊಂದರೆ ಆಗುತ್ತಲೇ ಇದೆ. ಇವತ್ತು ಆಲೂಗಡ್ಡೆ ಬೆಲೆ ಬಿದ್ದು ಹೋಗಿದೆ. ಅಥವಾ ಪೀಕ್ ಬರುವಂತಹ ಸಮಯದಲ್ಲಿ ಜಾಸ್ತಿ ಮಳೆ ಆಗಿ ಅದು ಪೀಕ್ ನಾಶವಾಗಿ ಹೋಗಿರುವಂತಹದ್ದು. ಯಾವ ರೀತಿ ಬಳ್ಳಾರಿಯಲ್ಲಿ ಮೆಣಸಿನಕಾಯಿ ಪೀಕ್ ನಾಶವಾಗಿ ಹೋಯಿತು. ಹೀಗಾಗಿ ಇವತ್ತು ರೈತರು ಕಷ್ಟದಲ್ಲಿ ಒಂದಲ್ಲಾ ಒಂದು ಕಾರಣದಿಂದ ಇದ್ದಾರೆ. ಇವತ್ತು ಒಬ್ಬ ರೈತ ಆರಾಮವಾಗಿದ್ದಾನೆಂದರೆ ಆ ಮಾತು ಬೇರೆ. ಆದರೆ ಇವತ್ತು ಒಂದಲ್ಲಾ ಒಂದು ಭಾಗದಲ್ಲಿ ರೈತ ನಷ್ಟವನ್ನು ಅನುಭವಿಸುತ್ತಿದ್ದಾನೆ. ಸರಿಯಾದ ರೀತಿಯಲ್ಲಿ ಅವನಿಗೆ ತನ್ನ ಜೀವನವನ್ನು ನಡೆಸಿಕೊಂಡು ಹೋಗಲಿಕ್ಕೆ ಆಗುತ್ತಿಲ್ಲ. ಅದಕ್ಕಾಗಿ ಅದರ ಬಗ್ಗೆ ನಾವು ಚಿಂತನೆ ಮಾಡಬೇಕು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಕೆಲವೊಂದು ಗ್ರಾಮೀಣಾಭಿವೃದ್ಧಿ ಬಗ್ಗೆ ಇ, ಕಾಮ್, ಮತ್ತೊಂದು ಯೋಜನೆ ಬಗ್ಗೆ ಹೇಳಿ ಗ್ರಾಮೀಣಾಭಿವೃದ್ಧಿ ಇವತ್ತು ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಆದರೆ ಎಷ್ಟರ ಮಟ್ಟಿಗೆ ಅದು ನಿಜವಾಗಿ ಕಾರ್ಯಗತ ಆಗುತ್ತದೆ ಎನ್ನುವುದನ್ನು ನಾವು ಚಿಂತನೆ ಮಾಡಬೇಕಾಗಿದೆ. ಆದರೆ ಇವತ್ತು ಕೆಲವೊಂದು ಯೋಜನೆಗಳನ್ನು ಅವರು ಹೇಳಿದರೂ ಸಹ ಇವತ್ತು ಬೆಂಬಲ ಬೇರೆ ಘೋಷಣೆ ಬಗ್ಗೆ, ರೈತರಿಗೆ ಬೆಲೆ ಇಳಿದಂತಹ ಸಂದರ್ಭದಲ್ಲಿ, ರೈತರ ಪೀಕ್‌ಗೆ ಬೆಲೆ ಹೋದಂತಹ ಸಂದರ್ಭದಲ್ಲಿ, ಡೌನ್ ಆದಂತಹ ಸಂದರ್ಭದಲ್ಲಿ ಅದಕ್ಕೆ ಬೆಂಬಲ ಬೆಲೆ ಘೋಷಣೆ ಮಾಡಿ ಅದಕ್ಕೆ ತತ್‌ಕ್ಷಣವಾದಂತಹ ಕ್ರಮಗಳನ್ನು ಕೈಗೊಳ್ಳುವಂತಹದ್ದು. ಏಕೆಂದರೆ ಈರುಳ್ಳಿ ಬೆಲೆ ಹೋದಾಗ 20 ಕೋಟಿ ರೂಪಾಯಿ ಆವರ್ತಕ ನಿಧಿಯನ್ನು ನಾವು ಮಾಡುತ್ತೇವೆಂದು ಹೇಳಿದರು. ಆಗ ಬಹುಶ: ನನಗೆ ಅನಿಸಿತ್ತು 90 ಲಕ್ಷದಿಂದ 1 ಕೋಟಿ ರೂಪಾಯಿವರೆಗೆ ಮಾತ್ರ ಹಣ ರಿಲೀಸ್ ಆಯಿತು. ಆದರೆ ಉಳಿದ ಹಣದ ಬಗ್ಗೆ ಚಿಂತನೆ ಆಗಲಿಲ್ಲ. ಅದೇ ರೀತಿ ಈ ಒಂದು ಸಾಂದರ್ಭಿಕ ಪ್ರಸಂಗದಲ್ಲಿ ಸರ್ಕಾರ ಒಂದು ಸ್ಪಷ್ಟವಾದ ನೀತಿಯನ್ನು ಅನುಸರಣೆ ಮಾಡಿದರೆ ಬಹುಶ: ನಾವು ಏನಾದರೂ ಸಾಧನೆ ಮಾಡಲಿಕ್ಕೆ ಸಾಧ್ಯ ಇದೆ, ರೈತರಿಗೆ ಅನುಕೂಲ ಮಾಡಿಕೊಡಲಿಕ್ಕೆ ಸಾಧ್ಯ ಇದೆ. ಅಥವಾ ನಾವು ಕೇವಲ ಘೋಷಣೆಗಳನ್ನು ಮಾಡುವುದಲ್ಲ. ಇವತ್ತು ಕೆಲವೊಂದು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ನಾವು ರೈತರಿಗೆ ಕೆಲವೊಂದು ತಿಳುವಳಿಕೆಗಳನ್ನು ಕೊಡಬಹುದು. ತಾಂತ್ರಿಕಜ್ಞಾನ ಅಥವಾ ಕೃಷಿಯ ಬಗ್ಗೆ ಹೆಚ್ಚಿನ ಜ್ಞಾನವನ್ನು ಅಸಿಸ್ಟೆನ್ಸ್ ಮೂಲಕವಾಗಿ ಕೊಡಬಹುದು. ಆದರೆ ನಿಜವಾಗಿ ಇವತ್ತು ನಾವು ಚಿಂತನೆ ಮಾಡಬೇಕಾಗಿದೆ. ರೈತರು ಬೆಳೆದಂತಹ ಬೆಳೆಗೆ ಯೋಗ್ಯವಾದುತಹ ಬೆಲೆಯನ್ನು ಕೊಡುವಂತಹ ಬಗ್ಗೆ ಹೆಚ್ಚಿನ ಚಿಂತನೆ ಇವತ್ತು ಆಗಬೇಕಾಗಿದೆ. ಇಲ್ಲಿಯ ತನಕ ಏನೂ ಆಗಿಲ್ಲ. ಕೆಲವೊಂದು ಸಂದರ್ಭದಲ್ಲಿ ಬರಗಾಲ ಇರಬಹುದು, ಆ ಬರಗಾಲ ಇದ್ದಂತಹ ಸಂದರ್ಭದಲ್ಲಿ ರೈತರ ಸಾಲದ ಮೇಲೆ ಬಡ್ಡಿ ಮನ್ನಾ ಮಾಡಿ ಅದರ ಮುಖಾಂತರ ತಕ್ಷಣ ನಾವು ಪರಿಹಾರ ಕೊಡುವುದಕ್ಕೆ ಸಾಧ್ಯ ಇದೆ. ಅಂತಹ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆಯೇ ಹೊರತು ಕೇವಲ ನಾವು ಅವರಿಗೆ ಸಹಾಯ ಮಾಡುವಂತಹ ಯೋಜನೆ ಮಾಡಿದರೆ, ಅದರಿಂದ ರೈತರಿಗೆ ಏನೂ ಪ್ರಯೋಜನ ಆಗುವುದಿಲ್ಲ. ಮತ್ತು ರೈತರ ಹೊಲಗಳಿಗೆ ಹೋಗುವಂತಹ ರಸ್ತೆಗಳ ಇಂಪ್ರೂವ್‌ಮೆಂಟ್ ನಾವು ಮಾಡಬೇಕಾಗಿದೆ. ಈಗ ನಾನು ಬಹಳಷ್ಟು ಗ್ರಾಮಗಳಿಗೆ ಹೋಗಿದ್ದೇನೆ. ಇವತ್ತು ಅವರುಗಳು ನಮ್ಮ ಹೊಲಕ್ಕೆ ಹೋಗಬೇಕು ಎಂದರೆ ಅಲ್ಲಿ

ಸರಿಯಾದ ದಾರಿಗಳು ಇಲ್ಲ. ರೈತರು ಕೇಳುತ್ತಾರೆ, ನಮ್ಮ ಊರಿಗೆ ಬರಲು ದಾರಿ ಇಲ್ಲದೇ ಇದ್ದರೂ ನಡೆಯುತ್ತದೆ ಆದರೆ ನಮ್ಮ ಹೊಲಕ್ಕೆ ಹೋಗಲು ದಾರಿ ಕೊಡಿ ಎಂದು ಹೇಳುತ್ತಾರೆ. ಇಂತಹ ಪರಿಸ್ಥಿತಿ ಇದೆ. ಅದಕ್ಕೆ ಇವತ್ತು ಈ ಬಗೆಯಲ್ಲಿ ಅಂದರೆ ರೈತರ ಬಗ್ಗೆ, ಒಕ್ಕಲುತನದ ಬಗ್ಗೆ ಚಿಂತನೆ ನಡೆದಿದ್ದರೆ ಬಹುಶ: ಅನುಕೂಲ ಆಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇನ್ನೊಂದು ವಿಚಾರ ಹೇಳುವಂತಹದು. ಇವತ್ತು ರೈಲ್ವೆ ಲೈನ್ಸ್ ಇಂಪ್ರೂವ್‌ಮೆಂಟ್ ಬಗ್ಗೆ ಅವರು ಹೇಳಿದ್ದಾರೆ. ಒಂದು ಆಯೋಗವನ್ನು ನೇಮಕ ಮಾಡುವ ಬಗ್ಗೆ ಹೇಳಿದ್ದಾರೆ. ಅದು ಒಳ್ಳೆಯದು. ಅದನ್ನು ಮಾಡಲಿ. ಕೆಲವೊಂದು ಯೋಜನೆಗೆ ಹಣದ ಅಲೊಕೇಶನ್ ಇಲ್ಲದೇ ಇದ್ದಿದುರಿಂದ, ಬ್ರಾಡ್ ಗೇಜ್ ಪರಿವರ್ತನೆ ಇರಬಹುದು ಅಥವಾ ಇನ್ನಿತರ ಹೊಸ ಲೈನ್ ಇರಬಹುದು, ಅಂತಹ ಕೆಲಸಗಳು ನಿಲ್ಲುತ್ತವೆ. ಅದಕ್ಕಾಗಿ ಇವತ್ತು ನಮ್ಮ ರಾಜ್ಯ ಸರ್ಕಾರದಿಂದ ಒಂದು ಆಯೋಗ ಮಾಡಿ, ಅದರಿಂದ ಏನಾದರೂ ಫಂಡ್ಸ್ ಮೊಬಿಲೈಸೇಷನ್ ಮಾಡಿ ತೀವ್ರ ಗತಿಯಲ್ಲಿ ರೈಲ್ವೆ ಲೈನ್ ಹೆಚ್ಚಿಗೆ ಆಗುವಂತಹದು ಮಾಡಿದರೆ ಅದು ಬಹಳ ಅನುಕೂಲ ಅಗುತ್ತದೆ. ಆದ್ದರಿಂದ ಆ ದಿಸೆಯಲ್ಲಿ ಪ್ರಯತ್ನ ಆಗಲಿ ಎನ್ನವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಇನ್ನೊಂದು ವಿಷಯ ಇದೆ. ಇವತ್ತು ನಮ್ಮ ಕರಾವಳಿ ಪ್ರದೇಶದಲ್ಲಿನ ತೊಂದರೆಗಳು. ಇವತ್ತು ಯಾಂತ್ರಿಕ ದೋಣಿಗಳನ್ನು ಉಪಯೋಗಿಸುವ ತೆರಿಗೆ ರಹಿತ ಡೀಸೆಲ್ ಪ್ರಯೋಜನ, ಅದು ಮೀನುಗಾರಿಕೆ ಇಲಾಖೆಯಿಂದಲೂ ಪ್ರಯೋಜನ ಇರಬೇಕು. ಏಕೆಂದರೆ ಯಾಂತ್ರೀಕೃತ ದೋಣಿಗಳನ್ನು ಉಪಯೋಗಿಸುವ ರೈತರಿಗೆ ತೆರಿಗೆ ರಹಿತ ಡೀಸೆಲ್ ಪ್ರಯೋಜನವನ್ನು ಕೊಟ್ಟಿದ್ದೀರಿ. ಆದರೆ ಅದೇ ರೀತಿ ಮೀನುಗಾರಿಕೆ ಇಲಾಖೆಯಿಂದಲೂ ಆ ಎಕ್ಸಂಪ್ಷನ್ ಸಿಗಬೇಕು ಎನ್ನುವಂತಹ ವಿಚಾರ ಇದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಕಳೆದ ಬಜೆಟ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖ ಇದೆ. ಡೀಸೆಲ್ ಮಾರಾಟ ತೆರಿಗೆ ಮೇಲೆ ಸಂಪೂರ್ಣ ವಿನಾಯಿತಿ ಎಂದು ಹೇಳುವಂತಹ ಒಂದು ಶಬ್ದ ಕೂಡ ಇದೆ. ಈ ಬಜೆಟ್‌ನಲ್ಲಿ ಅದರ ಬಗ್ಗೆ ಉಲ್ಲೇಖ ಆಗಲಿಲ್ಲ. ಮೀನುಗಾರರು ಇದರ ಬಗ್ಗೆ ವಿಶೇಷವಾಗಿ ಸ್ಪಷ್ಟೀಕರಣವನ್ನು ಕೇಳುತ್ತಿದ್ದಾರೆ. ಯಾವ ರೀತಿ ತೊಡಕು ಬರುತ್ತಿದೆ? ಯಾವ ರೀತಿ ತಾವು ಸರಳೀಕರಣ ಮಾಡುತ್ತಿದ್ದೀರಿ? ಮತ್ತೆ ಮೀನಾಗಾರಿಕಾ ಇಲಾಖೆ ವಾಣಿಜ್ಯ ಇಲಾಖೆಯಿಂದ ತಾವು ತರಲು ಯೋಚನೆ ಮಾಡಿದ್ದೀರಾ ಎಂದು ಹೇಳಿ. ಹಾಗೆ ಮಾಡುವಾಗ ತಾವು ಎಷ್ಟು ಗ್ರಾಂಟನ್ನು ಕೊಡಲು ಉದ್ದೇಶಿಸಿದ್ದೀರಿ? ಏಕೆಂದರೆ ಮೀನುಗಾರಿಕಾ ಇಲಾಖೆಗೆ ಗ್ರಾಂಟೇ ಇಲ್ಲ. ಕೇವಲ ಮಲೆನಾಡು ಇಲಾಖೆ ಇರಬಹುದು ಅಥವಾ ಮೀನುಗಾರಿಕಾ ಇಲಾಖೆಗೆ ಇರಬಹುದು. ಮಾನ್ಯ ಸಚಿವರು ನೇಮ್ ಸೇಕ್‌ಗೆ ಮಾತ್ರ ಕೆಲಸ ಮಾಡುತ್ತಿದ್ದಾರೆಯೇ ಹೊರತು ಅವರಿಗೆ ಯಾವುದೇ ಗ್ರಾಂಟ್ ಇಲ್ಲದೇ ಕೆಲಸ ಮಾಡುವಂತಹ ಸ್ಥಿತಿ ಬಂದಿದೆ. ಈ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕು ಎಂದು ಹೇಳುವಂತಹ ಒತ್ತಾಯವನ್ನೂ ಮಾಡುತ್ತಿದ್ದೇನೆ. ಮತ್ತು ಈಗಾಗಲೇ ಉಲ್ಲೇಖ ಮಾಡಿರುವಂತಹ ಇನ್ನೆರಡು ಅಂಶಗಳು ಇದೆ. ವಿಶೇಷವಾಗಿ ಇನ್‌ಫ್ರಾಸ್ಟ್ರಕ್ಚರ್‌ಗೆ ಸಂಬಂಧಪಟ್ಟಂತೆ, ಮಂಗಳೂರು ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ

ಉಲ್ಲೇಖ ಇದರಲ್ಲಿಲ್ಲ. ಮಂಗಳೂರಿನ ಸಾಫ್ಟ್ ವೇರ್ ಪಾರ್ಕ್‌ಗೆ ಸಂಬಂಧಪಟ್ಟಂತೆ ಏನೂ ಉಲ್ಲೇಖ ಇಲ್ಲ. ಹುಬ್ಬಳ್ಳಿ ಬಗ್ಗೆ ಮಾತ್ರ ಉಲ್ಲೇಖ ಮಾಡಿದ್ದಾರೆ. ಅರ್ತ್ ಸ್ಟೇಷನ್ ಮಂಗಳೂರಿಗೂ ಸ್ಯಾಂಕ್ಷನ್ ಆಗಿದೆ. ಈ ಬಗ್ಗೆ ಕೂಡ ತಾವು ಸ್ಪಷ್ಟೀಕರಣ ಕೊಡಬೇಕು ಎಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ಎಲ್ಲ ವಿಷಯದಲ್ಲಿ ಇವತ್ತು ಚಿಂತನೆ ಆಗಬೇಕಾಗಿರತಕ್ಕದ್ದು. ಮತ್ತು ಇನ್ನೊಂದು ಬಹು ಮುಖ್ಯವಾಗಿ ಹೇಳುವುದು. ಸಿಎಜಿ ರಿಪೋರ್ಟ್ ಬಗ್ಗೆ. ಇವತ್ತು ನಮ್ಮ ಮುಂದೆ ಸಿಎಜಿ ರಿಪೋರ್ಟ್ ಇದೆ. ಆ ರಿಪೋರ್ಟ್ ನೋಡಿದ ಮೇಲೆ ಇವತ್ತು ಒಂದು ಆರ್ಥಿಕ ಶಿಸ್ತನ್ನು ಮೂಡಿಸುವಂತಹ ಅವಶ್ಯಕತೆ ಇದೆ ಎನ್ನುವ ಮಾತನ್ನು ಅದರಲ್ಲಿ ಹೇಳಿದ್ದಾರೆ. ಇವತ್ತು ನಾವು ಬೇರೆ ರಾಜ್ಯದ ಪರಿಸ್ಥಿತಿ ಹಾಗೂ ನಮ್ಮ ರಾಜ್ಯದ ಪರಿಸ್ಥಿತಿ ನೋಡಿದರೆ ಬಹುಶ: ಆಡಳಿತ ವೆಚ್ಚ ಹೆಚ್ಚಾಗಿ ಬರುತ್ತದೋ ಮತ್ತು ಸರಿಯಾದ ರೀತಿಯಲ್ಲಿ ಹಣದ ಒಂದು ಉಪಯೋಗ ಆಗಲಾರದಂತಹ ವ್ಯವಸ್ಥೆ ಇರುವುದರಿಂದ ಇವತ್ತು ಒಂದು ಫೈನಾನ್ಸಿಯಲ್ ಕ್ರೈಸಿಸ್‌ನಲ್ಲಿ ಎಲ್ಲಾ ರಾಜ್ಯಗಳು ಇವೆ, ಅದೇ ರೀತಿ ನಮ್ಮದೂ ಇದೆ ಎನ್ನುವಂತಹ ವಿಚಾರ ಇದೆ. ಅದಕ್ಕಾಗಿ ಆರ್ಥಿಕ ಶಿಸ್ತನ್ನು ತರಲಿಕ್ಕೆ ಏನು ಪ್ರಯತ್ನ ಮಾಡಬೇಕು? ಆ ಬಗ್ಗೆ ಹೆಚ್ಚು ಚಿಂತನೆ ಆಗಬೇಕಾಗಿರುತ್ತದೆ. ಅದಕ್ಕೆ ನಾವು ಈ ಬಜೆಟ್ ಅನ್ನು ಇವತ್ತು ನೋಡಿದ ಮೇಲೆ, ಇದರ ಬಗ್ಗೆ ಇನ್ನೂ ಹೆಚ್ಚಿನ ಚಿಂತನೆ ಇನ್ನೂ ಹೆಚ್ಚಿನ ಬೆಳಕು, ಚಿಂತನೆ ಮಾನ್ಯ ಮುಖ್ಯಮಂತ್ರಿಗಳು ಚೆಲ್ಲಬೇಕಾಗಿತ್ತು. ಅದು ಆಗಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಇನ್ನೂ ಹೆಚ್ಚಿನ ರೀತಿಯಿಂದ ಅನುಷ್ಠಾನ ಆಗಬೇಕು. ಈಗೇನು ಕೆಲವೊಂದು ಘೋಷಣೆಗಳನ್ನು ಮಾಡಿದ್ದಾರೆ, ಅದು ಇನೂ ಹೆಚ್ಚಿನ ರೀತಿಯಿಂದ ಪರಿಣಾಮಕಾರಿಯಾಗಿ ಅನುಷ್ಠಾನ ಆಗುವ ರೀತಿಯಲ್ಲಿ ಆಗಬೇಕಾಗಿರುತ್ತದೆ. ಅದಕ್ಕೆ ಆ ದಿಸೆಯಲ್ಲಿ ಈ ಬಜೆಟ್ ವಿಫಲ ಆಗಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತಿದ್ದೇನೆ. ಮತ್ತು ಜೊತೆಗೆ ಹಲವಾರು ಹೊಸದಾಗಿ ಘೋಷಣೆಗಳನ್ನು ಹೇಳಿದರೂ ಸಹ, ಅದು ಕೇವಲ ಯೋಜನೆಗಳಾಗಲೀ ಅಥವಾ ಜನಪ್ರಿಯ ಘೋಷಣೆಗಳಾಗಿ ಉಳಿಯಬಾರದು. ಅದ್ಧಕಾಗಿ ಈ ಬಜೆಟ್‌ನ ಕಂಟೆಂಟ್ಸ್ ನೋಡಿದರೆ ಆ ಭಾವನೆ ನಮಗೆ ಬರಲಿಕ್ಕೆ ಸಾಧ್ಯ ಇದೆ. ಅದಕ್ಕಾಗಿ ಯಾವುದೇ ಒಂದು ಹೊಸದಾಗಿ ಕಾಣುವಂತಹದ್ದು ಅಥವಾ ಹೊಸದಾಗಿ ಹೊಸ ಸಿಗ್ನಲ್ ಹೋಗುವಂತಹದ್ದು, ಇಲ್ಲ. ಎಲ್ಲ ಭಾಗದಿಂದ ನಿರಾಶಾದಾಯಕ ನಮಗೆ ಆಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಂತಹ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

5.00 ಪಿ.ಎಂ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಸನ್ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಮಾನ್ಯ ಮುಖ್ಯಮಂತ್ರಿಗಳು 2000-2001ನೇ ಸಾಲಿನ ಮುಂಗಡ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. ಈ ಆಯವ್ಯಯ ಪತ್ರವನ್ನು ಮುಂಬರುವ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಮೇಲೆ ಕಣ್ಣಿಟ್ಟು ಮಂಡಿಸಿದ್ದಾರೆನ್ನುವ ಅನಿಸಿಕೆ ನನ್ನಲ್ಲಿ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು

ಚುನಾವಣೆ ಮೊದಲು ಮತ್ತು ನಂತರ ಅನೇಕ ಘೋಷಣೆಗಳನ್ನು ಮಾಡಿದರು. ಅದು ಬಳ್ಳಾರಿಗೆ 3,600 ಕೋಟಿ ರೂಪಾಯಿಗಳಷ್ಟು ದುಡ್ಡನ್ನು ಕೊಡುವುದಾಗಬಹುದು, ಬೆಂಗಳೂರನ್ನು ಸಿಂಗಾಪುರವನ್ನಾಗಿ ಮಾಡವುದಾಗಿರಬಹುದು ಮತ್ತು ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಆಹಾರಧಾನ್ಯಗಳನ್ನು ಒದಗಿಸುವದಾಗಿರಬಹುದು. ಈ ತರಹದ ಅನೇಕ ಘೋಷಣೆಗಳನ್ನು ಮಾಡಿ ಇವೊತ್ತು 396.30 ಕೋಟಿ ರೂಪಾಯಿಗಳ ಖೋತಾ ಬಜೆಟ್ ಅನ್ನು ಮಂಡಿಸಿದ್ದಾರೆ. ಚುನಾವಣೆ ನಡೆಯುವುದಕ್ಕೆ ಮುನ್ನ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯವರು ಪ್ರಾಣಾಳಿಕೆ ಮೂಲಕ ಅನೇಕ ವಿಷಯಗಳನ್ನು ಹೇಳಿದ್ದಾರೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯ ಪತ್ರದಲ್ಲಿ ಪ್ರಣಾಳಿಕೆಯಲ್ಲಿ ತಿಳಿಸಿರುವ ಬಹಳಷ್ಟು ವಿಷಯಗಳು ಬಿಟ್ಟು ಹೋಗಿರುವುದರಿಂದ ಅದನ್ನು ತಮ್ಮ ಮೂಲಕ ಅವರ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ಮೊದಲನೆಯದಾಗಿ, ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಮಾರುಕಟ್ಟೆ ವ್ಯವಸ್ಥೆಗೆ ಸಂಬಂಧಿಸಿದಂತೆ ನಿಖರವಾಗಿ ತಿಳಿಸುವ ಮಾಹಿತಿಯ ವ್ಯವಸ್ಥೆಯನ್ನು ಕಾಂಗ್ರೆಸ್ ರೂಪಿಸುವುದು. ಹೀಗೆ ಮಾಡುವುದರಿಂದ ಬೆಳೆಗಳ ಮಾರಾಟದಲ್ಲಿ ಸಮಸ್ಯೆ ಒದಗುವುದಿಲ್ಲ. ರೈತನಿಗೆ ಉತ್ಪನ್ನಗಳ ಶೇಕಡಾ 50ರಷ್ಟು ಮೌಲ್ಯಗಳನ್ನು ಮುಂಗಡವಾಗಿ ನೀಡಿ ತನ್ಮೂಲಕ ಒತ್ತಡಕ್ಕೆ ಮಣಿದು ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗುವ ಪರಿಸ್ಥಿತಿಗಳನ್ನು ನಮ್ಮ ಪಕ್ಷ ನಿವಾರಿಸುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ಯಾವ ಹಂತದಲ್ಲಿ ಸೇರಿಸಬೇಕಾಗಿತ್ತೋ, ಆ ಹಂತದಲ್ಲಿ ಸೇರಿಸಿರುವುದಿಲ್ಲ. ಚುನಾವಣೆಗೆ ಮುನ್ನ ಪ್ರಣಾಳಿಕೆ ಮೂಲಕ ರೈತರುಗಳಿಗೆ ಇದನ್ನು ಹೇಳಿ ಅವರಿಂದ ಓಟುಗಳನ್ನು ತೆಗೆದುಕೊಂಡರು. ಈ ಹಿಂದಿನ ಐದು ವರ್ಷಗಳಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ 'ನಮ್ಮದು ರೈತರ ಪರ ಸರ್ಕಾರ' ವೆಂದು ಹೇಳಿಕೊಂಡು ಬಂದಿದ್ದು ನಿಜ. ಆದರೆ, ನೀವು 'ದಲಿತರ, ಅಲ್ಪಸಂಖ್ಯಾತರ ಉದ್ಧಾರಕ್ಕೋಸ್ಕರವೇ ಅಧಿಕಾರಕ್ಕೆ ಬಂದಿದ್ದೇವೆ' ಎಂದು ಹೇಳಿಕೊಳ್ಳುತ್ತಾ ಪ್ರಾಣಾಳಿಕೆಯಲ್ಲಿ ತಿಳಿಸಿರುವಂತೆ ರೈತರ ಉತ್ಪನ್ನಗಳ ಮೇಲೆ ಶೇಕಡಾ 50ರಷ್ಟು ಮುಂಗಡವಾಗಿ ನೀಡಬೇಕಾಗಿದ್ದ ಹಣವನ್ನು ನೀಡುವ ಬಗ್ಗೆ ಮಂಡಿಸಿರುವ ಆಯವ್ಯಯ ಮುಂಗಡಪತ್ರದಲ್ಲಿ ತಾವು ಎಲ್ಲಿಯೂ ಕೂಡ ಪ್ರಸ್ತಾಪಿಸಿಲ್ಲ. 'ರೆಗ್ಯುಲೇಟರಿ ಕಮೀಷನ್‌ಗೆ ಮತ್ತಷ್ಟು ಅಧಿಕಾರ ನೀಡಲಾಗುವುದು, ಗ್ರಾಹಕರಿಗೆ ನಿರಂತರ ಮತ್ತು ಉತ್ತಮ ಮಟ್ಟದ ವಿದ್ಯುತ್ತಿನ ಸರಬರಾಜು ಮಾಡಲು ಅನುಕೂಲವಾಗುವಂತೆ ಸಕಲ ಪ್ರಯತ್ನ ಕೈಗೊಳ್ಳಲಾಗುವುದು. ಎಂದಿದ್ದೀರಿ. ಚುನಾವಣೆಗೆ ಮೊದಲು ಹಳ್ಳಿಗಳಿಗೆ ನಾವು ಹೋದಂಥ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರುಗಳು ಹೇಳುತ್ತಿದ್ದುದು: ಜನತಾ ದಳದವರು ನಿಮಗೆ ಕರೆಂಟ್ ಕೊಡುವುದಿಲ್ಲ, ಆದ್ದರಿಂದ, ನೀವು ಓಟು ಹಾಕಬೇಡಿ ಎಂದು. ಆದರೆ, ನಾವು ಅವರಿಗೆ ವೈರ್ ಮೂಲಕ ಕರೆಂಟ್ ಕೊಟ್ಟೆವು. ಅವರಿಂದ ಇವರು ಓಟುಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ಎರಡು ಇಂಚ್ ಪೈಪ್‌ನಲ್ಲಿ ನಾವು ಕರೆಂಟ್ ಕೊಡುತ್ತೇವೆಂದು ಹೇಳಿದ ಮಾತುಗಳನ್ನು ನಾನು ಇವೊತ್ತು ಜ್ಞಾಪಿಸುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ವಿಚಾರವನ್ನು ನಿಜವಾಗಿಯೂ ಕೂಡ ಪ್ರಶಂಸಿಸಲೇಬೇಕು. ಏಕೆಂದರೆ, ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ದಕ್ಷಿಣ ಕರ್ನಾಟಕದ ಕೋಲಾರದಲ್ಲಿ ಸುಮಾರು ಎರಡೂವರೆ ಸಾವಿರ ಟನ್ ಸಾಮರ್ಥ್ಯದ ಶೈತ್ಯಾಗಾರ

ನಿರ್ಮಾಣದ ಶಂಕುಸ್ಥಾಪನೆಯನ್ನು ಈಗಿನ ಕಾಂಗ್ರೆಸ್ ಪಕ್ಷದ ನಾಯಕರು ಅಂದು ಸ್ಪೀಕರ್ ಆಗಿದ್ದಾಗ ಅವರನ್ನು ಕರೆದುಕೊಂಡು ಹೋಗಿ ಮಾಡಿಸಿದ್ದೆ. ಇವೊತ್ತು ವಿದ್ಯುತ್‌ಗೆ ಸಂಬಂಧಿಸಿದಂತೆ ಒಂದು ರೂಪಾಯಿಯಷ್ಟು ಹಣವನ್ನು ಕಡಿಮೆ ಮಾಡುವುದರ ಮೂಲಕ ನಿಜವಾಗಿಯೂ ಒಳ್ಳೆಯ ಕ್ರಮವನ್ನು ಅನುಸರಿಸಿದ್ದಾರೆ. ನಾವು ಕೆಟ್ಟದ್ದರ ಜೊತೆಗೆ ಒಳ್ಳೆಯದನ್ನೂ ಸಹ ಹೇಳಬೇಕಾಗುತ್ತದೆ. ರೈತರ ಸಂಕಷ್ಟ ನಿಧಿಯನ್ನು ಇಡುತ್ತೇವೆಂದು ಹೇಳಿದ್ದರೂ ಇದುವರೆವಿಗೂ ಇಟ್ಟಿಲ್ಲ. ಆಯವ್ಯಯ ಪತ್ರದಲ್ಲೂ ಪ್ರಸ್ತಾಪಿಸಿಲ್ಲ. ಅನಂತರ 'ಪಶ್ಚಿಮದತ್ತ ಹರಿದು ಬಂದು ಸಮುದ್ರ ಸೇರುವ ನೇತ್ರಾವತಿ ಮುಂತಾದ ನದಿಗಳ ನೀರು ಹಾಸನ, ತುಮಕೂರು, ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶಕ್ಕೆ ಉಪಯೋಗಕ್ಕೆ ಬರುವಂತೆ ನಮ್ಮ ಸರ್ಕಾರ ವ್ಯವಸ್ಥೆ ಮಾಡುತ್ತದೆಂದು ಹೇಳಿದ್ದರೂ ಅದನ್ನೂ ಪ್ರಸ್ತಾಪಿಸಿಲ್ಲ.' ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎಂಬುದನ್ನು ಇಲ್ಲಿ ತೋರಿಸಿಲ್ಲ. 'ಜಲಾನಯನ ವ್ಯವಸ್ಥೆ ಆಧಾರದ ಮೇಲೆ ಸಮಗ್ರ ಭೂ ಜಲ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುವುದು' ಎಂದಿದ್ದೀರಿ. ಇದಕ್ಕೆ ಸ್ವಲ್ಪ ಹೆಚ್ಚು ಒತ್ತು ಕೊಡಲಾಗಿದೆ, ಇಲ್ಲವೆಂದು ಹೇಳುವುದಿಲ್ಲ. ಅದೇ ರೀತಿ ಗುಡಿ ಕೈಗಾರಿಕೆಗಳ ಬಗ್ಗೆ ಹೇಳಿದ್ದೀರಿ. ಗುಡಿ ಕೈಗಾರಿಕೆಗಳ ಬಗ್ಗೆ ಮಹಾತ್ಮ ಗಾಂಧೀಜಿಯವರು ಕನಸು ಕಂಡಿದ್ದರು. ಇವೊತ್ತು ಯಾವುದೇ ದೇಶ ಅಭಿವೃದ್ಧಿಯಾಗಬೇಕಾದರೆ, ಉದಾಹರಣೆಗೆ ಭಾರತ ದೇಶ ಅಭಿವೃದ್ಧಿ ಹೊಂದಬೇಕಾದರೆ ಭಾರತದ ಹಳ್ಳಿಯಲ್ಲಿರುವ ಗುಡಿ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕೆಂದು ಹೇಳಿದ್ದರು. ಆದರೆ, ಗುಡಿ ಕೈಗಾರಿಕೆಗಳ ಕರಕುಶಲ ಕಾರ್ಯ ಚಟುವಟಿಕೆಗಳಿಗಾಗಿ ಆಯವ್ಯಯದಲ್ಲಿ ಹಣವನ್ನು ಇಟ್ಟಿದ್ದಾಗಲೀ ಅಥವಾ ಮೀಸಲಿಟ್ಟ ಹಣವಾಗಿ ಅದನ್ನು ಕಾರ್ಯರೂಪದಲ್ಲಿ ಕೂಡ ತಂದಿಲ್ಲ. ಇನ್ನೊಂದು ವಿಷಯ ಬಹಳ ಚೆನ್ನಾಗಿ ಹೇಳಿರುವುದೇನೆಂದರೆ, 'ಕೆಎಸ್‌ಎಫ್‌ಸಿ ಸಾಲ ನೀಡಿರುವ ಎಲ್ಲಾ ರೋಗಗ್ರಸ್ತ ಕೈಗಾರಿಕಾ ಘಟಕಗಳಿಗೆ ಕಡೆಯದಾಗಿ ಮತ್ತೊಂದು ಬಾರಿ ಸಾಲ ತೀರಿಸುವ ಸಲುವಾಗಿ ಅವಧಿ ವಿಸ್ತರಣಾ ಸೌಲಭ್ಯ ಕಲ್ಪಿಸಲಾಗುವುದು' ಎಂದು ಹೇಳಿದ್ದರೂ ಇದನ್ನು ಮುಂದುವರೆಸಿದರೆ ಅನುಕೂಲವಾಗುತ್ತದೆ. ಇದು ಆಯವ್ಯಯ ಪತ್ರದಲ್ಲಿ ಬರಬೇಕಾಗಿಲ್ಲ, ಇದು ಮಾಡುವಂಥ ಕೆಲಸವಾಗಿದೆ. ಪ್ರಣಾಳಿಕೆಯಲ್ಲಿ ನೀವು ಏನೇನು ಹೇಳಿದ್ದೀರಿ, ಈಗಿನ ಕಾಂಗ್ರೆಸ್ ಪಕ್ಷದ ನಾಯಕರೇ ಚುನಾವಣಾ ಪೂರ್ವದಲ್ಲಿ ಪ್ರಣಾಳಿಕಾ ತಯಾರಿಕೆ ಸಮಿತಿಯ ಅಧ್ಯಕ್ಷರಾಗಿದ್ದರಿಂದ ಚುನಾವಣಾ ಸಮಯದಲ್ಲಿ ಜನರಿಂದ ಓಟು ಕೇಳುವ ಸಂದರ್ಭಕ್ಕೂ, ಇವೊತ್ತು ತಮ್ಮ ರಾಜಕೀಯದ ಕಾರ್ಯ ಬಾಹುಳ್ಯ ವಿಸ್ತಾರವಾಗಿ ನಾಯಕರಾಗಿ ಪಕ್ಷ ನಡೆಸುವುದಕ್ಕೂ ಮತ್ತು ಸರ್ಕಾರ ನಡೆಸುವುದಕ್ಕೂ ಎಷ್ಟು ವ್ಯತ್ಯಾಸವಿದೆ ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. 'ಪ್ರಾಥಮಿಕ ಶಿಕ್ಷಣದತ್ತ ಕಾಂಗ್ರೆಸ್ ಹೆಚ್ಚು ಗಮನ ಹರಿಸಿ, ಮಧ್ಯಾಹ್ನದ ಊಟ ಮುಂತಾದ ಪೌಷ್ಠಿಕಾಂಶದ ಯೋಜನೆಗಳನ್ನು ಜಾರಿಗೊಳಿಸುವುದು, ಇದಕ್ಕಾಗಿ ಅಂಗನವಾಡಿ ಜಾಲವನ್ನು ಬಳಸಿಕೊಳ್ಳಲಾಗುವುದು'. ಈ ವಿಷಯವನ್ನು ಆಯವ್ಯಯ ಪತ್ರದಲ್ಲಿ ಎಲ್ಲಿಯೂ ಕೂಡ ಪ್ರಸ್ತಾಪಿಸಿಲ್ಲ. ಚುನಾವಣಾ ಪೂರ್ವದಲ್ಲಿ ಜನರಿಂದ ಓಟುಗಳನ್ನು ಪಡೆಯಲೋಸುಗ ಪ್ರಣಾಳಿಕೆ ಮೂಲಕ ನೀವು ಸಾಕಷ್ಟು ಹೇಳಿದ್ದೀರಿ. 'ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲಿಕರು ಭಾರೀ ಮೊತ್ತದ ಪ್ರವೇಶ ಶುಲ್ಕವನ್ನು ವಸೂಲು ಮಾಡುತ್ತಿರುವುದರಿಂದ, 1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಕಾಯ್ದೆಯನ್ನು ಜಾರಿಗೊಳಿಸುವ

ಮೂಲಕ ಹಣ ಸುಲಿಗೆಯನ್ನು ನಿಲ್ಲಿಸಲು ನಮ್ಮ ಪಕ್ಷ ಬದ್ಧವಾಗಿದೆ' ಎಂದಿದ್ದೀರಿ. ಇವೊತ್ತು ಎಲ್ಲೆಂದರಲ್ಲಿ ನಾಯಿಕೊಡೆಗಳಂತೆ ಶಿಕ್ಷಣ ಸಂಸ್ಥೆಗಳು ಎದ್ದೇಳುತ್ತಿವೆ, ಅವು ಶಾಲಾ-ಕಾಲೇಜುಗಳಾಗಿರಬಹುದು. ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆಯೆಂಬುದನ್ನು ಆಯವ್ಯಯ ಪತ್ರದಲ್ಲೆಲ್ಲೂ ಪ್ರಸ್ತಾಪಿಸಿಲ್ಲ. ಮತ್ತು ತಾಲ್ಲೂಕಿನಲ್ಲಿ ಆಶ್ರಮ ಶಾಲೆಗಳನ್ನು ಕಟ್ಟಲು ಹೊಸ ಯೋಜನೆಯೊಂದನ್ನು ನಮ್ಮ ಸರ್ಕಾರ ಆರಂಭಿಸಿದೆಯೆಂದು ಹೇಳಿದ್ದರೂ ಅದನ್ನು ಕೂಡ ಪ್ರಸ್ತಾಪಿಸಿರುವುದಿಲ್ಲ. ಇನ್ನು ಆರೋಗ್ಯದ ವಿಷಯದಲ್ಲಿ 'ಮೂತ್ರಪಿಂಡ ರೋಗ, ಹೃದ್ರೋಗ ಹಾಗೂ ಕ್ಯಾನ್ಸರ್ ಕಾಯಿಲೆಗಳಿಂದ ಬಳಲುತ್ತಿರುವ ಬಡ ಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ಒದಗಿಸಲಾಗುವುದು' ಎಂದಿದ್ದೀರಿ. ಇಂತಹ ಕಾಯಿಲೆಗಳಿಂದ ಬಳಲುತ್ತಿರುವ ಬಡ ಜನರಿಗೆ ಉಚಿತವಾಗಿ ವೈದ್ಯಕೀಯ ಚಿಕಿತ್ಸೆ ಒದಗಿಸಿ ಆರೈಕೆ ಮಾಡಬೇಕಾದರೆ ಆಯವ್ಯಯ ಪತ್ರದಲ್ಲಿ ಎಷ್ಟು ಹಣ ಇಟ್ಟಿದ್ದೀರೆಂಬುದನ್ನು ತಿಳಿಸಿಲ್ಲ. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವ ಮಾಸಿಕ ಭತ್ಯೆಯನ್ನು ಏರಿಸುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಹೇಳಿದ್ದರೂ ಅದನ್ನೂ ಪ್ರಸ್ತಾಪಿಸಿಲ್ಲ. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಅನುಕೂಲಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೂ ಕೂಡ ವಿಸ್ತರಿಸಲಾಗುವುದು, ಎಂದಿದ್ದರೂ ಅದನ್ನೂ ತಿಳಿಸಿರುವುದಿಲ್ಲ. ಇನ್ನು ನಮ್ಮ ರಾಜ್ಯದಲ್ಲಿರುವ ನೇಕಾರರ ಸಮುದಾಯದ ಕುರಿತು ಹೇಳುವುದಾದರೆ ಇವೊತ್ತು ನಾವು ಖಾದಿ ಬಟ್ಟೆ ಧರಿಸಿರಬೇಕಾದರೆ ಅವರು ಅದಕ್ಕೆ ಪ್ರಮುಖ ಕಾರಣರಾಗಿದ್ದು ಅವರ ಅಭಿವೃದ್ಧಿಗಾಗಿ ಆಯವ್ಯಯ ಪತ್ರದಲ್ಲೆಲ್ಲೂ ಕೂಡ ಒತ್ತುಕೊಟ್ಟಿಲ್ಲವೆನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಶ್ರೀ ಎಂ. ಮಹದೇವ್ : ನೇಕಾರ ಸಮುದಾಯದ ಅಭಿವೃದ್ಧಿಗಾಗಿ ನಾವು ಸಾಕಷ್ಟು ಅನುಕೂಲಗಳನ್ನು ಸೃಷ್ಟಿಸಿಕೊಟ್ಟಿದ್ದೇವೆ. ಯಾವುದೂ ಮಾಡಿಲ್ಲವೆಂದರೆ ಮಾಡಿರುವುದು ಯಾವುದೆಂದು ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಇವೊತ್ತು ನೇಕಾರ ಸಮುದಾಯದ ಅಭಿವೃದ್ಧಿಗಾಗಿ ಸರ್ಕಾರದವರಾದ ತಾವು ಏನಾದರೂ ಕಾರ್ಯಕ್ರಮ ಹಮ್ಮಿಕೊಂಡಿದ್ದಿದ್ದರೆ ಆಯವ್ಯಯ ಪತ್ರದ ಮೂಲಕ ತೋರಿಸಬೇಕಾಗಿತ್ತು. ನೀವು ಮಾಡಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ನೀವು ಶೈತ್ಯಾಗಾರ ನಿರ್ಮಿಸಿರುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ, ನೀವು ಮಾಡದಿರುವ ಕೆಲಸಗಳನ್ನೆಲ್ಲಾ ಪ್ರಣಾಳಿಕೆ ಮೂಲಕ ತಂದು ಜನರನ್ನು ವಂಚಿಸಿ ಅವರಿಂದ ಮತಗಳನ್ನು ಪಡೆದುಕೊಂಡು ಅಧಿಕಾರಕ್ಕೆ ಬಂದಿರುವುದನ್ನು ಹೇಳುತ್ತಿದ್ದೇನೆ. ನಿಮ್ಮ ಚುನಾವಣಾ ಪೂರ್ವದ ಪ್ರಣಾಳಿಕೆಯಲ್ಲಿರುವುದನ್ನೇ ಹೇಳುತ್ತಿದ್ದೇನೇ ವಿನಾ ಬೇರೇನೂ ಹೇಳುತ್ತಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮ್ಮ ಪಕ್ಷದ ಪ್ರಣಾಳಿಕೆಯನ್ನು ನೀವು ಇಷ್ಟು ಚೆನ್ನಾಗಿ ಓದುತ್ತೀರಿ ಎಂದು ಗೊತ್ತಿದ್ದಿದ್ದರೆ ಇದರ ಜವಾಬ್ದಾರಿಯನ್ನು ನಿಮಗೇ ವಹಿಸಿಕೊಡಬೇಕಾಗಿತ್ತೆಂದು ನನಗನ್ನಿಸುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ : ಕಳೆದ ಐದು ವರ್ಷಗಳಲ್ಲಿ ನಾವು ಸರಿಯಾಗಿ ಕೆಲಸ ಮಾಡಲಿಲ್ಲವೆನ್ನುವ ಕಾರಣಕ್ಕೆ ಜನರು ನಮ್ಮನ್ನು ಇಲ್ಲಿ ತಂದು ಕೂರಿಸಿದ್ದಾರೆ. ನಾಳೆ ದಿವಸ ನೀವೂ ಕೂಡ ಇಲ್ಲಿಗೆ ಬರುತ್ತೀರಿ. ಅದರ ಅರಿವು ನನಗಿದೆ. ನಾವು ಚೆನ್ನಾಗಿ ಕೆಲಸ ಮಾಡದೇ ಕಷ್ಟಾಡಿದ್ದೇವೆಂದು ನಮ್ಮನ್ನು ಇತ್ತ ಕಡೆ ತಂದು ಕೂರಿಸಿದ್ದಾರೆ. ಆದುದರಿಂದ ನೀವು ಸರಿಯಾಗಿ ಕೆಲಸ ಮಾಡಬೇಕೆಂದು ಹೇಳುತ್ತಿದ್ದೇನೆ. ಇನ್ನು 'ಆರ್ಥಿಕ ನೆರವನ್ನು ವಕ್ಫ್ ನಿಧಿಯಿಂದ ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಪಾಲನಾ ಧನಸಹಾಯವನ್ನಾಗಿ ಒದಗಿಸಲಾಗುವುದು' ಎಂದಿದ್ದೀರಿ. ರಾಜ್ಯದಲ್ಲಿ ಚುನಾವಣಾ ಸಮಯದಲ್ಲಿ ನೂರಕ್ಕೆ ತೊಂಭತ್ತೈದು ಭಾಗದಷ್ಟು ಮುಸ್ಲಿಂಬಾಂಧವರು ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿದರು. ಇಸ್ಲಾಂ ಧರ್ಮದಲ್ಲಿ ವಿವಾಹ ವಿಚ್ಛೇದನವೆನ್ನುವುದು ಬಹಳ ಸುಲಭವಾಗಿದ್ದು ಮೂರು ಸಲ 'ತಲಾಕ್' ಎಂದರೆ ವಿಚ್ಛೇದನವುಂಟಾಗುತ್ತದೆ. ಹಾಗಾಗಿ ಅನೇಕ ವಿವಾಹ ವಿಚ್ಛೇದನಗಳಾಗಿದ್ದರೂ ವಿಚ್ಛೇದಿತ ಮುಸ್ಲಿಂ ಮಹಿಳಿಯರಿಗೆ ಪಾಲನಾ ಧನಸಹಾಯ ಒದಗಿಸುವ ಒಳ್ಳೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ಪ್ರಣಾಳಿಕೆಯಲ್ಲಿ ತಿಳಿಸಿದ್ದರೂ ಅದನ್ನು ಕಾರ್ಯರೂಪಕ್ಕೆ ತರದೇ ಅವರ ಮತಗಳನ್ನು ಪಡೆಯುವುದಕ್ಕೋಸ್ಕರ ಪ್ರಣಾಳಿಕೆಯಲ್ಲಿ ಸೇರಿಸಿದ್ದೀರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಹಿಳೆಯರಿಗೆ ಪಿ.ಯು.ಸಿ. ಮಟ್ಟದವರೆಗೆ ಉಚಿತ ಶಿಕ್ಷಣ ಎಂದು ಹೇಳಿದ್ದೀರಿ. ಅದು ಈಗಾಗಲೇ ಇದೆ. ಕಾಲೇಜು ಮಟ್ಟದವರೆಗೆ ಉಚಿತ ಶಿಕ್ಷಣವೆಂದು ಸೇರಿಸಬೇಕಾಗಿತ್ತು. ವ್ಯಾಪಕ ಸಮೀಕ್ಷೆ ನಡೆಸಿ 19 ಲಕ್ಷ ವಸತಿ ಹೀನರನ್ನು ಗುರುತಿಸಿದ್ದ ಜನತಾದಳ ಸರ್ಕಾರ ಕಳೆದ ಐದು ವರ್ಷಗಳಲ್ಲಿ ಒಂದು ಲಕ್ಷ ಮನೆಗಳನ್ನು ಒದಗಿಸಿತ್ತು. ಆದರೆ ಕಳೆದ ಐದು ವರ್ಷಗಳಲ್ಲಿ ಒಂದು ಲಕ್ಷ ಮನೆಯನ್ನು ಒದಗಿಸಿಲ್ಲವೆಂದು ಹೇಳಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಐದು ಲಕ್ಷ ಮನೆಗಳನ್ನು ಕೊಟ್ಟಿದ್ದೇವೆ. ತಾವು ವರ್ಷಕ್ಕೆ ಎರಡು ಲಕ್ಷ ಮನೆಗಳಂತೆ ಐದು ವರ್ಷಗಳಲ್ಲಿ ಹತ್ತು ಲಕ್ಷ ಮನೆಗಳನ್ನು ಕೊಡುವುದಾಗಿ ಹೇಳಿದ್ದೀರಿ, ಸಂತೋಷ. ನಾವು ಐದು ಲಕ್ಷ ಕೊಟ್ಟಿದ್ದೆವು ತಾವು ಹತ್ತು ಲಕ್ಷ ಕೊಡುತ್ತೇವೆ ಎಂದು ಹೇಳಿದ್ದೀರಿ, ಇದು ಸಂತೋಷದ ವಿಚಾರ. ಮುಂದಿನ ಐದು ವರ್ಷಗಳಲ್ಲಿ ನಾವು ವಸತಿ ಹೀನರಿಗೆ ಮತ್ತು ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ನಿವೇಶನವನ್ನು ಒದಗಿಸುತ್ತೇವೆ ಎಂದು ಹೇಳಿದ್ದೀರಿ, ಆದರೆ ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ, ಯಾವ ರೀತಿಯಲ್ಲಿ ಖರ್ಚುಮಾಡುತ್ತೀರಿ, ಎಂಬ ಬಗ್ಗೆ ಹೇಳಲಿಲ್ಲ. ಅಂಗನವಾಡಿ ಕಾರ್ಯಕರ್ತರಿಗೆ ಕನಿಷ್ಟ ವೇತನವನ್ನು ನಿಗದಿ ಮಾಡುವುದಲ್ಲದೆ. 200 ಲಕ್ಷ ರೂಪಾಯಿಗಳಲ್ಲಿ ಅಂಗನವಾಡಿ ಕಾರ್ಯಕರ್ತರಿಗೆ ಕಲ್ಯಾಣ ನಿಧಿಯನ್ನು ಸ್ಥಾಪಿಸುವುದಾಗಿ ಹೇಳಿದ್ದೀರಿ. ಬೆಳಗಾದರೆ ಸಾಕು ತಾಲ್ಲೂಕು ಕಛೇರಿ ಇರಬಹುದು. ಜಿಲ್ಲಾಧಿಕಾರಿಯವರ ಕಛೇರಿ ಇರಬಹುದು, ವಿಧಾನಸೌಧವಿರಬಹುದು ಅವರ ಗೋಳು ಹೇಳತೀರದಾಗಿದೆ. ನಾಲ್ಕು ನೂರು ರೂಪಾಯಿಗಳನ್ನು ಕೊಟ್ಟು ಅವರನ್ನು ದುಡಿಸಿಕೊಳ್ಳುತ್ತಿದ್ದೇವೆ. ಅಂಗನವಾಡಿ ಕಾರ್ಯಕರ್ತರಿಗೆ ಏನು ಸೌಲಭ್ಯ ಕೊಡುವುದಾಗಿ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದ್ದೀರೊ ಅದನ್ನು ಆಯವ್ಯಯದಲ್ಲಿ ತರಲಿಲ್ಲ. ಹಾಸ್ಟೆಲ್‌ಗಳಲ್ಲಿ ಕೇವಲ 125 ರೂಪಾಯಿ ಮತ್ತು 75 ರೂಪಾಯಿಗಳಿಗೆ ದುಡಿಯುತ್ತಿರುವ ಬಾಣಸಿಗರ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರೊ ಅದರ ಬಗ್ಗೆ

ಗಮನಹರಿಸಿಲ್ಲ. ವಯೋವೃದ್ಧರ ವೇತನವನ್ನು 100 ರೂಪಾಯಿಗಳಿಂದ 125 ರೂಪಾಯಿಗಳಿಗೆ ಹೆಚ್ಚು ಮಾಡುವುದಾಗಿ ಹೇಳಿದ್ದಿರಿ ಆದರೆ ಅದರ ಬಗ್ಗೆ ಬಜೆಟ್‌ನಲ್ಲಿ ತೋರಿಸಿಲ್ಲ. ತಮ್ಮ ಚುನಾವಣಾ ಪ್ರಣಾಳಿಕೆಗೆ ಮತ್ತು ಆಯವ್ಯಯವನ್ನು ಹೋಲಿಸಿ ನೋಡಿದಾಗ ಜನರನ್ನು ವಂಚಿಸಿ ಓಟನ್ನು ತೆಗೆದುಕೊಳ್ಳುವ ಕೆಲಸ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಶ್ರೀನಿವಾಸಗೌಡರೆ, ತಾವು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ವಿವರವಾಗಿ ಓದಿದ್ದಕ್ಕೆ ತುಂಬಾ ಸಂತೋಷ. ನಾವೇ ಅದರ ಬಗ್ಗೆ ಇಷ್ಟೊಂದು ವಿವರವಾಗಿ ಓದಿಲ್ಲ. ಆದರೆ ಈ ಪ್ರಣಾಳಿಕೆ ಐದು ವರ್ಷದವರೆಗೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಆರೇ ತಿಂಗಳಲ್ಲಿ ಇದನ್ನು ಮಾಡುತ್ತೇವೆ ಎಂಬುದಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ತಾವೇನು ಕೊರತೆ ಬಜೆಟನ್ನು ಮಂಡನೆ ಮಾಡಿದ್ದೀರಿ ಅದರ ಬಗ್ಗೆ ಮಿಶ್ರ ಪ್ರತಿಕ್ರಿಯೆಯನ್ನು ಹೇಳಬೇಕಾಗುತ್ತದೆ. "ಸರ್ವರಿಗೆ ಸಮ ಪಾಲು" "ಸರ್ವರಿಗೆ ಸಮಬಾಳು" ಎಂಬ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ. ಇದನ್ನು ನಾವು ಸಹ ಇಟ್ಟುಕೊಂಡಿದ್ದೆವು. ನಮ್ಮದನ್ನು ತಾವು ಕಾಪಿ ಹೊಡೆದಿದ್ದೀರಿ.

ಶ್ರೀ ಸಿ. ಬೈರೇಗೌಡ : ನಾವೇ ಪ್ರಣಾಳಿಕೆಯನ್ನು ಓದಿಲ್ಲವೆಂದು ಮಾನ್ಯ ಚಂದ್ರೇಗೌಡರು ಹೇಳಿದರು. ಅದಕ್ಕೆ ಧನ್ಯವಾದಗಳು. ಆದರೆ ಇವರು ಆ ಪ್ರಣಾಳಿಕೆಯನ್ನು ಜನರ ಮುಂದಿಟ್ಟು ಮತವನ್ನು ಪಡೆದು ಬಂದಿದ್ದಾರೆ. ಆ ಪ್ರಣಾಳಿಕೆಯಲ್ಲೇನಿದೆ ಎಂಬುದು ಇವರಿಗೇ ಗೊತ್ತಿಲ್ಲ.

ಒಬ್ಬ ಸದಸ್ಯರು : ನಾವು ಓದಿದ್ದೇವೆ, ನೀವು ಅದನ್ನು ಓದಿದರೆ ಏನಾದರೂ ತಮ್ಮ ಮನಸ್ಸು ಪರಿವರ್ತನೆಯಾಗುತ್ತದೆಯೇ ಎಂಬುದು ಚಂದ್ರೇಗೌಡರ ಅಭಿಪ್ರಾಯವಾಗಿದೆ.

ಶ್ರೀ ಕೆ. ಶ್ರೀನಿವಾಸಗೌಡ : ನಮ್ಮದು ರೈತರಿಂದ, ರೈತರಿಗಾಗಿ, ರೈತರಿಂದ ನಡೆಸುತ್ತಿರುವ ಸರ್ಕಾರ ಎಂದು ಹೇಳಿದ್ದೀರಿ. ಕೆಲವು ಘೋಷಣೆಗಳನ್ನು ನೋಡಿದರೆ ನಿಜವಾಗಿಯೂ ಸಂತೋಷವಾಗುತ್ತದೆ. ಒಬ್ಬ ರೈತನ ಮಗನಾಗಿ ಮುಖ್ಯಮಂತ್ರಿಯಾಗಿದ್ದೀರಿ. ಆದ್ದರಿಂದ ರೈತನಿಗೆ ಸಲ್ಲಬೇಕಾದ ಕೆಲಸವನ್ನು ಮಾಡಲೇಬೇಕಾಗುತ್ತದೆ. ಆದರೂ ರೈತರಿಗೆ ಆಗಲೇ ಬೇಕಾಗಿರುವ ಕೆಲವು ವಿಚಾರಗಳಾದ ತೋಟಗಾರಿಕೆ, ಮೀನುಗಾರಿಕೆ, ಪುಷ್ಪ, ಕೃಷಿ ಪಶುಸಂಗೋಪನೆಗೆ ಚಾಲನೆ ನೀಡಬೇಕಾಗಿದೆಯೆಂದು ಹೇಳಿದ್ದೀರಿ. ಇವುಗಳಿಗೆ ಇಂತಿಂಥ ಹಂತದಲ್ಲಿ ಇಂತಿಷ್ಟು ಹಣವನ್ನು ಇಟ್ಟಿದ್ದೇವೆ, ಇದರಿಂದ ಇಷ್ಟು ಪ್ರಯೋಜನವಾಗುತ್ತದೆ ಎಂಬುದರ ಬಗ್ಗೆ ಬಜೆಟ್‌ನಲ್ಲಿ ಹೇಳಿಲ್ಲ. ಇವತ್ತು ಹೈನುಗಾರಿಕೆ ಬಗ್ಗೆ ಹೇಳುವುದಾದರೆ, ಕೋಲಾರ ಜಿಲ್ಲೆಯಲ್ಲಿ 5 ಲಕ್ಷದ 25 ಸಾವಿರ ಲೀಟರ್ ಹಾಲನ್ನು ಉತ್ಪಾದನೆ ಮಾಡುತ್ತಿದ್ದರು ಸಹಕಾರಿ ಸಂಘಗಳನ್ನು ತೆಗೆಯುವುದಕ್ಕೆ ಹೋದರೆ ಅಲ್ಲಿರುವ ಯೂನಿಯನ್‌ನವರು ಬೇಡ ಎಂದು ಹೇಳುತ್ತಾರೆ. ಕಾರಣ ಏನೆಂದರೆ ಉತ್ಪಾದನೆಯಾಗುವ ಹಾಲನ್ನು ಎಲ್ಲಿಗಾದರೂ ರಫ್ತು ಮಾಡಿ ಹಾಲನ್ನು ಶೇಖರಣೆ ಮಾಡುವ ಪರಿಸ್ಥಿತಿ ನಮ್ಮಲ್ಲಿ ಇಲ್ಲ. ಇದರ ಬಗ್ಗೆ ಒತ್ತನ್ನು ಕೊಟ್ಟಿಲ್ಲ. ಕೋಲಾರದಲ್ಲಿ ಪೀಕ್ ಸೀಜನ್‌ನಲ್ಲಿ ಹೆಚ್ಚಾಗಿ ಹಾಲು

ಉತ್ಪಾದನೆಯಾದಾಗ ಒಂದು ದಿನದ ಹಾಲನ್ನು ತೆಗೆದುಕೊಳ್ಳುವುದಿಲ್ಲ. ರೈತರ ಪರ, ರೈತರ ಸರ್ಕಾರವೆಂದು ಹೇಳುವ ತಾವು ಈ ದಿಕ್ಕಿನಲ್ಲಿ ಯೋಚನೆ ಮಾಡಬೇಕಾಗಿತ್ತು. ಕೆಲವು ಹಾಲು ಒಕ್ಕೂಟಗಳಲ್ಲಿ ಹಾಲಿನ ಬೆಲೆಯನ್ನು ಕಡಿಮೆ ಮಾಡಿದ್ದಾರೆ. ಇಲ್ಲೂ ರೈತರಿಗೆ ಮೂಲಭೂತವಾಗಿ ಏನು ಸೌಲಭ್ಯವನ್ನು ಕೊಡಬೇಕೊ ಅದನ್ನು ಕೊಡುವ ಬಗ್ಗೆ ಗಮನಹರಿಸಬೇಕು. ಹಳ್ಳಿಗಾಡಾಗಿರಬಹುದು ಪಟ್ಟಣಗಳಾಗಿರಬಹುದು ಜನರು ಮೂಲಭೂತ ಸೌಲಭ್ಯದಿಂದ ಬಹಳ ವಂಚಿತರಾಗಿದ್ದಾರೆ. ನಿಮ್ಮ ಸರ್ಕಾರ ಐದು ವರ್ಷ ಇತ್ತು, ಆಗ ತಾವು ಏನು ಮಾಡಿದ್ದೀರಿ ಎಂದು ತಾವು ಹೇಳಬಹುದು. ಆಗ ನಾವು ಕೆಲಸ ಮಾಡಲ್ಲವೆಂದು ಜನರು ನಮ್ಮನ್ನು ಇಲ್ಲಿ ಕೂರಿಸಿದ್ದಾರೆ, ಅದನ್ನು ನಾವು ಇಲ್ಲ ಎಂದು ಹೇಳಲಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಸರ್ಕಾರ ಮಾಡಿದ್ದ ಕೆಲಸಗಳ ಬಗ್ಗೆ ಅವರು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಜೊತೆಗೆ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಬಜೆಟ್‌ನ ಕೆಲವು ಭಾಗಗಳಂತೂ ನಮ್ಮದೇ ಬಜೆಟ್ ಎಂದು ಹೇಳಬೇಕಾಗುತ್ತದೆ. ಅದನ್ನು ಸಹ ಮುಕ್ತಕಂಠದಿಂದ ಮುಖ್ಯಮಂತ್ರಿಗಳು ಹೊಗಳಿದ್ದಾರೆ. ಇದರ ಬಗ್ಗೆ ಸಹ ತಾವು ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಹೊಸ ಹೂಡಿಕೆಗಳ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ಏನೇನು ಹೊಸ ಹೂಡಿಕೆಗಳನ್ನು ಮಾಡಿದ್ದಾರೆ, ಹನ್ನೆರಡು ಸಾವಿರ ಕೋಟಿ ರೂಪಾಯಿಗಳನ್ನು ಐದು ವರ್ಷಗಳಲ್ಲಿ ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಇದರ ಬಗ್ಗೆ ಆಗೊಮ್ಮೆ ಈಗೊಮ್ಮೆ ಮಾತುಕತೆಯಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಬಹಳ ಅನುಭವಿ ರಾಜಕಾರಣಿಗಳು. ಈ ಬಜೆಟನ್ನು ತಯಾರು ಮಾಡಿದಂಥ ಗೋಪಾಲ ರೆಡ್ಡಿಯವರನ್ನು ಇಲ್ಲಿ ಪ್ರಶಂಸೆ ಮಾಡಿದ್ದೀರಿ. ಆದ್ದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ. ಈ ಹಿಂದಿನ ಐದು ವರ್ಷದ ಬಜೆಟನ್ನು ಗೋಪಾರಲೆಡ್ಡಿಯವರೇ ಬರೆದದ್ದು. ಆಗ ಬರೆದವರು ಮಾನ್ಯ ಗೋಪಾಲರೆಡ್ಡಿಯವರೆ, ಈಗ ಬರೆದವರು ಗೋಪಾಲರೆಡ್ಡಿಯವರೆ. ಆದ್ದರಿಂದ ಆಗೊಮ್ಮೆ, ಈಗೊಮ್ಮೆ ಎಂದು ಹೇಳಿದರೆ ಹೇಗೆ. ರಾಜ್ಯದ ಅಭಿವೃದ್ಧಿಯ ಬಗ್ಗೆ ಯಾವ್ಯಾವ ದಿಕ್ಕಿನಲ್ಲಿ ಹೊಸದಾಗಿ ಹೂಡಿಕೆಗಳು ಆಗಬೇಕಾಗಿತ್ತೋ ಅದು ಆಗಿಲ್ಲವೆಂದು ಹೇಳಬಯಸುತ್ತೇನೆ. 'ಸ್ತ್ರೀ ಶಕ್ತಿ' ಕಾರ್ಯಕ್ರಮದ ಬಗ್ಗೆ ಹೇಳಿದ್ದೀರಿ, ಸಂತೋಷದ ಸಂಗತಿ. ಇವತ್ತು ಮಹಿಳೆಯರಿಗೆ ಶಕ್ತಿಯನ್ನು ಕೊಡಬೇಕಾಗುತ್ತದೆ. ಆಂಧ್ರ ರಾಜ್ಯದಲ್ಲಿ ಇವೆಲ್ಲವನ್ನೂ ಈಗಾಗಲೇ ಮಾಡಿದ್ದಾರೆ. ಹೆಣ್ಣು ಮಕ್ಕಳಿಗೆ ವಸತಿ ಯೋಜನೆಯಲ್ಲಿ, ಅಂಬೇಡ್ಕರ್ ಯೋಜನೆಯಲ್ಲಿ ಮನೆಗಳನ್ನು ನೀಡಲಾಗುವುದು ಎಂದು ಹೇಳಿದ್ದಿರಿ. ಇದು ಒಳ್ಳೆಯ ವಿಚಾರವಾಗಿದೆ. ಹೆಣ್ಣು ಮಕ್ಕಳಿಗೆ ಪಿ.ಯು.ಸಿ. ವರೆಗೆ ಉಚಿತ ಶಿಕ್ಷಣವೆಂದು ಹೇಳಿದ್ದೀರಿ. ಆದರೆ ಇದನ್ನು ಕಾಲೇಜು ಮಟ್ಟದವರೆಗೆ ವಿಸ್ತರಣೆ ಮಾಡಬೇಕು. ಬಹುಪಾಲು ಅನುದಾನಿತ ಸಂಸ್ಥೆಗಳು ಸದೃಢವಾಗಿದೆ. ತಮ್ಮ ಸ್ವಂತ ಸಂಪನ್ಮೂಲವನ್ನು ಸಂಗ್ರಹ ಮಾಡುವ ಶಕ್ತಿಯನ್ನು ಹೊಂದಿದೆಯೆಂದು ಹೇಳುತ್ತಿದ್ದೀರಿ. ಶಿಕ್ಷಣಕ್ಕೆ ನೀಡುವ ಅನುದಾನದಲ್ಲಿ ಶೇಕಡ 15ರಷ್ಟು ಕಡಿತ ಮಾಡುವುದಾಗಿ ಹೇಳಿದ್ದೀರಿ. ಒಂದು ಕಡೆ ಶಿಕ್ಷಣಕ್ಕೆ ಒತ್ತು ಕೊಡಬೇಕು

ಎಂದು ಹೇಳುತ್ತೇವೆ ಮತ್ತೊಂದು ಕಡೆ ಅದಕ್ಕೆ ಒದಗಿಸುವ ಹಣವನ್ನು ಕಡಿಮೆ ಮಾಡುವ ಬಗ್ಗೆ ಹೇಳುತ್ತೀರಿ. ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಬೇಕು ಎಂದು ಹೇಳಬಯಸುತ್ತೇನೆ. 'ಸುರಕ್ಷ ಹೆರಿಗೆ' ಬಗ್ಗೆ ನಮೂದು ಮಾಡಿದ್ದೀರಿ. ನಾವೆಲ್ಲ ಹಳ್ಳಿಗಳಲ್ಲಿ ಹುಟ್ಟಿದ್ದು. ಪಟ್ಟಣದಲ್ಲಿ ನಾವ್ಯಾರು ಹುಟ್ಟಲಿಲ್ಲ. ನಮ್ಮ ತಾಯಿಯರಿಗೆ ಆ ರೀತಿ ಕಿಟ್ಟನ್ನು ಯಾರು ಕೊಟ್ಟಿಲ್ಲ. ಆದರೆ ಎಷ್ಟು ಜನರು ಸತ್ತು ಹೋಗಿದ್ದಾರೆ ಎಂಬ ಅಂಕಿಅಂಶಗಳು ಇಲ್ಲ. ಋತು ಸ್ರಾವ ಎಂದು ಹೇಳಿದ್ದೀರಿ. ದಯಮಾಡಿ ಮಹಿಳೆಯರು ಕ್ಷಮಿಸಬೇಕು. ಎಲ್ಲಾ ಹೆಂಗಸರಿಗೂ ಇದು ಆಗುತ್ತದೆ. ಹಳ್ಳಿಗಾಡು ಪಟ್ಟಣದವರೆಲ್ಲರಿಗೂ ಇದು ಆಗುತ್ತದೆ. ಅದಕ್ಕೆ ಕಿಟ್ಟನ್ನು ಕೊಡುವಂಥ ಸೌಲಭ್ಯವನ್ನು ಮಾಡಿದ್ದೀರಿ. ಇದು ಒಳ್ಳೆಯದ್ದೆ. ಆದರೆ ತಾವು ಇದನ್ನು ಕೊಡುವುದರಿಂದ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಪಿ.ಹೆಚ್.ಇ, ಪಿ.ಹೆಚ್.ಯು ಗಳು ಮತ್ತು ಅಂಗನವಾಡಿ ಕಾರ್ಯಕರ್ತರ ಮೂಲಕ ಈ ಕಿಟ್ಟನ್ನೇನು ಕೊಡಲು ಹೊರಟಿದ್ದೀರಿ ಇದರಿಂದ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ. ಏಕೆಂದರೆ ಐದು ವರ್ಷಗಳ ಹಿಂದೆ ಇದ್ದ ತಮ್ಮ ಸರ್ಕಾರ ಎಲ್ಲಾ ಪಿ.ಹೆಚ್.ಸಿ. ಪಿ.ಹೆಚ್.ಯು. ಗಳಿಗೆ ಹತ್ತಿಯನ್ನು....

ಶ್ರೀಮತಿ ರಾಣಿ ಸತೀಶ್ : ಮಾನ್ಯ ಸದಸ್ಯರು ಹೇಳಿದಂತೆ ಇದರಲ್ಲಿ ಭ್ರಷ್ಟಾಚಾರ ಎಲ್ಲಿ ಆಗುತ್ತದೆ ಎಂದು ನನಗೆ ಅರ್ಥವಾಗಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ನಾನು ಈಗ ಅದನ್ನೇ ಹೇಳುವುದಕ್ಕೆ ಹೊರಟಿದ್ದೆ. ಹಿಂದೆ ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಪಿ.ಹೆಚ್.ಸಿ. ಮತ್ತು ಪಿ.ಹೆಚ್.ಯು.ಗಳಿಗಾಗಿ ಔಷಧಿಗಳನ್ನು ಖರೀದಿ ಮಾಡಲಾಯಿತು. ಗಾಡಿಗಟ್ಟಲೆ ಹತ್ತಿ ಮತ್ತು ಲೀವ್-52 ಮಾತ್ರೆಗಳು ಆಗ ಖರೀದಿಸಲಾಗಿತ್ತು. ನಮ್ಮ ಊರಿನ ಪಕ್ಕದಲ್ಲೇ ಇದ್ದ ಪಿ.ಹೆಚ್.ಸಿ. ಯೊಂದಕ್ಕೆ ಆಗ ನಾನು ಭೇಟಿ ಕೊಟ್ಟು ಅಲ್ಲಿ ಔಷಧಿಗಳು ಏನಿವೆ ಎಂದು ಕೇಳಿದಾಗ, ಅಲ್ಲಿದ್ದವರು ಇಲ್ಲಿ ಸುಮಾರು ಒಂದೂವರೆ ಗಾಡಿ ಹತ್ತಿ ಇದೆ, ಲೀವ್-52 ಮಾತ್ರೆಗಳಿವೆ ಎಂದು ಹೇಳಿದರು. ಖರೀದಿ ಮಾಡಿದ್ದು ಸರಿಯಾಗಿ ವಿತರಣೆಯಾದರೆ ಮಾತ್ರ ಅದು ನಿಜವಾಗಿಯೂ ಉಪಯುಕ್ತವಾಗುತ್ತದೆ. ವಿತರಣೆ ಮಾಡುವುದರ ಮೇಲೆ ಈ ಯೋಜನೆ ಯಶಸ್ಸು ಅವಲಂಬಿಸಿದೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮಂತ್ರಿಗಳು ಇದರಲ್ಲೇನು ಭ್ರಷ್ಟಾಚಾರ ನಡೆಯಲು ಸಾಧ್ಯವೆಂದು ಕೇಳುತ್ತಿದ್ದಾರೆ. ಹೆರಿಗೆ ಭತ್ಯೆ ಕೊಡುವ ಯೋಜನೆ ಸರ್ಕಾರದಲ್ಲಿದೆ. ಹಿಂದೆ ನೀವೂ ಕೂಡ ಅಧಿಕಾರದಲ್ಲಿದ್ದೀರಿ. ಆ ಹೆರಿಗೆ ಭತ್ಯೆ ಕೊಡುವುದರಲ್ಲಿ ಎಷ್ಟು ಭ್ರಷ್ಟಾಚಾರದ ಪ್ರಕರಣಗಳು ವರದಿಯಾಗಿವೆ? ಆ ದಿಸೆಯಲ್ಲಿ ಎಷ್ಟು ಡಾಕ್ಟರನ್ನು ಸಸ್ಪೆಂಡ್ ಮಾಡಲಾಗಿದೆ ಎಂಬ ಮಾಹಿತಿಯನ್ನು ಮಾನ್ಯ ಮಂತ್ರಿಗಳು ಒಮ್ಮೆ ತರಿಸಿಕೊಂಡು ನೋಡಿದರೆ ಒಳ್ಳೆಯದು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯನ್ನು ಇವತ್ತು ಅನುಷ್ಠಾನಗೊಳಿಸಿ ಒಂದು ಒಳ್ಳೆಯ ಕೆಲಸವನ್ನು ಮಾಡಲಾಗಿದೆ. ಈ ಯೋಜನೆಯಡಿ ಕನಿಷ್ಟ 100 ಸೆಕೆಂಡರಿ ಆಸ್ಪತ್ರೆಗಳನ್ನು ವರ್ಷಾಂತ್ಯದ ವೇಳೆಗೆ ಸಜ್ಜುಗೊಳಿಸಲಾಗುವುದು

ಎಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಈ ಯೋಜನೆಯಡಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಹಿಂದೆ ಒಳ್ಳೆಯ ಕೆಲಸವನ್ನು ಮಾಡಿದ್ದರೂ ಸಹಿತ ನಾನು ಒಂದು ಗಂಡಾಂತರವನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೋಲಾರದಲ್ಲಿ ಸರ್ಕಾರವು ಸುಮಾರು 5 ಕೋಟಿ ರೂಪಾಯಿಗಳ ಬಂಡವಾಳ ಹೂಡಿ 400 ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಕಟ್ಟಿಸಿದೆ. ಎಸ್.ಎನ್.ಆರ್. ಆಸ್ಪತ್ರೆ ಎಂಬ ಹೆಸರಿನ ಈ ಆಸ್ಪತ್ರೆಯನ್ನು ನಾವು ಚಿಕ್ಕ ಹುಡುಗರಿದ್ದಾಗ ಧರ್ಮಾಸ್ಪತ್ರೆ ಎಂದೇ ಕರೆಯುತ್ತಿದ್ದರು. ಇಷ್ಟೊಂದು ಹಣ ಬಂಡವಾಳ ಹೂಡಿ ಸರ್ಕಾರ ಕಟ್ಟಿಸಿದ ಆಸ್ಪತ್ರೆಯನ್ನು ಇವತ್ತು ದೇವರಾಜ್ ಅರಸ್ ಮೆಡಿಕಲ್ ಕಾಲೇಜಿಗೆ ಉಚಿತವಾಗಿ ವಹಿಸಿಕೊಡಲಿಕ್ಕೆ ಸರ್ಕಾರಿ ಆದೇಶ ಹೊರಡಿಸುವುದರ ಮೂಲಕ ಖಾಸಗೀಕರಣ ಮಾಡಲಾಗಿದೆ. ಒಂದು ಅರ್ಥದಲ್ಲಿ ಖಾಸಗಿಯವರಿಗೆ ದಾನ ಮಾಡಲಾಗಿದೆ. ಈ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ. ಒಂದು ಕಡೆಯಲ್ಲಿ ನಾವು ಇಷ್ಟೊಂದು ಹಣ ಬಂಡವಾಳ ಹೂಡುತ್ತಿದ್ದೇವೆ, ಮತ್ತೊಂದು ಕಡೆಯಲ್ಲಿ ಅದನ್ನು ಮುಫತ್ತಾಗಿ ಖಾಸಗೀಕರಣ ಮಾಡುತ್ತಿದ್ದೇವೆ. ಅಲ್ಲಿ ಡಾಕ್ಟರ್‌ಗಳ ಸಂಖ್ಯೆ ಕಡಿಮೆ ಇದೆ, ಆದ್ದರಿಂದ ಅವರಿಗೆ ವಹಿಸಿಕೊಡಲಾಗುತ್ತಿದೆ ಎಂದು ಅಲ್ಲಿ ಕೆಲವರು ಹೇಳುತ್ತಿದ್ದರು. ಅಲ್ಲಿ ಡಾಕ್ಟರ್‌ಗಳ ಸಂಖ್ಯೆ ಕಡಿಮೆ ಇದ್ದರೆ ಅಲ್ಲಿಗೆ ಹೆಚ್ಚಿನ ಡಾಕ್ಟರರನ್ನು ನೇಮಿಸುವುದು ಸರ್ಕಾರದ ಕರ್ತವ್ಯವಾಗಿದೆ. ನನಗೆ ಮಾನ್ಯ ಜಾಲಪ್ಪನವರ ಮೇಲೆ ಬಹಳ ಪ್ರೀತಿ, ವಿಶ್ವಾಸ ಇದೆ. ಆದರೆ ಇಂತಹ ವಿಷಯಗಳಲ್ಲಿ ನನ್ನದೇ ಆದ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸುತ್ತೇನೆ. ಇವತ್ತು ಒಬ್ಬ ಪವರ್‌ಫುಲ್ ಎಂ.ಪಿ. ಹೇಳಿದಾಕ್ಷಣ ಎಸ್.ಎನ್.ಆರ್. ಆಸ್ಪತ್ರೆಯನ್ನು ಖಾಸಗಿಯವರಿಗೆ ವಹಿಸಿಕೊಟ್ಟಿರುತ್ತೀರಿ. ನಾಳೆ ಮತ್ತೊಬ್ಬ ಎಂ.ಪಿ. ಹೇಳಿದರೆ ನೀವು ವಿಧಾನಸೌಧವನ್ನೂ ಕೂಡ ಬೇರೆಯವರಿಗೆ ಕೊಟ್ಟು ಬಿಡುತ್ತೀರಾ? ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಜಾಲಪ್ಪನವರು ನಮ್ಮ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾಗ ಏನೇ ಒತ್ತಡ ಹೇರಿದ್ದರೂ ನಾವು ಆಸ್ಪತ್ರೆಯನ್ನು ಕಾಲೇಜಿಗೆ ವಹಿಸಿಕೊಟ್ಟಿರಲಿಲ್ಲ. ಆದರೆ ನಿಮ್ಮ ಸರ್ಕಾರ ಬಂದಾಕ್ಷಣ ಅವರಿಗೆ ಕ್ಲಿನಿಕಲ್ ಫೆಸಲಿಟೀಗಳನ್ನೆಲ್ಲಾ ಮಾಡಿಕೊಟ್ಟಿದ್ದೀರಿ. ಅಲ್ಲಿ ಈಗ ಇಬ್ಬರೇ ಸ್ಟಾಫ್ ಇದ್ದಾರೆ. ಒಬ್ಬರು ಔಟ್-ಪೇಷೆಂಟ್ ವಿಭಾಗವನ್ನು ನೋಡಿಕೊಂಡರೆ ಮತ್ತೊಬ್ಬರು ಪೋಸ್ಟ್ ಮಾರ್ಟಂ ವಿಭಾಗವನ್ನು ಅಲ್ಲಿ ನೋಡಿಕೊಳ್ಳುತ್ತಿದ್ದಾರೆ. ಇಷ್ಟಕ್ಕೆ ಮಾತ್ರ ಅಲ್ಲಿ ಸಿಬ್ಬಂದಿ ಸೀಮಿತವಾಗಿದೆ. ನಾನು ಈ ಮಾತನ್ನು ಬಹಳ ನೊಂದು ಹೇಳುತ್ತಿದ್ದೇನೆ. ಹೆಲ್ತ್ ಸಿಸ್ಟಮ್ ಅಡಿಯಲ್ಲಿ 5 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿ ಸುಸಜ್ಜಿತಗೊಳಿಸಿದಂತಹ ಆಸ್ಪತ್ರೆಯನ್ನು ಖಾಸಗೀಕರಣಗೊಳಿಸುವುದು ತಪ್ಪು, ದಯವಿಟ್ಟು ಈ ಪ್ರಕ್ರಿಯೆ ನಿಲ್ಲಿಸಬೇಕೆಂದು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸದಸ್ಯರು ಆಸ್ಪತ್ರೆಯನ್ನು ದಾನ ಮಾಡಿ ಬಿಟ್ಟಿದ್ದಾರೆ ಎಂದು ಒಬ್ಬ ಜವಾಬ್ದಾರಿಯುತ ವ್ಯಕ್ತಿಗಳ ಮೇಲೆ ಹೇಳುತ್ತಿದ್ದೀರಿ. ಆದರೆ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುವಂತಹ ಹಂತದಲ್ಲಿ ಕಾನೂನು ಏನು ಇರುತ್ತದೆ ಎಂಬುದನ್ನೂ ಸಹಾ ತಾವು ಹೇಳಬೇಕಲ್ಲವೇ? ಸಾರ್ವಜನಿಕ ಆಸ್ಪತ್ರೆಗಳನ್ನು ಉಪಯೋಗಿಸಬಹುದೇ? ಅಂತಹ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುವುಂತಹ ಹಂತದಲ್ಲಿ ಇದರ ಉಪಯೋಗವನ್ನು

ಅವರು ಪಡೆದುಕೊಳ್ಳಬಹುದೇ? ಎಂಬುದರ ಬಗ್ಗೆಯೂ ಕೂಡ ತಾವು ಹೇಳಬೇಕಲ್ಲವೇ? ಸರ್ಕಾರದ ಯಾವುದಾದರೂ ಆಸ್ತಿ ದಾನ ಮಾಡಲಿಕ್ಕೆ ಸಾಧ್ಯ ಇದೆಯೇ?

ಶ್ರೀ ಕೆ. ಶ್ರೀನಿವಾಸ ಗೌಡ : ಆ ಕಾಲೇಜು ಸ್ಥಾಪನೆಯಾಗಿ 15 ವರ್ಷಗಳಾಗಿದೆ, ಅವರದೇ ಆದಂತಹ ಆಸ್ಪತ್ರೆಯೂ ಸಹಾ ಇದೆ. ಅಂತಹ ಕಾಲೇಜಿಗೆ ನಮ್ಮ ಸರ್ಕಾರಿ ಆಸ್ಪತ್ರೆಯನ್ನು ಕೊಡುವುದರ ಅವಶ್ಯಕತೆಯಾದರೂ ಏನಿತ್ತು? ಅರವತ್ತರ ದಶಕದಲ್ಲಿ 3-4 ಕಾಲೇಜುಗಳಿಗೆ ಸರ್ಕಾರಿ ಆಸ್ಪತ್ರೆ ಕ್ಲೀನಿಕಲ್ ಫೆಸಿಲಿಟಿ ಕೊಟ್ಟಿದ್ದರು. 1998ರ ನಂತರ ಎಲ್ಲಾ ಖಾಸಗಿ ಕಾಲೇಜುಗಳಿಗೆ ಅವರದೇ ಆದಂತಹ ಬೆಡೆಡ್ ಆಸ್ಪತ್ರೆಗಳಿರಬೇಕೆಂಬ ಸರ್ಕಾರಿ ಆದೇಶ ಇದೆ. ಆ ಸರ್ಕಾರಿ ಆದೇಶ ನನ್ನ ಬಳಿ ಇದೆ, ಆದರೆ ಅದು ಈಗ ನನಗೆ ಸಿಗುತ್ತಿಲ್ಲ. ಇನ್ನು ಕೇಂದ್ರ ಸರ್ಕಾರವು ರೂಪಿಸಿರುವ ರಾಷ್ಟ್ರೀಯ ಕೃಷಿ ವಿಮೆ ಯೋಜನೆಯಲ್ಲಿ ರಾಜ್ಯ ಸರ್ಕಾರವೂ ಸಹಾ 100 ಕೋಟಿ ರೂಪಾಯಿಗಳನ್ನು ತೊಡಗಿಸುವುದರ ಮೂಲಕ ಪಾಲ್ಗೊಳ್ಳುತ್ತಿರುವುದು ಸಂತೋಷದ ವಿಷಯವಾಗಿದೆ. ಇದು ಬಹಳ ಒಳ್ಳೆಯ ಕೆಲಸವಾಗಿದೆ. ಸಂಕಷ್ಟದಲ್ಲಿರುವ ರಾಜ್ಯದ ರೈತರಿಗೆ ಈ ರೀತಿಯ ವಿಮೆ ಯೋಜನೆಯ ಅವಶ್ಯಕತೆ ಇತ್ತು. ಅದನ್ನು ಸರ್ಕಾರ ಮಾಡಿರುವುದು ಶ್ಲಾಘನೀಯ ಸಂಗತಿಯಾಗಿದೆ. ಎಲ್ಲಾ ರೀತಿಯ ಬೆಳೆಗಳಿಗೂ ಕೂಡ ಈ ವಿಮಾ ಯೋಜನೆಯನ್ನು ವಿಸ್ತರಿಸಬೇಕೆಂದು ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ಸರ್ಕಾರಕ್ಕೆ ಆಗ್ರಹಿಸುತ್ತೇನೆ. ಶೈತ್ಯಾಗಾರಗಳಿಗೆ ಕೈಗಾರಿಕಾ ದರದಲ್ಲಿ ವಿದ್ಯುತ್ ಶುಲ್ಕ ನಿಗದಿಗೊಳಿಸುವುದಲ್ಲದೆ ಕಿಲೋವ್ಯಾಟಿಗೆ ಒಂದು ರೂಪಾಯಿಗಳ ಸಹಾಯಧನವನ್ನು ಸರ್ಕಾರ ನೀಡಲಿದೆ ಎಂದು ಬಜೆಟ್ ಭಾಷಣದಲ್ಲಿ ತಿಳಿಸಲಾಗಿದೆ. ನಾನು ಆಗಲೇ ಹೇಳಿದಂತೆ, ಮಾನ್ಯ ಸಭಾ ನಾಯಕರು ಸ್ಪೀಕರ್ ಆಗಿದ್ದಾಗ ನಮ್ಮ ಕೋಲಾರದಲ್ಲಿ ಎರಡೂವರೆ ಟನ್ ಸಾಮರ್ಥ್ಯದ ಶೈತ್ಯಾಗಾರ ನಿರ್ಮಿಸಲು ಹತ್ತು ವರ್ಷಗಳ ಹಿಂದೆಯೇ ಶಂಕು ಸ್ಥಾಪನೆ ಮಾಡಲಾಗಿತ್ತು. ಇವತ್ತು ಅದು ಯಾವುದೇ ಲಾಭವಿಲ್ಲದೆ ಅಲ್ಲಿ ನಡೆಯುತ್ತಿದೆ. ನಮ್ಮ ಮಹಾಮಂಡಲದ ವಿತಿಯಿಂದ ಇಲ್ಲೊಂದು ಮತ್ತು ಹಾಸನದಲ್ಲೊಂದು ಶೈತಾಗಾರ ಸ್ಥಾಪಿಸಿದ್ದೆವು. ಆದರಿಂದ ಯಾವುದೇ ಲಾಭ ಕೂಡ ಬರುತ್ತಿಲ್ಲ. ಆದರೆ ಈ ರೀತಿ ಸಬ್ಸಿಡಿ ಕೊಡುವುದರ ಮೂಲಕ ನಾವು ರೈತರಿಗೆ ಸಹಾಯ ಮಾಡಿದಂತಾಗುತ್ತದೆ. ಇಲ್ಲದಿದ್ದರೆ ರೈತರು ನಷ್ಟ ಅನುಭವಿಸಿ ಆ ಶೈತ್ಯಾಗಾರಕ್ಕೂ ಕೂಡ ಒಂದು ದಿವಸ ಬೀಗ ಹಾಕಬೇಕಾಗುತ್ತದೆ. ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದೆ. ಆದರೆ ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದ ಹಾಗೆ ಪುಕ್ಕಟೆಯಾಗಿ ವಿದ್ಯುತ್ ಅನ್ನು ಶೈತ್ಯಾಗಾರಗಳಿಗೆ ಒದಗಿಸಿದರೆ ಇನ್ನೂ ಚೆನ್ನಾಗಿ ರೈತರು ಕೆಲಸ ಮಾಡಬಹುದು ಎಂದು ನಾನು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬಂಜರು ಭೂಮಿ ಅಭಿವೃದ್ಧಿಗೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸರ್ಕಾರ ಭಾಷಣದಲ್ಲಿ ಹೇಳಿದೆ.

ಶ್ರೀ ಎಸ್.ಎಸ್. ಪಾಟೀಲ್ : ಶೈತಾಗಾರಗಳಿಗೆ ಉಚಿತವಾಗಿ ಕರೆಂಟ್ ಕೊಡದಿದ್ದರೆ ನಿಶ್ಚಿತವಾಗಿಯೂ ಕೂಡ ಅವುಗಳು ನಷ್ಟ ಅನುಭವಿಸಿ ಬಂದ್ ಆಗುತ್ತವೆ. ರೈತರಿಗೆ ಒಳ್ಳೆಯ ಕೆಲಸ ಮಾಡಬೇಕೆಂದರೆ ನೀವು ನಿಜವಾಗಿಯೂ ಪುಕ್ಕಟೆಯಾಗಿ ವಿದ್ಯುತ್ ನೀಡಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ : ಬಂಜರು ಭೂಮಿ ಅಭಿವೃದ್ಧಿಗೆ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ತೊಡಗಿಸುತ್ತಿದೆ. ಅಲ್ಲಿರುವವರೂ ಕೂಡ ರೈತರೇ. ಸರ್ಕಾರ ಅಲ್ಲಿ ಅಷ್ಟೊಂದು ಅಭಿವೃದ್ಧಿ ಮಾಡುತ್ತಿರುವುದು ನಮಗೂ ಸಂತೋಷದ ವಿಚಾರವೇ. ಇವತ್ತು ಬಯಲು ಸೀಮೆ ಪ್ರದೇಶಗಳಲ್ಲಿ ಅಂಡರ್‌ಗ್ರೌಂಡ್ ವಾಟರ್ ಬತ್ತಿ ಹೋಗಿದೆ. ಇದನ್ನು ರೀ-ಚಾರ್ಜ್ ಮಾಡುವುದಕ್ಕಾಗಿ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನೂ ಕೂಡ ಬಜೆಟ್ ಭಾಷಣದಲ್ಲಿ ಹೇಳಬೇಕಾಗಿತ್ತು. ಕೋಲಾರ ಜಿಲ್ಲೆಯಲ್ಲಿ ಒಂದು ಸಮಯದಲ್ಲಿ 18 ಅಡಿ ಆಳದಲ್ಲೇ ನೀರು ಸಿಗುತ್ತಿದ್ದುದು ಈಗ 650-700 ಅಡಿ ಆಳದವರೆಗೆ ಬಾವಿ ಕೊರೆದರೂ ಕೂಡ ನೀರು ಸಿಗುತ್ತಿಲ್ಲ. ಗುಜರಾತ್ ರಾಜ್ಯದಲ್ಲಿ ಎಲ್ಲಾ ಕೆರೆಗಳಲ್ಲಿ ರೀ-ಚಾರ್ಜ್ ಬೋರ್‌ವೆಲ್‌ಗಳನ್ನು ತೋಡಿಸಿ, ಅದಕ್ಕೆ ಫಿಲ್ಟರ್‌ಗಳನ್ನು ಹಾಕಿ ಮಳೆಗಾಲದಲ್ಲಿ ಕೆರೆಯಲ್ಲಿ ನೀರು ಬಂದಾಗ ನೀರು ಫಿಲ್ಟರ್‌ಗೆ ಹೋಗಿ, ತುಂಬಿಕೊಂಡು ರೀ-ಚಾರ್ಜ್ ಆಗುವಂತೆ ಮಾಡಿದ್ದಾರೆ. ಈ ತರಹದ ಕಾರ್ಯಕ್ರಮಗಳನ್ನು ಈ ಸರ್ಕಾರ ಹಮ್ಮಿಕೊಳ್ಳಬೇಕಾಗಿತ್ತು. ಅದನ್ನು ನೀವು ಮಾಡಿಲ್ಲ. ಗುಜರಾತ ರಾಜ್ಯದಲ್ಲಿ ಮಾಡಿದಂತೆ ಇಲ್ಲಿಯೂ ಕೂಡ ಅಂಡರ್‌ಗ್ರೌಂಡ್ ವಾಟರ್ ಅನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ರಾಜ್ಯ ಸರ್ಕಾರಿ ಒಡೆತನದಲ್ಲಿ ಒಟ್ಟು 415 ತೋಟಗಾರಿಕಾ ಕ್ಷೇತ್ರಗಳಿವೆ. ಇವತ್ತು ನಾವು ಮರಿಗೌಡರನ್ನು ನೆನಪಿಸಿಕೊಳ್ಳಬೇಕು. ಅವರು ಈಗ ನಮ್ಮ ಜೊತೆಯಲ್ಲಿ ಇಲ್ಲ. ಅವರು ಎಲ್ಲಾದರೂ ಸರ್ಕಾರಿ ಜಮೀನು ಇದ್ದರೆ ಸಾಕು, ಅವರೇ ಖುದ್ದಾಗಿ ತಹಶೀಲ್ದಾರ್ ಕಛೇರಿಗೆ ಹೋಗಿ ಓಡಾಡಿ ಆ ಜಮೀನನ್ನು ತೋಟಗಾರಿಕಾ ಕ್ಷೇತ್ರವನ್ನಾಗಿ ಮಾಡುತ್ತಿದ್ದರು. ಈಗಿರುವ ಎಲ್ಲಾ ತೋಟಗಾರಿಕಾ ಕ್ಷೇತ್ರಗಳನ್ನೂ ಕೂಡ ಮರಿಗೌಡರೇ ಅಭಿವೃದ್ಧಿ ಮಾಡಿದರು ಎಂದು ಕಾಣುತ್ತದೆ. ಅವರ ನಂತರ ಬಂದಂತಹ ಅಧಿಕಾರಿಗಳು ತಮ್ಮ ಅಧಿಕಾರ ನಡೆಸಿದರೇ ವಿನ: ತೋಟಗಾರಿಕೆ ಕ್ಷೇತ್ರ ಎಷ್ಟು ಅಭಿವೃದ್ಧಿಯಾಗಬೇಕಾಗಿತ್ತೋ ಅಷ್ಟು ಅಭಿವೃದ್ಧಿಯನ್ನು ಮಾಡಲು ಅವರಿಗೆ ಆಗಿಲ್ಲ ಎನ್ನುವಂತಹ ಅರಿವು, ಅನಿಸಿಕೆ ನನಗಿದೆ. ಇವುತ್ತು ಈ ತೋಟಗಾರಿಕಾ ಕ್ಷೇತ್ರಗಳನ್ನು ಖಾಸಗೀಕರಣ ಮಾಡಲು ಸರ್ಕಾರ ಹೊರಟಿದೆ. ನಮ್ಮ ಅಧಿಕಾರಿಗಳು ಅದನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ, ಅವರು ಅವುಗಳನ್ನು ಸರಿಯಾಗಿ ನೋಡಿಕೊಳ್ಳುವಂತೆ ಮಾಡಬೇಕು. ಸರ್ಕಾರದ ವಶದಲ್ಲೇ ಅವುಗಳನ್ನು ಇಟ್ಟುಕೊಂಡು ಯಾವ ರೀತಿಯಾಗಿ ಅಭಿವೃದ್ಧಿ ಮಾಡುತ್ತೇವೆ ಎಂಬ ಬಗ್ಗೆ ಸರ್ಕಾರ ಆಯವ್ಯಯದ ಭಾಷಣದಲ್ಲಿ ಹೇಳಬೇಕಾಗಿತ್ತು. ಬಹಳ ಕಷ್ಟಪಟ್ಟು ಬೆಳೆಸಿರುವಂತಹ 415 ತೋಟಗಾರಿಕಾ ಕ್ಷೇತ್ರಗಳಲ್ಲಿ ಕೆಲವನ್ನು ಖಾಸಗೀಕರಣ ಮಾಡುವುದರ ಮೂಲಕ ಹಾಳು ಮಾಡುವುದು ಬೇಡ ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ.

5.30 ಪಿ.ಎಂ.

ಮಾನ್ಯ ಅಧ್ಯಕ್ಷರೆ, ಇನ್ನು ಸಹಕಾರಿ ಚಟುವಟಿಕೆಗಳಲ್ಲಿ 1010 ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದಾರೆ ಇದನ್ನು ದ್ವಿಗುಣಗೊಳಿಸುತ್ತೇವೆಂದು ಹೇಳಿದ್ದಾರೆ. ಬೇರೆ ರಾಜ್ಯದ ಬಜೆಟ್‌ಗಳನ್ನು ನಾನು ನೋಡಿದ್ದೇನೆ. ಕೇವಲ ಸಹಕಾರಕ್ಕೋಸ್ಕರ ಕೇರಳ ರಾಜ್ಯದಲ್ಲಿ 35 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ನಮ್ಮ ರಾಜ್ಯದ ಬಜೆಟ್‌ನಲ್ಲಿ ಇದಕ್ಕೆ ಹಣವನ್ನೇ ಇಟ್ಟಿಲ್ಲ. ನಬಾರ್ಡ್‌ನಿಂದ ಬರುವ ಕ್ರೆಡಿಟ್ ಸಿಸ್ಟಂನಿಂದ ಹಾಗೂ ಎನ್.ಸಿ.ಡಿ.ಸಿ. ಯಿಂದ ಬರುವುದನ್ನು ಮಾತ್ರ ಇವರು

ಅಳವಡಿಸಿಕೊಂಡಿದ್ದಾರೆಯೇ ವಿನ: ನಮ್ಮ ರಾಜ್ಯದ ಪಾಲು ಎಷ್ಟು ಎಂಬುದನ್ನು ಬಜೆಟ್‌ನಲ್ಲಿ ತೋರಿಸಿಲ್ಲ. ಆದುದರಿಂದ ಇದರಲ್ಲಿ ವಿಫಲರಾಗಿದ್ದಾರೆ ಎಂದು ಹೇಳಲು ಇಚ್ಛೆಪಡುತ್ತೇನೆ. ಇನ್ನು ಎರಡು ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗುವುದೆಂದು ಹೇಳಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರ. ಎಲ್ಲಿ ನೀರಾವರಿ ಸೌಲಭ್ಯ ಕೊಡುವುದಕ್ಕೆ ಸಾಧ್ಯತೆಯಿದೆ ಅಲ್ಲಿ ಇದನ್ನು ಅಳವಡಿಸಿಕೊಳ್ಳಿ. ನೀವು ಸಣ್ಣ ನೀರಾವರಿ ಯೋಜನೆಗಳನ್ನು ಕೂಡ ತೆಗೆದುಕೊಂಡು ಕೆರೆಗಳ ಹೂಳು ಎತ್ತುವ ಕೆಲಸವನ್ನು ಮಾಡಬೇಕು. ಇದರ ಬಗ್ಗೆಯೂ ಕೂಡ ನೀವು ಇನ್ನು 5 ವರ್ಷಗಳಲ್ಲಿ 25 ಸಾವಿರ ಕೆರೆಗಳ ಹೂಳನ್ನು ಎತ್ತುವುದಾಗಿ ಹೇಳಿದ್ದೀರಿ. ಇದಕ್ಕಾಗಿ ನೀವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ತುಂಗಾ ತಿರುವಿಗೆ 15 ಟಿ.ಎಂ.ಸಿ. ನೀರನ್ನು ಬಿಡಲು ಅವಕಾಶವಿದೆ ಎಂದು ನಿಮಗೆ ತಿಳಿದಿದೆ.

ಶ್ರೀ ಸಿ. ಭೈರೇಗೌಡ : 25 ಟಿ.ಎಂ.ಸಿ. ನೀರನ್ನು ನಿಗಧಿಪಡಿಸಿ ಅದನ್ನು ಕೊಡಬೇಕೆಂದು ಸರ್ಕಾರದ ಆಜ್ಞೆ ಆಗಿದೆ.

ಶ್ರೀ ಕೆ. ಶ್ರೀನಿವಾಸಗೌಡ : 25 ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ಸರ್ಕಾರದ ಆಜ್ಞೆ ಕೂಡ ಆಗಿದೆಯೆಂದು ಭೈರೇಗೌಡರು ಹೇಳುತ್ತಿದ್ದಾರೆ. ಇದರ ಬಗ್ಗೆಯೂ ಕೂಡ ಬೇಕಾದ ಹಣವನ್ನು ಆಯವ್ಯಯದಲ್ಲಿ ಇಡಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ನಬಾರ್ಡ್ ಹಾಗೂ ಎನ್.ಸಿ.ಡಿ.ಸಿ. ಬಗ್ಗೆ ಹೇಳಬೇಕೆಂದರೆ ನಾನೂ ಕೂಡ ಎನ್.ಸಿ.ಡಿ.ಸಿ.ಯಲ್ಲಿ ನಿರ್ದೇಶಕನಾಗಿದ್ದೆ. ನಮ್ಮ ರಾಜ್ಯ ಅಭಿವೃದ್ಧಿ ಹೊಂದಿದ ರಾಜ್ಯವೆಂದು ಹೇಳಿ ನಮಗೆ ಒಂದು ಪರ್ಸೆಂಟ್ ಇಂಟರೆಸ್ಟ್ ಹೆಚ್ಚಾಗಿ ಹಾಕುತ್ತಾರೆ. ಪೂರ್ವ ರಾಜ್ಯಗಳಿಗೆ ಮಾತ್ರ ಒಂದು ಪರ್ಸೆಂಟ್ ಇಂಟರೆಸ್ಟ್ ಕಡಿಮೆ ಹಾಕುತ್ತಾರೆ. ಈ ರೀತಿಯಲ್ಲಿ ಗುಜರಾತ್, ಮಹಾರಾಷ್ಟ್ರ ಹಾಗೂ ಒರಿಸ್ಸಾದಲ್ಲಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಸಂಪರ್ಕಿಸಿ ಎಲ್ಲಾ ರಾಜ್ಯಗಳಿಗೂ ಒಂದೇ ರೀತಿಯಾದ ಬಡ್ಡಿ ವ್ಯವಸ್ಥೆಯನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ಕೊಳಚೆ ಪ್ರದೇಶಗಳು ದಿನೇ ದಿನೇ ನಮ್ಮ ರಾಜ್ಯದಲ್ಲಿ ಹೆಚ್ಚಾಗುತ್ತಿದೆ. ಇದರ ನಿರ್ಮೂಲನೆಗಾಗಿ ನೀವೇನು 24 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಇದು ಏನೇನೂ ಸಾಲದು. ಇದಕ್ಕೆ ನೀವು ಕನಿಷ್ಟವೆಂದರೂ ಅಭಿವೃದ್ಧಿ ಮಾಡುವ ದೃಷ್ಟಿಯಿಂದ 50 ಕೋಟಿ ರೂಪಾಯಿಗಳನ್ನಾದರೂ ನೀವು ಇಡಬೇಕೆಂದು ಹೇಳಬಯಸುತ್ತೇನೆ. ಇತ್ತೀಚೆಗೆ ಅಮೇರಿಕಾದ ಅಧ್ಯಕ್ಷರಾದ ಕ್ಲಿಂಟನ್‌ರವರು ಹೈದರಾಬಾದ್‌ಗೆ ಭೇಟಿ ಕೊಟ್ಟಿದ್ದರು. ಇವರು ಭೇಟಿ ಕೊಡುತ್ತಾರೆ ಎನ್ನುವ ಕಾರಣಕ್ಕೆ ಅಲ್ಲಿದ್ದ ಎಲ್ಲಾ ಭಿಕ್ಷುಕರನ್ನು ಕರ್ನಾಟಕದ ಗಡಿ ಪ್ರದೇಶಗಳಿಗೆ ಕಳುಹಿಸಿಬಿಟ್ಟಿದ್ದರು. ನಾನು ಕೋಲಾರದಲ್ಲಿ ಇವರು ಹೆಚ್ಚಿರುವುದನ್ನು ಕಂಡು ಕಾರಣ ಕೇಳಿದಾಗ ಕ್ಲಿಂಟನ್‌ರವರು ಹೈದರಾಬಾದಿಗೆ ಭೇಟಿ ಕೊಡುತ್ತಿರುವುದರಿಂದ ಅಲ್ಲಿದ್ದ ಈ ಭಿಕ್ಷುಕರನ್ನೆಲ್ಲಾ ಕೋಲಾರಕ್ಕೆ ಬಿಟ್ಟಿದ್ದಾರೆ ಎನ್ನುವ ವಿಷಯ ತಿಳಿಯಿತು. ಆದುದರಿಂದ ನೀವು ಇದಕ್ಕೂ ಕೂಡ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಹೈದರಾಬಾದಿನಿಂದ ಬಂದಿರುವ ಭಿಕ್ಷುಕರನ್ನು ಇಲ್ಲಿ ಸೆಟ್ಲ್‌ಮೆಂಟ್ ಮಾಡಬೇಕು ಎನ್ನುವುದು ನಿಮ್ಮ ಸಲಹೆಯೇ ಅಥವಾ ಅವರನ್ನು ವಾಪಸ್ಸು ಕಳುಹಿಸಬೇಕು ಎನ್ನುವುದು ನಿಮ್ಮ ಸಲಹೆಯೇ ಎಂಬುದನ್ನು ಹೇಳಿ.

ಶ್ರೀ ಕೆ. ಶ್ರೀನಿವಾಸಗೌಡ : ಅವರನ್ನು ವಾಪಸ್ಸು ಹೈದರಾಬಾದಿಗೆ ಕಳುಹಿಸಬೇಕು ಎನ್ನುವುದೇ ನನ್ನ ಸಲಹೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಡೆ ಕೋತಿಗಳ ಹಾವಳಿ ಜಾಸ್ತಿ. ಇದರ ಹಾವಳಿ ಜಾಸ್ತಿಯಾದಾಗ ಅಲ್ಲಿರುವ ಜನರೆಲ್ಲರೂ ಹಣವನ್ನು ಹಾಕಿ ಕೋತಿಗಳನ್ನು ಹಿಡಿಯಲು ವ್ಯವಸ್ಥೆ ಮಾಡಿಕೊಂಡು ಅವುಗಳನ್ನೆಲ್ಲಾ ಹಿಡಿದು ರಾತ್ರೋರಾತ್ರಿ ಟ್ರ್ಯಾಕ್ಟರ್‌ನಲ್ಲಿ ಹಾಕಿಕೊಂಡು ಐದಾರು ಕಿಲೋ ಮೀಟರ್ ದೂರದಲ್ಲಿ ಅವುಗಳನ್ನು ಬಿಟ್ಟು ಬಂದುಬಿಡುತ್ತಾರೆ. ಇನ್ನು ಸ್ವಲ್ಪದಿವಸ ಆದಮೇಲೆ ಆ ಭಾಗದ ಜನರು ಕೂಡ ಇದೇ ರೀತಿಯ ಕ್ರಮವನ್ನು ತೆಗೆದುಕೊಂಡು ಅವರೂ ಕೂಡ ಐದಾರು ಕಿಲೋಮೀಟರ್ ದೂರದಲ್ಲಿ ಕೋತಿಗಳನ್ನು ಬಿಡುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಡೆ ಕೂಡ ಸೊರಬದಿಂದ ಇದೇ ರೀತಿಯ ಪದ್ಧತಿ ಪ್ರಾರಂಭವಾಗುತ್ತದೆ. ಅಲ್ಲಿ ಮಾರಿಜಾತ್ರೆ ನಡೆಯುತ್ತದೆ. ಆಗ ಹಳೆಯ ಪೊರಕೆ, ಹಳೆ ತಟ್ಟೆ, ಹಳೆ ಬುಟ್ಟಿ, ಹೀಗೆ ಎಲ್ಲವನ್ನೂ ಕೂಡ ಒಂದು ಕಡೆ ಹಾಕಿ ಅದನ್ನು ಮತ್ತೊಂದು ಊರಿನಲ್ಲಿ ಗಡಿಮಾರಿ ಎಂದು ಹಾಕುತ್ತಾರೆ. ಆ ಊರಿನವರು ಇವುಗಳನ್ನು ಮತ್ತೊಂದು ಊರಿಗೆ ಗಡಿಮಾರಿ ಎಂದು ಹಾಕುತ್ತಾರೆ. ಇದೇ ರೀತಿಯಲ್ಲಿ ಈ ಹಳೆಯ ಪದಾರ್ಥಗಳನ್ನು ಗಡಿಮಾರಿ ಎಂದು ಪಕ್ಕದ ಊರಿಗೆ ಹಾಕುತ್ತಲೇ ಹೋಗುತ್ತಾರೆ. ಅದೇ ರೀತಿಯಲ್ಲಿ ಈ ಭಿಕ್ಷುಕರನ್ನು ಕಳುಹಿಸಬಹುದೇ ಎಂದು ನನಗನ್ನಿಸುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ಇದಕ್ಕೆ ಪೂರಕವಾಗಿ ಒಂದು ವಿಷಯ ಹೇಳಬಯಸುತ್ತೇನೆ. ನಮ್ಮ ಮುಂಡರಗಿ ತಾಲ್ಲೂಕಿನಲ್ಲಿ ಒಮ್ಮೆ ಬರ ಬಂತು. ಹಿಂದೆ ರೋಡ್ ಅಲ್ಲಿ ಇರಲಿಲ್ಲ. ಈ ರೋಡ್ ಮಾಡುವುದಕ್ಕೆ ಬಳಸುತ್ತಿದ್ದ ಗುಂಡುಗಳನ್ನು ಎತ್ತುಗಳಿಂದ ಎಳೆಯಲಾಗುತ್ತಿತ್ತು. ಈ ಕಡೆ ಆ ಗುಂಡುಗಳಿಗೆ ರೂಲ್ ಎನ್ನುತ್ತಾರೆ. ಒಂದು ಸುದ್ಧಿ ಅಲ್ಲಿ ಏನು ಹಬ್ಬಿತ್ತೆಂದರೆ ಆ ರೀತಿಯ ಗುಂಡು ಯಾವ ಊರಿನಲ್ಲಿ ಇರುತ್ತದೆಯೋ ಆ ಊರಿಗೆ ಬರ ಬರುತ್ತದೆ ಎಂದು ಸುದ್ಧಿ ಹಬ್ಬಿಸಿಬಿಟ್ಟರು. ಆಗ ದೇವರು ಕಳುಹಿಸಿದ ಹಾಗೆ ಎಂದು ಹೇಳಿ ಆ ಗುಂಡನ್ನು ಇಡೀ ಊರಿನವರು ಪಕ್ಕದ ಊರಿಗೆ ಬಿಡುತ್ತಿದ್ದರು. ಆ ಪಕ್ಕದ ಊರಿನವರು ಕೂಡ ಇದೇ ರೀತಿ ಮಾಡುತ್ತಾ ಬಂದು ಕಡೆಗೆ ಪೀಡೆ ಹೋಯಿತು ಎಂದು ಮುಂಡರಗಿಯಲ್ಲಿ ಬಿಟ್ಟುಬಂದರು. ಆ ರೀತಿಯಲ್ಲಿ ಹೈದರಾಬಾದಿನ ಭಿಕ್ಷುಕರನ್ನು ಇಲ್ಲಿ ಏನು ಬಿಟ್ಟಿದ್ದಾರೆ ಇವರ ಜೊತೆಗೆ ನಮ್ಮ ಕಡೆಯ ಭಿಕ್ಷುಕರನ್ನು ಸೇರಿಸಿ ಹೈದರಾಬಾದಿಗೆ ಬಿಟ್ಟುಬಂದರೆ ಒಳ್ಳೆಯದು.

ಶ್ರೀ ಎಸ್.ಎಂ. ಕೃಷ್ಣ : ಇದಕ್ಕೆ ನಮ್ಮ ಬಜೆಟ್‌ನಲ್ಲಿ ಪ್ರಾವಿಶನ್ ಮಾಡಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಇನ್ನು 47 ಸಣ್ಣ ಹಾಗೂ ಮಧ್ಯಮ ಪಟ್ಟಣಗಳಿಗೆ ಕುಡಿಯುವ ನೀರನ್ನು ಪೂರೈಸುವ ದೃಷ್ಟಿಯಿಂದ 321 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದೇವೆಂದು ಹೇಳಿದ್ದಾರೆ. ಇವೊತ್ತು ಕೋಲಾರದಲ್ಲಿರುವ ಎರಡು

ಕೆರೆಗಳೂ ಬತ್ತಿಹೋಗಿವೆ. ನಾನು ಕಳೆದ ವಾರ ಒಂದು ಅರ್ಜಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟು ಕಡೇ ಪಕ್ಷ ಆ ಕೆರೆಗಳ ಹೂಳನ್ನು ಎತ್ತಲು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡೆ. ಇವೊತ್ತು 100 ಬೋರ್‌ವೆಲ್‌ಗಳನ್ನು ಕೊರೆದು ಅದಕ್ಕೆ ಮೋಟಾರ್‌ಗಳನ್ನು ಹಾಕಿದ್ದೇವೆ. ಈ ವ್ಯವಸ್ಥೆ ಮಾಡಿದ್ದರೂ ಕೂಡ ಮೂರ್‍ನಾಲ್ಕು ದಿನಗಳಿಗೊಮ್ಮೆ ನೀರು ಬಿಡಬೇಕಾದ ಸನ್ನಿವೇಶವಿದೆ. ಕೋಲಾರ ಜಿಲ್ಲಾ ಕೇಂದ್ರವಾಗಿದ್ದರೂ ಕೂಡ ನಾವೇನು ಒಬ್ಬ ಮನುಷ್ಯನಿಗೆ 110 ಲೀಟರ್ ನೀರನ್ನು ಕೊಡಬೇಕು ಎಂದು ಹೇಳುತ್ತಿದ್ದೇವೆ ಅದರಲ್ಲಿ 5 ಲೀಟರ್ ನೀರನ್ನು ಕೂಡ ಒಬ್ಬರಿಗೆ ಕೊಡುವುದಕ್ಕೆ ಆಗದಿರುವ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಕುಡಿಯುವ ನೀರನ್ನೊದಗಿಸುವ ದೃಷ್ಟಿಯಿಂದ 670 ಕೋಟಿ ರೂಪಾಯಿಗಳ ಯೋಜನೆಯೊಳಗೆ ಹೊಸಕೋಟೆ, ಕೋಲಾರ, ಬಂಗಾರಪೇಟೆ, ಕೆ.ಜಿ.ಎಫ್, ಮಾಲೂರು ಹಾಗೂ ಆನೇಕಲ್ಲು ಮತ್ತು 131 ಹಳ್ಳಿಗಳು ಒಳಗೊಂಡಿದೆ. ಈ ಯೋಜನೆಗೆ ಹಣವನ್ನು ನೀವು ನಬಾರ್ಡ್‌ನಿಂದಲೋ ಅಥವಾ ಹುಡ್ಕೋದಿಂದಲೋ ಅಥವಾ ಯಾವುದಾದರೂ ಮೂಲದಿಂದ ಹಣವನ್ನು ತಂದು ಅಲ್ಲಿಯ ಜನರಿಗೆ ಕುಡಿಯುವ ನೀರನ್ನು ಒದಗಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಹಳ್ಳಿಯಲ್ಲಿ ಹೆಣ್ಣುಮಕ್ಕಳು ದೂರ ಹೋಗಿ ನೀರನ್ನು ಹೇಗೆ ತರುತ್ತಾರೋ ಆ ರೀತಿಯಲ್ಲಿ ಪಟ್ಟಣಗಳಲ್ಲಿ ಹೆಣ್ಣುಮಕ್ಕಳು ದೂರ ಹೋಗಿ ನೀರನ್ನು ತರುವುದಿಲ್ಲ. ಅದರಲ್ಲೂ ಕೂಡ ಅಲ್ಪಸಂಖ್ಯಾತರು ಹೆಚ್ಚಿರುವ ಬಡಾವಣೆಗಳಲ್ಲಿ ಗಂಡಸರುಗಳೇ ದೂರಕ್ಕೆ ಹೇಗಿ ನೀರನ್ನು ಮನೆಗ ತರುತ್ತಾರೆ. ಏಕೆಂದರೆ ಹೆಣ್ಣುಮಕ್ಕಳಿಗೆ ಘೋಷ ಇರುವುದರಿಂದ ಅವರು ಈಚೆ ಬರುವುದಿಲ್ಲ. ಇಂಥ ಪರಿಸ್ಥಿತಿ ಇರುವುದರಿಂದ ಪಟ್ಟಣಗಳಲ್ಲಿ ಕುಡಿಯುವ ನೀರನ್ನು ಒದಗಿಸಲು ಹೆಚ್ಚಿನ ಒತ್ತು ಕೊಡಬೇಕಾಗಿತ್ತು. ಆದರೆ ಕೇವಲ 321 ಕೋಟಿ ರೂಪಾಯಿಗಳನ್ನು ನಿವೇನು ಇಟ್ಟಿದ್ದೀರಿ ಇದು ಏನೇನು ಸಾಲದು ಎಂದು ಹೇಳಬಯಸುತ್ತೇನೆ. ಆದುದರಿಂದ ನೀವೇನು ಕ್ರಿಯಾ ಯೋಜನೆಯನ್ನು ಮಾಡಿದ್ದೀರಿ ಅದಕ್ಕೆ ನಾನು ಹೇಳಿರುವ ಆರೇಳು ಪಟ್ಟಣಗಳು ಮತ್ತು 131 ಗ್ರಾಮಗಳನ್ನು ಸೇರಿಸಿಕೊಂಡು ಹೆಚ್ಚಿನ ಹಣವನ್ನು ಇಟ್ಟಕೊಂಡು ಬಜೆಟ್‌ನಲ್ಲಿ ತೋರಿಸಬೇಕಾಗಿತ್ತು. ಆದರೆ ನೀವು ಆ ರೀತಿ ಮಾಡಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಸರ್ಕಾರವಿದ್ದಾಗ 'ನಿರ್ಮಲ ಕರ್ನಾಟಕ' ಎಂದು ಯೋಜನೆಯನ್ನು ಹಾಕಿದ್ದೆವು. ಆದರೆ ನೀವು ಆ ಹೆಸರಿನ ಬದಲು 'ಸ್ವಚ್ಛಗ್ರಾಮ' ಎಂದು ಬೇರೆಯ ಹೆಸರನ್ನಿಟ್ಟಿದ್ದೀರಷ್ಟೆ. ಕೇವಲ ಹೆಸರನ್ನು ಬೇರೆ ಇಟ್ಟು ಪ್ರಚಾರವನ್ನು ಗಿಟ್ಟಿಸಿದ್ದೀರಿ. ಆದರೆ ನಮ್ಮ ಜನತಾದಳ ಸರ್ಕಾರವಿದ್ದಾಗ ಏನು ಕಾರ್ಯಕ್ರಮವಿತ್ತೋ ಅದೇ ಕಾರ್ಯಕ್ರಮವಾಗಿದೆ. ಕೇವಲ ಹೆಸರನ್ನು ನೀವು ತಿರುಚಿ ಇಟ್ಟಿದ್ದೀರಷ್ಟೆ. ಇನ್ನು ಹಾಸ್ಟೆಲ್‌ಗಳ ಬಗ್ಗೆ ಹೇಳಬೇಕೆಂದರೆ ಇಂದು ಹೆಣ್ಣುಮಕ್ಕಳ ಹಾಸ್ಟೆಲ್‌ಗಳು ಬಹಳ ಕಡಿಮೆ ಇದೆ. ಆದುದರಿಂದ, ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯಗಳನ್ನು ನೀವು ಹೆಚ್ಚು ಮಾಡಿ ಇದನ್ನು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ಹಳ್ಳಿಯ ಮಟ್ಟದಲ್ಲಿ ತೆರೆಯಬೇಕೆಂದು ಹೇಳಬಯಸುತ್ತೇನೆ. ಆದರೆ ನೀವೇನು ಈಗ 20 ಹಾಸ್ಟೆಲ್‌ಗಳನ್ನು ತೆರೆಯಲಾಗುವುದು ಎಂದು ಹೇಳಿದ್ದೀರಿ ಇದು ಏನೇನೂ ಸಾಲವೆಂದು ಹೇಳಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಇಲಾಖೆ ಸಚಿವರು) : ಅನೇಕ ಕಡೆಗಳಲ್ಲಿ ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯಗಳಲ್ಲಿ ಸ್ಯಾಂಕ್ಷೆಂಡ್ ಸ್ಟ್ರೆಂಥ್ ಪ್ರಕಾರ ಎಷ್ಟು ಹೆಣ್ಣು ಮಕ್ಕಳು ಇರಬೇಕೋ ಅಷ್ಟು ಸಂಖ್ಯೆಯ ಹೆಣ್ಣು ಮಕ್ಕಳು ಬರುತ್ತಿಲ್ಲ. ಈ ರೀತಿಯ ತೊಂದರೆ ಕೂಡ ಇದೆ.

ಶ್ರೀ ಅರಗ ಜ್ಞಾನೇಂದ್ರ : ಇದು ವಿದ್ಯಾರ್ಥಿಗಳ ಹಾಸ್ಟೆಲ್‌ಗಳಲ್ಲಿ ಉದ್ಭವಿಸಬಹುದು. ಆದರೆ ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಲ್ಲಿ ನೂಕುನುಗ್ಗಲಿದೆ. ಸ್ಟ್ರೆಂಥ್ ಜಾಸ್ತಿ ಮಾಡಿಕೊಡಬೇಕೆಂದು ನಾವೇ ಹಿಂದೆ ಹಲವಾರು ಬಾರಿ ನಿಮ್ಮ ಕಛೇರಿಗೆ ಬಂದು ಮಾತನಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ಸಂಬಂಧಪಟ್ಟ ಹಾಗೆ ಹೇಳಿದ್ದು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಕೃಷಿ ಭೂಮಿ ಖರೀದಿ ಯೋಜನೆಯಡಿಯಲ್ಲಿ ಎಸ್‌ಸಿ/ಎಸ್‌ಟಿ ಕಾರ್ಪೋರೇಶನ್‌ನಿಂದ ಫಲಾನುಭವಿಗೆ ಕೊಡುತ್ತಿದ್ದ 50 ಸಾವಿರ ರೂಪಾಯಿಗಳನ್ನು ನೀವು 60 ಸಾವಿರ ರೂಪಾಯಿಗಳಿಗೆ ಏರಿಸಿದ್ದೀರಿ. ಆದರೆ ಇಂದು ಜಮೀನಿನ ಬೆಲೆ ಜಾಸ್ತಿ ಇರುವುದರಿಂದ ಇದಕ್ಕೆ ನೀವು ಕನಿಷ್ಟಪಕ್ಷ ಒಂದು ಲಕ್ಷ ರೂಪಾಯಿಗಳನ್ನಾದರೂ ಕೊಡಲು ಹಣವನ್ನು ಇಡಬೇಕಾಗಿತ್ತು. ಆದರೆ ನೀವು 10 ಸಾವಿರ ರೂಪಾಯಿಗಳನ್ನು ಮಾತ್ರ ಜಾಸ್ತಿ ಮಾಡಿದ್ದೀರಿ. ಇದು ಏನೇನು ಸಾಲದು. ಇಂದು ರೈತರು ಜಮೀನನ್ನು ಈ ಬೆಲೆಗೆ ಮಾರುವುದಿಲ್ಲವಾದ ಕಾರಣ ಈ ಯೋಜನೆ ಕೇವಲ ಯೋಜನೆಯಾಗಿಯೇ ಉಳಿಯುತ್ತದಷ್ಟೆ. ಆದುದರಿಂದ ನೀವು ಒಂದು ಎಕರೆಗೆ ಒಂದು ಲಕ್ಷ ರೂಪಾಯಿಗಳನ್ನಾದರೂ ಕೊಡುವಲ್ಲಿ ಅನುಕೂಲವಾಗಲು ಹಣವನ್ನು ಇಡಬೇಕೆಂದು ಹೇಳಬಯಸುತ್ತೇನೆ. ಇನ್ನು ಮೆಟ್ರಿಕ್ ನಂತರದ ಐದು ಹಾಸ್ಟೆಲ್‌ಗಳನ್ನು ತೆರೆಯುವುದಾಗಿ ಹೇಳಿದ್ದೀರಿ. ಆದರೆ ಇದು ಏನೇನೂ ಸಾಲದು. ಜಿಲ್ಲಾ ಕೇಂದ್ರಗಳನ್ನು ಗಮನದಲ್ಲಿಟ್ಟುಕೊಂಡು 27 ಹಾಸ್ಟೆಲ್‌ಗಳನ್ನಾದರೂ ನೀವು ಮಾಡಲು ಹೇಳಬೇಕಾಗಿತ್ತು. ಏಕೆಂದರೆ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತೇವೆಂದು ಹೇಳಿದ್ದೀರಿ. ಅದೇ ರೀತಿಯಲ್ಲಿ ನೀವು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ರೇಷ್ಮೆ ನಿರ್ದೇಶನಾಲಯವನ್ನು ಮೈಸೂರಿನಲ್ಲಿ ಪ್ರಾರಂಭಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಭಾಷಣದಲ್ಲಿ ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳುವುದೇನೆಂದರೆ ಈ ರೇಷ್ಮೆಯನ್ನು ಹೈದರಾಲಿ ಕಾಲದಲ್ಲಿ ದೇವನಹಳ್ಳಿಯವರು ಮೊದಲು ಕಂಡುಹಿಡಿದರು. ಇವೊತ್ತಿಗೂ ಕೂಡ ಕೋಲಾರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ರೇಷ್ಮೆ ಕೃಷಿಯಲ್ಲಿ ಬಹಳ ಮುಂದುವರಿದವುಗಳಾಗಿವೆ. ಹೀಗಿರುವಾಗ ರೇಷ್ಮೆ ನಿರ್ದೇಶನಾಲಯವನ್ನು ಮೈಸೂರಿಗೆ ಹಾಕಿದರೆ ಹೇಗೆ? ಬೆಂಕಿ ಮಹದೇವ್‌ರವರು ರೇಷ್ಮೆ ಸಚಿವರಾಗಿದ್ದಾರೆಂದು ಹೇಳಿ ಈ ರೀತಿ ಮಾಡಿದರೆ ಹೇಗೆ? ಇದು ಸರಿಯಲ್ಲ. ನೀವು ರೇಷ್ಮೆ ನಿರ್ದೇಶನಾಲಯವನ್ನು ಕೋಲಾರಕ್ಕೆ ಹಾಕಿ ಎಂದು ನಾನು ಹೇಳುತ್ತಿಲ್ಲ. ಇದನ್ನು ನೀವು ಬೆಂಗಳೂರಿನಲ್ಲಿಯೇ ಉಳಿಸಿಕೊಳ್ಳಿ ಎಂದು ಹೇಳುತ್ತಿದ್ದೇನೆ. ಏಕೆಂದರೆ ರಾಮನಗರ, ಚೆನ್ನಪಟ್ಟಣ, ಕೋಲಾರ, ಬೆಂಗಳೂರು ಗ್ರಾಮಾಂತರ, ಶಿಡ್ಲಘಟ್ಟಗಳಲ್ಲಿ

ಹೆಚ್ಚಾಗಿ ರೇಷ್ಮೆ ಬೆಳೆಗಾರರು ಇದ್ದಾರೆ ಮತ್ತು ರೇಷ್ಮೆ ಉತ್ಪಾದನೆ ಕೂಡ ಜಾಸ್ತಿಯಾಗುತ್ತಿರುವುದರಿಂದ ನಿರ್ದೇಶನಾಲಯವನ್ನು ಬೆಂಗಳೂರಿನಲ್ಲಿಯೇ ಉಳಿಸಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇಂದು ರೇಷ್ಮೆ ತಳಿಯಲ್ಲಿ ಎಂಫೈ ವೀವನ್ ಎನ್ನತಕ್ಕಂಥ ಒಳ್ಳೆಯ ತಳಿಗಳು ಇಂದು ಬರುತ್ತಿವೆ. ಇವುಗಳ ಮೊಟ್ಟೆಗಳ ಬಗ್ಗೆ ಹೇಳಬೇಕೆಂದರೆ ಚೈನಾ, ಜಪಾನ್ ದೇಶಗಳಲ್ಲಿ 1800 ಮೀಟರ್ ರೇಷ್ಮೆ ಇದರಿಂದ ಬರುತ್ತಿದೆ. ಆದರೆ ನಮ್ಮಲ್ಲಿ ಕೇವಲ 800 ಮೀಟರ್ ಬರುವಂಥ ರೀತಿಯ ಬೀಜೋತ್ಪಾದನೆ ಮಾತ್ರವಿದೆ. ಇದಕ್ಕೂ ಕೂಡ ಹೆಚ್ಚಿನ ಹಣವಿಟ್ಟು ಸಂಶೋಧನೆ ಮೂಲಕ ಹೆಚ್ಚಿನ ಮೀಟರ್ ರೇಷ್ಮೆ ಬರಲು ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಇತ್ತೀಚೆಗೆ ರೇಷ್ಮೆಯಲ್ಲಿ ಎಂಫೈ ವೀವನ್‌ಗೆ ಹೆಚ್ಚಿನ ಬೇಡಿಕೆ ಇದೆ. ಏಕೆಂದರೆ ಇದರಿಂದ ಒಳ್ಳೆಯ ಫಲಿತಾಂಶ ಬರುತ್ತಿರುವುದರಿಂದ ಇದರ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಬೇಕು. ಇನ್ನು ಅರಣ್ಯವನ್ನು 22 ಪರ್ಸೆಂಟ್ ಹೆಚ್ಚು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಇಂದು ಅರಣ್ಯಗಳು ಹೆಚ್ಚಾಗಿ ಕ್ಷೀಣಿಸುತ್ತಿದೆ. ಜಪಾನ್ ಯೋಜನೆಯ ನೆರವಿನಿಂದಾಗಲಿ ಅಥವಾ ಯುರೋಪಿಯನ್ ಯೋಜನೆಗಳಿಂದಾದರೂ ವಿಪುಲವಾಗಿ ಅರಣ್ಯವನ್ನು ಬೆಳೆಸಬೇಕು ಎನ್ನುವ ಉದ್ದೇಶವಿದ್ದರೂ ಕೂಡ ಎಷ್ಟರಮಟ್ಟಿಗೆ ಗುರಿಯನ್ನು ಹಾಕಿಕೊಳ್ಳಲಾಗುತ್ತದೋ ಆ ಗುರಿಯನ್ನು ಇವೊತ್ತಿಗೂ ಮುಟ್ಟಲು ಆಗುತ್ತಿಲ್ಲ. ಸಾಮಾಜಿಕ ಅರಣ್ಯವೇ ಆಗಲೀ ಅಥವಾ ರೆಗ್ಯುಲರ್ ಫಾರೆಸ್ಟ್ ಆಗಲೀ ಕೇವಲ ಪುಸ್ತಕಗಳಲ್ಲಿ ಮಾತ್ರ ಇವುಗಳನ್ನು ಬೆಳೆಸಲಾಗುತ್ತಿದೆಯೇ ವಿನಃ ನಿಜವಾಗಿ ಅರಣ್ಯವನ್ನು ಬೆಳೆಸುತ್ತಿಲ್ಲ. ನೀವೇನು ಈಗ ಪೇಪರ್‌ನಲ್ಲಿ ಮುಂದಿನ ಐದು ವರ್ಷಗಳಲ್ಲಿ 22 ಪರ್ಸೆಂಟ್ ಅರಣ್ಯವನ್ನು ಹೆಚ್ಚಿಸಲಾಗುವುದು ಎಂದು ಹೇಳಿದ್ದೀರಿ ಇದು ಏನೇನೂ ಸಾಲದು. ಆದರೂ ಇಟ್ಟಿರುವ ಹಣದ ಮೇಲೆ ನಿಗಾ ಇಟ್ಟು ಅರಣ್ಯವನ್ನು ಸರಿಯಾಗಿ ನೀವು ಬೆಳೆಸಬೇಕು. ಇದರ ಜೊತೆಗೆ ನೀವು 'ಟ್ರೀ ಆ್ಯಕ್ಟ್' ನ್ನು ತರಬೇಕು. ಏಕೆಂದರೆ ಇವೊತ್ತು ಸರ್ಕಾರಿ ಮರಗಳನ್ನು ಯಾರು ಕಡಿಯುತ್ತಾರೋ ಬಿಡುತ್ತಾರೋ ಈ ಬಗ್ಗೆ ಕೇಳುವವರೇ ಇಲ್ಲವಾಗಿದೆ. ಖಾಸಗಿಯವರದಂತೂ ಯಾರೂ ಕೇಳುವವರೇ ಇಲ್ಲ. ಇದರ ಬಗ್ಗೆ ಒಂದು ಆ್ಯಕ್ಟ್ ಮಾಡಿ ಇದನ್ನು ನಿಲ್ಲಿಸಬೇಕೆಂದು ಹೇಳಬಯಸುತ್ತೇನೆ. ಇನ್ನು ಹಸಿರು ಕಾರ್ಡ್ ಮೂಲಕ ಆಹಾರ ಧಾನ್ಯಗಳನ್ನು ಕೊಡಲು 305 ಕೋಟಿ ರೂಪಾಯಿಗಳು ಹೆಚ್ಚು ಖರ್ಚಾಗುವುದರಿಂದ ಅದನ್ನು ನಾವು ಹಂಚುವುದಕ್ಕಾಗುವುದಿಲ್ಲ ಮತ್ತು ಈಗೇನು ಬೋಗಸ್ ಕಾರ್ಡ್‌ಗಳಿವೆ ಅವುಗಳನ್ನು ನಿಯಂತ್ರಣ ಮಾಡುತ್ತೇವೆಂದು ಹೇಳಿದ್ದೀರಿ. ನೀವು ಈ ಬೋಗಸ್ ಕಾರ್ಡ್‌ಗಳನ್ನು ನಿಯಂತ್ರಣ ಮಾಡುವುದರ ಜೊತೆಗೆ 305 ಕೋಟಿ ರೂಪಾಯಿಗಳ ಸಬ್ಸಿಡಿಗೆ ಹಣವನ್ನು ಹೇಗಾದರೂ ಒದಗಿಸಿಕೊಟ್ಟು ಹಸಿರು ಕಾರ್ಡ್ ಹೊಂದಿದ ಬಡವರಿಗೆ ಆಹಾರಧಾನ್ಯ ಸಿಗುವಂತಾಗಲು ವ್ಯವಸ್ಥೆ ಮಾಡಬೇಕು. ಈಗಾಗಲೇ ಕೇಂದ್ರ ಸರ್ಕಾರ ಸಬ್ಸಿಡಿ ನಿಲ್ಲಿಸಿ ಒಂದು ತಪ್ಪು ಮಾಡಿದೆ. ಆದರೆ ನೀವು ರಾಜ್ಯ ಸರ್ಕಾರದದಿಂದಲಾದರೂ ಇದಕ್ಕೆ ಹಣವನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಬಾಂಬೆ-ಕರ್ನಾಟಕ, ಹೈದರಾಬಾದ್-ಕರ್ನಾಟಕ, ಹಳೆ ಕರ್ನಾಟಕವನ್ನು ಒಂದೇ ರೀತಿಯಲ್ಲಿ ಸಮತೋಲನ ಮಾಡುತ್ತೇವೆಂದು ಹೇಳಿ ಅಲ್ಲಿರುವ ಕೇವಲ ಕಛೇರಿಗಳನ್ನು, ನಿರ್ದೇಶನಾಲಯಗಳನ್ನು ವರ್ಗಾವಣೆ ಮಾಡಿಬಿಟ್ಟರೆ ಸಮತೋಲನವಾದಂತೆ ಆಗುವುದಿಲ್ಲ. ಕಳೆದ ಹಲವಾರು ವರ್ಷಗಳಿಂದ ಉತ್ತರ ಕರ್ನಾಟಕದಲ್ಲಿ ಹೈ ಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕೆಂದು ಅಲ್ಲಿಯ ಜನಗಳು ಹೋರಾಟ

ಮಾಡುತ್ತಿದ್ದಾರೆ. ಆದರೆ ಆ ವಿಷಯದ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವಾಗಿಲ್ಲ. ಇದರ ಬಗ್ಗೆ ಹೇಳದೇ ಕೇವಲ ಜವಳಿ ನಿರ್ದೇಶನಾಲಯ, ಸಕ್ಕರೆ ನಿರ್ದೇಶನಾಲಯವನ್ನು ಅಲ್ಲಿಗೆ ವರ್ಗಾವಣೆ ಮಾಡುತ್ತೇನೆನ್ನುವ ಮಾತುಗಳನ್ನೇ ಹೇಳಿದ್ದೀರಿ. ಆದರೆ ಆ ಭಾಗದ ಜನರು ಹೈ ಕೋರ್ಟ್ ಪೀಠ ಆಗಬೇಕೆಂದು ಏನು ಆಶಿಸುತ್ತಿದ್ದಾರೆ ಅದನ್ನು ಸ್ಥಾಪನೆ ಮಾಡಬೇಕೆಂದು ನಿಮಗೆ ಹೇಳಬಯಸುತ್ತೇನೆ. ಇದರ ಬಗ್ಗೆ ಬಜೆಟ್‌ನಲ್ಲಿ ತೋರಿಸಿ ಸಮತೋಲನವನ್ನು ನೀವು ಉಂಟುಮಾಡಬೇಕಾಗಿತ್ತು. ನಿಮಗೇ ತಿಳಿದಿರುವ ಹಾಗೆ ಹಿಂದೆ ರೈಲ್ವೇ ಡಿವಿಜನ್ ಆಫೀಸ್ ಬದಲಾವಣೆ ಆಗುವುದರಲ್ಲಿಯೇ ದೊಡ್ಡ ರಾದ್ಧಾಂತವಾಗಿದೆ. ಆ ರೀತಿಯ ರಾದ್ಧಾಂತವಾಗುವ ಮೊದಲೇ ಅಲ್ಲಿ ಹೈ ಕೋರ್ಟ್ ನ್ಯಾಯ ಪೀಠವನ್ನು ಅಲ್ಲಿ ಸ್ಥಾಪನೆ ಮಾಡಬೇಕು. ಇದು ಹುಬ್ಬಳ್ಳಿಯಲ್ಲಿ, ಅಥವಾ ಬಿಜಾಪುರದಲ್ಲಿ ಅಥವಾ ರಾಯಚೂರು ಭಾಗದಲ್ಲಿ ಆಗಬಹುದು. ಸಮತೋಲನ ಮಾಡುವಾಗ ಆ ಭಾಗದ ಜನರು ಸಹಕರಿಸದೇ ನಮ್ಮ ಭಾಗದಲ್ಲಿಯೇ ಆಗಬೇಕು ಎನ್ನುವುದು ತಪ್ಪಾಗುತ್ತದೆ. ನಮ್ಮ ನಾಯಕರು ಈಗಾಗಲೇ ಹುಬ್ಬಳ್ಳಿ-ಧಾರವಾಡದಲ್ಲಿ ಆಗುವ ಪ್ರಸ್ತಾಪವಿದೆಯೆಂದು ಹೇಳಿದರು. ನಿಮಗೆ ಆ ಉತ್ತರ ಕರ್ನಾಟಕದ ಯಾವ ಭಾಗದಲ್ಲಿ ಮಾಡಿದರೆ ಸಮತೋಲನ ಮಾಡಲು ಅನುಕೂಲವಾಗುತ್ತದೆ ಎಂದು ಅನ್ನಿಸುತ್ತದೋ ಅಲ್ಲಿ ಹೈ ಕೋರ್ಟ್ ಪೀಠವನ್ನು ಸ್ಥಾಪನೆ ಮಾಡಿ, ಆ ಭಾಗದ ಬಹಳ ದಿನಗಳ ಆಸೆಯನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಾರ್ವಜನಿಕ ಉದ್ಯಮಗಳ ಕಾರ್ಯನಿರ್ವಹಣೆ ಬಹಳ ವಿಷಾದಕರವಾಗಿದೆಯೆಂದು ನೀವು ಹೇಳಿದ್ದೀರಿ. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಸ್ವಾಮ್ಯದ ಯಾವುದೇ ಕಾರ್ಖಾನೆಗಳಲ್ಲಿ ಲಾಭ ಬರುತ್ತಿಲ್ಲ. ಎಲ್ಲವೂ ನಷ್ಟದ ಹಾದಿಯಲ್ಲಿಯೇ ನಡೆಯುತ್ತಿದೆ. ಇದಕ್ಕೆ ಎಲ್ಲೋ ಒಂದು ಹಂತದಲ್ಲಿ ಕಡಿವಾಣ ಹಾಕಬೇಕು. ಅದು ಇಂಥ ಕಾರ್ಖಾನೆಗಳನ್ನು ನಿಲ್ಲಿಸುವುದರ ಮೂಲಕವಾದರೂ ಆಗಬಹುದು. ಆದರೆ ಇದನ್ನು ಮಾಡುವಾಗ ಅಲ್ಲಿ ಕೆಲಸ ಮಾಡುವ ಕಾರ್ಮಿಕರನ್ನೂ ಕೂಡ ಗಮನದಲ್ಲಿಟ್ಟುಕೊಂಡು ಈ ಕೆಲಸವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ವಿದ್ಯುತ್ ಉತ್ಪಾದನೆ ಬಗ್ಗೆ ಹೆಚ್ಚಿನ ಒತ್ತನ್ನು ಕೊಡಲಾಗುವುದೆಂದು ಹೇಳಿದ್ದೀರಿ. ಆದರೆ ಇದಕ್ಕಾಗಿ ಎಷ್ಟು ಹಣವನ್ನು ನೀವು ಇಡಬೇಕಾಗಿತ್ತೋ ಅಷ್ಟು ಹಣವನ್ನು ನೀವು ಇಟ್ಟಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಹಿಂದಿನ ಸರ್ಕಾರ 800 ಕಿಲೋವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತೇವೆಂದು ಹೇಳಿದ್ದರು ಎಂದು ಹೇಳಿದಿರೇ ವಿನಃ ನೀವು ಎಷ್ಟು ಕಿಲೋವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತೀರಿ ಎನ್ನುವ ಬಗ್ಗೆ ನೀವು ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಅದರ ಬಗ್ಗೆ ನೀವು ಹೇಳಬೇಕು. ಇನ್ನು ಹಿಂದಿನ ಸರ್ಕಾರದವರು ಮೀಟರ್‌ಗಳನ್ನು ಅಳವಡಿಸುತ್ತೇವೆಂದು ಹೇಳಿದಾಗ ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಶ್ರೀ ಖರ್ಗೆಯವರು ದೊಡ್ಡ ಗಲಾಟೆಯನ್ನೇ ಮಾಡಿಬಿಟ್ಟರು. ನೀವು ರೈತರ ವಿರೋಧಿಗಳು, ರೈತರ ಸಮಾಧಿಯ ಮೇಲೆ ನೀವು ನಾಟಕವಾಡುತ್ತೀರಿ ಎಂಬುದಾಗಿ ಪ್ರತಿಭಟಿಸಿದರು. ಆದರೆ ಇವೊತ್ತು ನೀವು ಹಳ್ಳಿಗಾಡಿನ ರೈತರಿಗೆ ಒದಗಿಸುವ ವಿದ್ಯುತ್‌ಗೆ ಒಂದು ಹೆಚ್.ಪಿ.ಗೆ ಇಷ್ಟು ಹಣವೆಂದು ನಿಗಧಿ ಮಾಡುತ್ತೇವೆಂದು ಹೇಳಿದ್ದೀರಿ. ನಮ್ಮ ರೈತರು ಹಣವನ್ನು ಕೊಡಲೂ ಸಿದ್ಧ. ಆದರೆ ನೀವು 24 ಗಂಟೆಗಳ ನಿರಂತರ ವಿದ್ಯುತ್ ಸರಬರಾಜನ್ನು ಮಾಡಬೇಕು. ಕೋಲಾರ ಜಿಲ್ಲೆಗೆ

ನೀವು 24 ಗಂಟೆಗಳ ಕಾಲ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಿದರೆ ನಾವು ಹಣ ಕೊಡುವುದಕ್ಕೆ ಸಿದ್ಧರಿದ್ದೇವೆ. ಆದರೆ ಈ ಮೀಟರ್‌ಗಳನ್ನು ಅಳವಡಿಸುವುದಕ್ಕೆ ನೀವು ಹಿಂದೆ ಹೇಗೆ ಪ್ರತಿಭಟನೆ ಮಾಡಿದಿರೋ ಆದರೆ ಇಂದು ನೀವು ಈ ವಿಷಯದಲ್ಲಿ ಬದಲಾದ ನಿಲುವನ್ನು ತೆಗೆದುಕೊಂಡಿದ್ದೀರಿ. ಅಂದು ಮಾನ್ಯ ಜೆ.ಹೆಚ್. ಪಟೇಲರು ಮೀಟರ್‌ನ್ನು ಅಳವಡಿಸಬೇಕಾಗುತ್ತದೆ ಎಂದಾಗ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಅವರ ಅನುಯಾಯಿಗಳೆಲ್ಲರೂ ಎದ್ದು ದೊಡ್ಡ ಗಲಾಟೆಯನ್ನು ಮಾಡಿದರು. ಆದರೆ ಇಂದು ಅವರೇ ತಮ್ಮ ಸರ್ಕಾರದ ಬಜೆಟ್‌ನಲ್ಲಿ ಮೀಟರ್ ಅಳವಡಿಸುವ ಬಗ್ಗೆ ಪ್ರಸ್ತಾವನೆಯನ್ನು ಮಾಡಿದ್ದಾರೆ. ರೈತರಿಗೆ ಸಂಬಂಧ ಪಟ್ಟಹಾಗೆ ತಾವೇನು ಮೀಟರ್ ಅಳವಡಿಸಬೇಕೆಂದು ಪ್ರಸ್ತಾವನೆ ಇಟ್ಟಿದ್ದಿರೋ ಅದು ನಿಲ್ಲಬೇಕೆಂದು ಹೇಳಬಯಸುತ್ತೇನೆ. ಇನು 175 ತಾಲ್ಲೂಕುಗಳಲ್ಲಿರುವ ಗ್ರಾಮೀಣ ರಸ್ತೆಗಳ ಸುಧಾರಣೆಯನ್ನು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡಿಸಲಾಗುವುದೆಂದು ಹೇಳಿದ್ದೀರಿ. ಇದರಲ್ಲಿ 10 ಸಾವಿರ ಕಿಲೋ ಮೀಟರ್ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದೆಂದು ಹೇಳಿದ್ದೀರಿ. ನೀವು ಸರ್ಕಾರದಿಂದ ನಲವತ್ತು ಲಕ್ಷ ರೂಪಾಯಿಗಳೆಂದು ಹೇಳುತ್ತಿದ್ದೀರಿ. ಮೊದಲು ಪ್ರಣಾಳಿಕೆಯಲ್ಲಿ ಹೇಳುವಾಗ ನಮ್ಮ ಸರ್ಕಾರವಿದ್ದಾಗ ರಸ್ತೆಗಳು ಸರಿಯಾಗಿಲ್ಲವೆಂದು ಬಹಳ ಒತ್ತಿ ಹೇಳಿದ್ದೀರಿ. ಈಗ ಇದರ ಬಗ್ಗೆ ನಿಮಗೆ ಕಾಳಜಿ ಇದ್ದಿದ್ದರೆ ಕೇವಲ ನಲವತ್ತು ಲಕ್ಷ ರೂಪಾಯಿಗಳನ್ನು ಏಕೆ ಇಟ್ಟಿದ್ದೀರಿ, ನೀವು ಒಂದು ಕೋಟಿ ರೂಪಾಯಿಗಳನ್ನು ಕೊಡಬಹುದಾಗಿತ್ತು. ಇದಕ್ಕೆ ಕೇಂದ್ರಸರ್ಕಾರದಿಂದ ಬರುವಂತಹ ಇ.ಎ.ಎಸ್. ಹಣ ಏನು ಇದೆ ಅದು ಸಮಯಕ್ಕೆ ಸರಿಯಾಗಿ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ಇ.ಎ.ಎಸ್. ಇಲ್ಲದಿದ್ದರೂ ಅರವತ್ತು ಲಕ್ಷ ರೂಪಾಯಿಗಳು ಎಲ್ಲರಿಗೂ ಬರುತ್ತದೆ. ಮುಂದಿನ ವರ್ಷದಿಂದ ಇ.ಎ.ಎಸ್. ಎಲ್ಲಿದೆ. ಈ ಅರವತ್ತು ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ಕಳೆದ ಐದು ವರ್ಷಗಳಿಂದ ಮಾಡಿರುವುದುಂಟು.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ : ನೀವು ಅರವತ್ತು ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ, ಆದರೆ ಆ ಹಣ ಬಿಡುಗಡೆಯಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಏನು ಹೇಳುತ್ತಿದ್ದೀರಿ, ಟೆಂಡರ್ ಕರೆದಿದೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಇ.ಎ.ಎಸ್. ಇಲ್ಲದೇ ನಮ್ಮಗೆ ಎಲ್ಲಾ ಬಹಳ ಅನುಭವವಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಇ.ಎ.ಎಸ್. ಇಲ್ಲದಿದ್ದರೂ ಅರವತ್ತು ಲಕ್ಷ ರೂಪಾಯಿಗಳು ಸಿಗುತ್ತದೆ, ನಿಮ್ಮಲ್ಲಿ ಟೆಂಡರ್ ಕರೆದಿಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ : ನೀವು ಒಂದು ಕೋಟಿ ರೂಪಾಯಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಆದರೆ ಆ ಹಣ ಬಿಡುಗಡೆಯಾಗಿಲ್ಲ.

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದ ಹಾಗೆ ಟೆಂಡರ್ ಕರೆದಿರುವಂಥಾದ್ದು ನಿಜ, ಮತ್ತ ಕೆಲಸವೂ ಪ್ರಾರಂಭವಾಗುತ್ತದೆ. ತಾವು ಹೇಳಿದಂಥಾದ್ದು ಏನೆಂದರೆ

ಮಾರ್ಚ್ 31ನೇ ದಿನಾಂಕದೊಳಗೆ ರಸ್ತೆಗಳ ಕೆಲಸವೆಲ್ಲಾ ಮುಗಿಯಬೇಕೆನ್ನುವಂತಹ ನೀವು ಕೊಟ್ಟಿರುವಂತಹ ಗೈಡ್‌ಲೈನ್ ಸರ್ಕ್ಯೂಲರ್ ಇದೆ. ಆದರೆ ನೀವು ಈ ಕೆಲಸವನ್ನು ಎಷ್ಟು ಮುಗಿಸಿದ್ದೀರಿ? ಒಂದು ಕಿ.ಮೀ.ರಸ್ತೆಯನ್ನು ಮುಗಿಸಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಈಗ ಟೆಂಡರ್ ಅಪ್ರೂವ್ ಮಾಡಿಕೊಂಡು ನಾಳೆಯಿಂದಲೇ ಕೆಲಸವನ್ನು ಪ್ರಾರಂಭ ಮಾಡಿಸಬಹುದು.

ಶ್ರೀ ಸಿ. ಭೈರೇಗೌಡ : ಈಗ ದಿನಾಂಕ 28 ಆಗಿದೆ, ನಾಳೆ, ನಾಳಿದ್ದರಲ್ಲಿ ಈ ಎರಡು ದಿವಸಗಳಲ್ಲಿ ರಸ್ತೆ ಕಾಮಗಾರಿಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ನಾಳೆ, ನಾಡಿದ್ದರಲ್ಲಿ ಕಾಗದದ ಮೇಲೆ ರಸ್ತೆಗಳನ್ನು ಮಾಡಬಹುದಷ್ಟೆ, ಈಗ ನಾಲ್ಕೈದು ದಿವಸಗಳಿಂದ ಪತ್ರಿಕೆಗಳಲ್ಲಿ ಟೆಂಡರ್ ಬರುತ್ತಿದೆಯೇ ವಿನಃ ನಿಮ್ಮ ಸರ್ಕ್ಯೂಲರ್ ಏನಿತ್ತು. ಅದರ ಪ್ರಕಾರ ಕೆಲಸವಾಗಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಉದ್ದೇಶಪೂರ್ವಕವಾಗಿ ಮಂಜೂರಾತಿಯನ್ನು ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಹೇಳಿದ್ದು?

ಶ್ರೀ ಸಿ. ಭೈರೇಗೌಡ : ತಾವು ಚಿಂತಾಮಣಿ ತಾಲ್ಲೂಕಿನದು ಏನಾಗಿದೆ ಎಂಬುದನ್ನು ನೋಡಿ. ಇವತ್ತು ಆ ತಾಲ್ಲೂಕಿಗೆ ಸಂಬಂಧಪಟ್ಟಂತಹ ಈ ಯೋಜನೆ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿದೆ. ಅಲ್ಲಿಯವರೆಗೆ ಹೋಗುವಂಥಾದ್ದಕ್ಕೆ ಈ ರೀತಿಯಾಗಿ ತಾರತಮ್ಯ ಮಾಡುವುಂಥಾದ್ದು.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಕ್ಷೇತ್ರದಲ್ಲಿ ಯಾರಾದರೂ ನ್ಯಾಯಾಲಯಕ್ಕೆ ಹೋಗಿದ್ದಾರಾ ನಿಮ್ಮ ಕ್ಷೇತ್ರದಲ್ಲಿ ಕೆಲಸವಾಗಲ್ಲವೇ?

ಶ್ರೀ ಸಿ. ಭೈರೇಗೌಡ : ನನ್ನ ಕ್ಷೇತ್ರ ಕೋಲಾರ, ಚಿಂತಾಮಣಿ ಎರಡೂ ಬರುತ್ತದೆ. ಕೋಲಾರ ಭಾಗದಲ್ಲಿ ಆಗಿದೆ. ಆದರೆ ಚಿಂತಾಮಣಿ ತಾಲ್ಲೂಕಿನ ಭಾಗದ್ದು ಹೈಕೋರ್ಟಿನಲ್ಲಿದೆ. ಈ ರೀತಿಯಾದಂತಹ ತಾರತಮ್ಯ ಏಕೆ?

ಶ್ರೀ ಕಾಗೋಡು ತಿಮ್ಮಪ್ಪ : ಅವರು ಯಾರೋ ತಲೆ ಕೆಟ್ಟು ಹೋಗಿದ್ದಾರೆಂದರೆ ನಿಮಗೂ ಅದಕ್ಕೂ ಏನು ಸಂಬಂಧವಿದೆ. ಈಗ ನಿಮ್ಮ ಕೋಲಾರದ ತಾಲ್ಲೂಕಿನಲ್ಲಿ ಆಗಿದೆಯೋ, ಇಲ್ಲವೊ?

ಶ್ರೀ ಸಿ. ಭೈರೇಗೌಡ : ನನ್ನ ಕ್ಷೇತ್ರ ಕೋಲಾರ ಮತ್ತು ಚಿಂತಾಮಣಿ ಎರಡು ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಎರಡು ಹೋಬಳಿ, ಕೋಲಾರ ತಾಲ್ಲೂಕು ಏಕೆ ಸೇರುವುದಿಲ್ಲ. ಕೋಲಾರ ತಾಲ್ಲೂಕು ನಿಮಗೆ ಸೇರುತ್ತದೆಯೋ ಇಲ್ಲವೊ?

ಶ್ರೀ ಸಿ. ಭೈರೇಗೌಡ : ಸೇರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಅಂದಮೇಲೆ ಕೋಲಾರ ತಾಲ್ಲೂಕಿನಲ್ಲಿ ಟೆಂಡರ್ ಕರೆದಿದ್ದಾರೆ.

ಶ್ರೀ ಸಿ. ಭೈರೇಗೌಡ : ಅಲ್ಲಿ ಆಗಬಾರದು, ಚಿಂತಾಮಣಿ ತಾಲ್ಲೂಕಿಗೆ ಸಂಬಂಧಪಟ್ಟಂತಹ ಕೆಲಸಕ್ಕೆ ಮಂಜೂರಾತಿಯನ್ನು ಕೊಡಕೂಡದು, ಅಲ್ಲಿ ಆಗಕೂಡದೆಂದು ನಿಮ್ಮ ಅಧಿಕಾರಗಳಿಂದ ಆಗಿರುವಂತಹ ಉದ್ಧಟತನದ ವ್ಯವಹಾರವನ್ನು ನಡೆಸಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಭೈರೇಗೌಡರೇ, ಚಿಂತಾಮಣಿ ತಾಲ್ಲೂಕು ಇಡೀ ಕರ್ನಾಟಕವಲ್ಲ, ನೀವು ಏಕೆ ಹೀಗೆ ಮಾಡುತ್ತೀರಿ?

ಶ್ರೀ ಸಿ. ಭೈರೇಗೌಡ : ನೀವು ಈ ರೀತಿಯಾಗಿ ಏಕೆ ತಾರತಮ್ಯ ಮಾಡುತ್ತೀರಿ? ಚಿಂತಾಮಣಿ ತಾಲ್ಲೂಕು ಕೂಡ ಕರ್ನಾಟಕದಲ್ಲಿದೆ, ಕೋಲಾರ ಜಿಲ್ಲೆಯಲ್ಲಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾವುದೋ ಕಾರಣಕ್ಕೆ ಆಗಿದ್ದರೆ.....

ಶ್ರೀ ಸಿ. ಭೈರೇಗೌಡ : ಕೆಲವು ತಾಲ್ಲೂಕುಗಳಲ್ಲಿ ಮಂಜೂರಾತಿಯಾಗಿದೆ, ಕೆಲವು ತಾಲ್ಲೂಕುಗಳಲ್ಲಿ ಮಂಜೂರಾತಿಯಾಗಿಲ್ಲ. ಇದಕ್ಕೆ ಏನು ಕಾರಣ? ಈ ರೀತಿಯಾದಂತಹ ತಾರತಮ್ಯವನ್ನು ಏಕೆ ಮಾಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಚಿಂತಾಮಣಿ ತಾಲ್ಲೂಕು ಇಡೀ ಕರ್ನಾಟಕವಲ್ಲ.

ಶ್ರೀ ಸಿ. ಭೈರೇಗೌಡ : ಚಿಂತಾಮಣಿ ತಾಲ್ಲೂಕು ಕೂಡ ಕರ್ನಾಟಕ ರಾಜ್ಯದ ಒಂದು ಭಾಗವಾಗಿದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಚಿಂತಾಮಣಿ ತಾಲ್ಲೂಕಿನಿಂದ ಕಂಬಾಲಪಲ್ಲಿಗೆ ಹೋಗಿದ್ದಾರೆ. ಚಿಂತಾಮಣಿಯಿಂದ ಕಂಬಾಲಪಲ್ಲಿಗೆ ಆದರೂ ರಸ್ತೆಯನ್ನು ಸರಿ ಮಾಡಿಸಿ. ತಾವು ಅದನ್ನಾದರೂ ದಯಮಾಡಿ ಮಾಡಿ.

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ನನಗೆ ಗೊತ್ತಿರುವ ಹಾಗೆ ಚಿಂತಾಮಣಿ ತಾಲ್ಲೂಕಿನದ್ದು ಆಗಿಲ್ಲ. ರಾಜ್ಯದ ಬೇರೆ ಬೇರೆ ತಾಲ್ಲೂಕುಗಳಲ್ಲಿ ಏನೇನು ಆಗಿದೆಯೋ ನನಗೆ ಗೊತ್ತಿಲ್ಲ. ಇದು ಇವತ್ತು ನ್ಯಾಯಾಲಯಕ್ಕೆ ಹೋಗುವಂತಹ ಪರಿಸ್ಥಿತಿ ಏಕೆ ಉದ್ಭವವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಭೈರೇಗೌಡರೇ, ನಿಮ್ಮ ತಾಲ್ಲೂಕಿನ ಬಗ್ಗೆ ಆಗಿದೆಯೋ, ಇಲ್ಲವೋ ಅದನ್ನು ಹೇಳಿ.

ಶ್ರೀ ಸಿ. ಭೈರೇಗೌಡ : ಆಗಿದೆ ಎಂದು ನಾನು ಒಂದು ಸಾರಿಯಲ್ಲ, ಎರಡು ಸಾರಿ ಹೇಳಬೇಕಾ? ಕೋಲಾರ ಜಿಲ್ಲೆಯದು ಆಗಿದೆ ಎಂದು ಎಷ್ಟು ಸಾರಿ ಹೇಳಬೇಕು. ಚಿಂತಾಮಣಿ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಮಂಜೂರಾತಿಯಾಗಿಲ್ಲ. ಕೋಲಾರದ್ದು ಟೆಂಡರ್ ಕರೆದಿದ್ದಾರೆ, ಅದು ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಬಹುಶಃ ಶ್ರೀ ಚೌಡರೆಡ್ಡಿಯವರು ಕೊಟ್ಟಿದ್ದರ ವಿರುದ್ಧ ನೀವು ಕೊಟ್ಟಿರಬಹುದು. ನೀವು ಕೊಟ್ಟಿದ್ದರ ವಿರುದ್ಧ ಅವರು ಕೊಟ್ಟಿರಬಹುದು, ಮತ್ತೆ ಯಾರು ಏನು ಮಾಡುತ್ತಾರೆ.

ಶ್ರೀ ಸಿ. ಭೈರೇಗೌಡ : ಇನ್ನು ನನ್ನ ಕ್ಷೇತ್ರದಲ್ಲಿ 10-15 ಹಳ್ಳಿಗಳಲ್ಲಿ ರಸ್ತೆಗಳು ಅದರೆ ಎಲ್ಲಾ ಮುಗಿಯುತ್ತದೆ. ಅದನ್ನು ಇನ್ನು ಆರು ತಿಂಗಳೊಳಗೆ ಮುಗಿಸಬೇಕು. ಚಿಲ್ಲರೆ ವ್ಯವಹಾರ, ಚಿಲ್ಲರೆ ಕೆಲಸ ಮಾಡುವಂಥಾದ್ದನ್ನು ಬಿಡಬೇಕೆಂದು ನಿಮ್ಮ ಅಧಿಕಾರಿಗಳಿಗೆ ನಿರ್ದಿಷ್ಟವಾದಂತಹ ಸೂಚನೆಯನ್ನು ಕೊಡುವಂಥಾದ್ದು ಸರ್ಕಾರದ ಕರ್ತವ್ಯವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಕೋಲಾರ ಕ್ಷೇತ್ರದ್ದು ಪೂರೈಸಿಲ್ಲವೇ?

ಶ್ರೀ ಸಿ. ಭೈರೇಗೌಡ : ಮತ್ತೆ ಅದನ್ನೇ ಪ್ರಸ್ತಾಪ ಮಾಡುತ್ತೀರಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಭೈರೇಗೌಡರು ಹೇಳಿದ ಹಾಗೆ ಚಿಂತಾಮಣಿ ತಾಲ್ಲೂಕಿನ ಬಗ್ಗೆ ಶ್ರೀ ಚೌಡರೆಡ್ಡಿಯವರ ಮೇಲೆ ಪ್ರಹಾರ ಮಾಡುವಂಥಾದ್ದೆ ಸರ್ಕಾರದ ಕೆಲಸವಾಗಿದೆ. ಅವರು ಅಧಿಕಾರಿಗಳ ಮೇಲೆ ಹೇಳುತ್ತಾರೆ, ಪಾಪ, ಅವರು ಏನು ಮಾಡುತ್ತಾರೆ. ನಿಮ್ಮ ಸರ್ಕಾರದವರು, ಮಂತ್ರಿಗಳು ಹೇಳಿದ ಹಾಗೆ ಲೋಕಸಭಾ ಸದಸ್ಯರು ಕೈ ಹಾಕಿ ಇದೆಲ್ಲವನ್ನು ಮಾಡುತ್ತಿರುವಂಥಾದ್ದು. ಇದು ಇವತ್ತು ಹೈಕೋರ್ಟಿಗೆ ಹೋಗುವಂತಹ ಪರಿಸ್ಥಿತಿಗೆ ಬಂದಿದೆ. ತಾವು ಇದನ್ನು ಗಂಭೀರವಾಗಿ ಯೋಚನೆ ಮಾಡಿ. ಇದಕ್ಕೆ ಸರ್ಕಾರ ಕೈ ಹಾಕುವಂಥಾದ್ದು ಸರಿಯಲ್ಲ. ರಾಜಕೀಯ ಮಾಡಬೇಕೆಂದರೆ ಬೇರೆ ಜನರನ್ನು ಆಕರ್ಷಣೆ ಮಾಡಲಿ, ಅದನ್ನು ಬಿಟ್ಟು ಮಾನ್ಯ ಚೌಡರೆಡ್ಡಿಯವರಿಗೆ ಇಲ್ಲದಂತಹ ಕೆಲಸವನ್ನು ಕೊಡುವಂಥಾದ್ದು ಆಗುತ್ತಿದೆ, ಅದು ಮಾನ್ಯ ಮಂತ್ರಿಯವರಿಂದ ಆಗುತ್ತದೆ, ಬೇರೆಯವರಿಂದ ಅಲ್ಲ, ಇದು ನಿಲ್ಲಬೇಕು. ಇಲ್ಲಿ ಅಧಿಕಾರಿಗಳ ಬಗ್ಗೆ ಹೇಳುತ್ತಾರೆ, ಪಾಪ, ಅವರು ಏನು ಮಾಡುತ್ತಾರೆ. ಅವರು ನಾವು ನೀವು ಹೇಳಿದ ಹಾಗೆ ಮಾಡುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಏನು ತೊಂದರೆ ಇಲ್ಲ, ಚಿಂತಾಮಣಿ ತಾಲ್ಲೂಕಿನಲ್ಲಿ ಇನ್ನು ತೊಂದರೆ ಇದೆ. ಅದನ್ನು ನೀಗಿಸಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮ ಬಹಳಷ್ಟು ಬೆಳೆಯುವುದಕ್ಕೆ ಅವಕಾಶವಿದೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳು ದೊರೆಯುದಿರುವ ಬಗ್ಗೆ

ಶ್ರೀ ಯು.ಆರ್. ಸಭಾಪತಿ : ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸಲಾಗಿದೆ. ಆದರೆ ಅದರ ಪ್ರತಿಗಳು ಇದುವರೆಗೂ ಬಂದಿಲ್ಲ. ನಾನು ತಮಗೂ ಸಹ ನೋಟೀಸ್ ಕೊಟ್ಟಿದ್ದೇನೆ. ಇದು ನಡವಳಿಕೆಯಲ್ಲಿ ಹೋಗುತ್ತದೆ, ಈ ರೀತಿಯಾಗಿ ದಿನನಿತ್ಯ ಆಗುತ್ತಿದೆ. ಇದನ್ನು ಸದನದಲ್ಲಿ ಯಾವಾಗ ಮಂಡಿಸುತ್ತಾರೆ, ಆಗಲೇ ನಮಗೆ ಅದರ ಪ್ರತಿಗಳು ಬರಬೇಕಲ್ಲವೇ?